ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 11 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 294 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಶ್ರೀ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳಿಂದ ಪೋಸ್ಟರ್ ಬಿಡುಗಡೆ

ಫೆ.14ರಂದು ಉಚಿತ ಸಾಮೂಹಿಕ ಅಕ್ಷರಭ್ಯಾಸ



ಮೈಸೂರು, ಫೆ. 10– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಫೆ. 14 ರಂದು ಕೆಎಂಪಿಕೆ ಟ್ರಸ್ಟ್ ವತಿಯಿಂದ ವಿಶ್ವೇಶ್ವರನಗರದ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ನಡೆಯಲಿರುವ ಸಾಮೂಹಿಕ ಅಕ್ಷರಭ್ಯಾಸ ಹಾಗೂ ಸರಸ್ವತಿ ಪೂಜೆಯ ಪೋಸ್ಟರ್ ಅನ್ನು ಮೇಲುಕೋಟೆಯ ಶ್ರೀ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳು ಬಿಡುಗಡೆ ಮಾಡಿದರು.

ಈ ವೇಳೆ ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಮಾತನಾಡಿ, ಎಲ್ಲಾ ಜನಾಂಗದವರಿಗೂ ಉಚಿತ ಸಾಮೂಹಿಕ ಅಕ್ಷರಭ್ಯಾಸ ಹಾಗೂ ಸರಸ್ವತಿ ಪೂಜೆ ಫೆ.14ರ ಬುಧವಾರ ಬೆಳಗ್ಗೆ 8 ರಿಂದ 10.30ರವರೆಗೆ ನಡೆಯಲಿದೆ ಎಂದರು.

ಅಕ್ಷರಭ್ಯಾಸವನ್ನು ಮಾಡಲಿಚ್ಛಿಸುವ ಮಕ್ಕಳ ಪೋಷಕರು ದೂರವಾಣಿ 9880752727/7829067769 ನೋಂದಾಯಿಸಿಕೊಳ್ಳಬಹುದು. ಅಕ್ಷರಭ್ಯಾಸ ಮಾಡಿಸುವವರ ಗಮನಕ್ಕೆ ಪ್ಲೇಟ್–ಬಳಪ ನಮ್ಮ ಟ್ರಸ್ಟ್ ವತಿಯಿಂದ ಉಚಿತವಾಗಿ ಪ್ರಸಾದ ರೂಪದಲ್ಲಿ ನೀಡಲಾಗುವುದು. ಫೆ. 13ರಂದು ನೋಂದಣಿಗೆ ಕಡೆಯ ದಿನವಾಗಿದೆ ಎಂದು ತಿಳಿಸಿದರು

ಮೇಲುಕೋಟೆಯ ಚೆಲುವರಾಯಸ್ವಾಮಿ ದೇವಸ್ಥಾನದ ಪ್ರಥಮ ಸ್ಥಾನಿಕರು ಕೆ.ಎಸ್.ನಾರಾಯಣ ಅಯ್ಯಂಗಾರ್, ಜೀವದಾರರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್. ಯೋಗ ನರಸಿಂಹನ್, ಪುಟ್ಟಸ್ವಾಮಿ, ಹೆಚ್‌ವಿಎಲ್‌ಎನ್ ಆಚಾರ್, ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಕೃಷ್ಣಮೂರ್ತಿ ಇನ್ನಿತರರು ಹಾಜರಿದ್ದರು.

ರಾಜ್ಯಮಟ್ಟದ ಪುರುಷರ ವಾಲಿಬಾಲ್ ಪಂದ್ಯಾವಳಿ

ಮೈಸೂರು, ಫೆ. 10– ಶ್ರೀ ಬಸವೇಶ್ವರ ಯುವಕರ ಸಂಘದಿಂದ ಕೂಡನಹಳ್ಳಿ ಗ್ರಾಮದಲ್ಲಿ ಫೆ. 17 ಮತ್ತು 18 ರಂದು ರಾಜ್ಯಮಟ್ಟದ ಪುರುಷರ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ವಿಜೇತ ತಂಡಗಳಿಗೆ ನಗದು ಬಹುಮಾನ ಮತ್ತು ಆಕರ್ಷಕ ಟ್ರೋಫಿ ನೀಡಲಾಗುವುದು. ಆಸಕ್ತ ತಂಡಗಳು ಫೆ. 15 ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9739737838, 7829848464 ಸಂಪರ್ಕಿಸಬಹುದು.



ಚಾಮರಾಜನಗರದ ಲೋಕಸಭಾ ಕ್ಷೇತ್ರದ ಆಕಾಂಕ್ಷಿ ಸುನಿಲ್ ಬೋಸ್ ಸುತ್ತೂರು ಮಠಕ್ಕೆ ಭೇಟಿ ನೀಡಿ ಸುತ್ತೂರು ಶ್ರೀಗಳಿಂದ ಆಶೀರ್ವಾದ ಪಡೆದರು. ಚಿತ್ರದಲ್ಲಿ ಶಾಸಕ ತನ್ವೀರ್ ಸೇಠ್, ಮೈಓಲ್ಡ್ ನಿರ್ದೇಶಕ ಚೆಲುವರಾಜು, ಮತ್ತಿತರರು ಇದ್ದಾರೆ.

ಶಿಕ್ಷಣ ಮನುಷ್ಯನ ಮೂಲಭೂತ ಶಕ್ತಿ

ಕೇನ್ಸ್ ಟೆಕ್ನಾಲಜೀಸ್‌ನ ಮುಖ್ಯ ಹಣಕಾಸು ಅಧಿಕಾರಿ ಜೈರಾಮ್ ಸಂಪತ್ ಅಭಿಮತ




ಮೈಸೂರು, ಫೆ. 10–ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಂಬಿಎ ಹಾಗೂ ಎಂ.ಟೆಕ್ ಪದವಿ ತರಗತಿಗಳ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿತ್ತು.

ಈ ವೇಳೆ ಕೇನ್ಸ್ ಟೆಕ್ನಾಲಜೀಸ್ ಸಂಸ್ಥೆಯ ಮುಖ್ಯ ಹಣಕಾಸು ಅಧಿಕಾರಿ ಜೈರಾಮ್ ಸಂಪತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನೈಜ ಸಾಮರ್ಥ್ಯವನ್ನು ಗುರುತಿಸುವುದೇ ಸಾಧನೆಯ ನಿಜವಾದ ಅರ್ಥ ಎಂದರು.

ನೀವು ಯಾವುದೇ ದೇಶ, ಧರ್ಮ, ಜಾತಿ ಪಂಗಡಗಳಿಗೆ ಸೇರಿರಲಿ, ಶಿಕ್ಷಣ ಒಂದು ಮೂಲಭೂತ ಶಕ್ತಿಯಾಗಿದೆ. ಆ ಕಾರಣದಿಂದ ತಮ್ಮ ಶಿಕ್ಷಣವನ್ನು ನಿರ್ದಿಷ್ಟ ಗುರಿಯೆಡೆಗೆ ಹೊಯ್ಯಿರಿ. ಇಂದು ಸ್ನಾತಕೋತ್ತರ ಹಾಗೂ ಉನ್ನತ ಶಿಕ್ಷಣದಲ್ಲಿ ಯಶಸ್ವಿಯಾಗಬೇಕಾದರೆ ಭವಿಷ್ಯದ ಗುರಿಯ ಸ್ಪಷ್ಟತೆ ಹಾಗೂ ದೃಢ ನಿರ್ಧಾರ ಅತೀ ಅವಶ್ಯಕ ಎಂದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಉಪಾಧ್ಯಕ್ಷ ಬಿ.ಶಿವಲಿಂಗಪ್ಪ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್ ವಿದ್ಯಾರ್ಥಿಗಳನ್ನು ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು. ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ ಬಿ. ಸದಾಶಿವೇಗೌಡ, ವಿಭಾಗೀಯ ಮುಖ್ಯಸ್ಥರಾದ ಪ್ರೊ.ಪಿ.ಎಸ್.ವಿ.ಬಾಲಾಜಿರಾವ್, ಪ್ರೊ ಪೂಜಾ ಎಂ.ಆರ್, ಪ್ರೊ.ಆರ್.ಜಗದೀಶ್, ಪ್ರೊ.ಜಿ.ವಿ.ನವೀನ್ ಪ್ರಕಾಶ್, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಇನ್ನಿತರರು ಭಾಗವಹಿಸಿದ್ದರು.

ನಿಧನ




ಜ಼ಹೀದುಲ್ಲಾ ಖಾನ್

ಮೈಸೂರು, ಫೆ. 10– ಮೈಸೂರು ಟಿಪ್ಪು ಟ್ರಸ್ಟ್ ಅಧ್ಯಕ್ಷ ಮತ್ತು ಪ್ರಸಿದ್ಧ ಖವ್ವಾಲ್ ಕಲಾವಿದ ಜ಼ಹೀದುಲ್ಲಾ ಖಾನ್ (62) ಶುಕ್ರವಾರ ನಿಧನರಾದರು. ಜ಼ಹೀದುಲ್ಲಾ ಖಾನ್ ಅವರು ರಾಜ್ಯ ಮತ್ತು ಅಂತರ ರಾಜ್ಯಗಳಲ್ಲಿ ಅನೇಕ ಖವ್ವಾಲಿ, ಗಜ಼ಲ್ ಮತ್ತು ಮೆಹಫಿಲ್ ಸಮಾಖಾನಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದರು. ಮೃತರು ಪತ್ನಿ, 3 ಪುತ್ರಿಯರು, ಇಬ್ಬರು ಪುತ್ರರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಈ ಸಂಬಂಧ ಶನಿವಾರ ಟಿಪ್ಪು ಟೌನ್, ರಮ್ಮನಹಳ್ಳಿ ರಸ್ತೆ, ತನ್ವೀರ್ ಸೇಠ್ ನಗರದ ಪಕ್ಕದ ಟಿಪ್ಪು ಸುಲ್ತಾನ್ ಮಸೀದಿಯಲ್ಲಿ ನಮಾಜ಼್–ಎ–ಜನಾಜ಼ ನಡೆದು, ನಂತರ ಮೈಸೂರಿನ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪದ್ಮಾ ವಿಜಯಕುಮಾರ್



ಮೈಸೂರು, ಫೆ. 10– ಮೈಸೂರಿನ ಗೌರಿಶಂಕರನಗರದ ನಿವಾಸಿ ದಿವಂಗತ ಆಲೂರು ವೀರಭದ್ರಪ್ಪನವರ ಪುತ್ರಿ ಪದ್ಮಾ ವಿಜಯಕುಮಾರ್ (58) ಶುಕ್ರವಾರ ಹೃದಯಾಘಾತದಿಂದ ನಿಧನರಾದರು.

ಮೃತರು ಪತಿ ವಿಜಯಕುಮಾರ್ ಮಾಮ್ಮಿಗಟ್ಟಿ, ಪುತ್ರಿ ಡಾ. ಕುಶಾಲ ವಿಜಯಕುಮಾರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಉತ್ತನಹಳ್ಳಿಯ ವೀರಶೈವ ರುದ್ರಭೂಮಿಯಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಪಿ.ಜಿ.ಆಂಬ್ರೋಸ್

ಮೈಸೂರು, ಫೆ.10–ಮೈಸೂರಿನ ರಾಮಕೃಷ್ಣನಗರ ನಿವಾಸಿ ಪಿ.ಜಿ.ಆಂಬ್ರೋಸ್(88) ಅವರು ಶುಕ್ರವಾರ ರಾತ್ರಿ ನಿಧನರಾದರು. ಅವರು ಇಬ್ಬರು ಪುತ್ರಿಯರು ಓರ್ವ ಪುತ್ರ, ಅಳಿಯಂದಿರು, ಸೊಸೆ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇಂದು ಸಂಜೆ ಮಹದೇವಪುರ ರಸ್ತೆಯಲ್ಲಿರುವ ಸಿಎಸ್‌ಐ ಸೆಮೆಟ್ರಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಡಂಚಿನ ಗ್ರಾಮಗಳಲ್ಲಿ 'ಕಾಡ್ಗಿಚ್ಚು–ತಡೆ' ಕುರಿತು ಜಾಗೃತಿ ಅಭಿಯಾನ

● ಕಿಡಿಗೇಡಿಗಳ ಕೃತ್ಯ ತಡೆಗೆ ಸಹಕರಿಸುವುದಾಗಿ ಸ್ಥಳೀಯರ ಭರವಸೆ ● ಹಾಡಿ ಜನರ ವಿಶ್ವಾಸಗಳಿಸಲು ಮುಂದಾದ ಅರಣ್ಯ ಇಲಾಖೆ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮ ಮದ್ದೂರು ಹಾಡಿಯಲ್ಲಿ 'ಬೆಂಕಿ ತಡೆ' ಕುರಿತು ಜಾಗೃತಿ ಅಭಿಯಾನ ನಡೆಸಲಾಯಿತು.

ಮೈಸೂರು,ಫೆ.10(ಎಂಟಿವೈ)– ಬೇಸಿಗೆಯಲ್ಲಿ ಕಿಡಿಗೇಡಿಗಳ ಕೃತ್ಯದಿಂದ ಕಾಡ್ಗಿಚ್ಚು ಸಂಭವಿಸಿ ಅರಣ್ಯ ಸಂಪತ್ತು ನಾಶ ತಡೆಗೆ ಅರಣ್ಯ ಇಲಾಖೆ ವಿಭಿನ್ನ ಕಾರ್ಯಕ್ರಮ ರೂಪಿಸುತ್ತಿದ್ದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮ ಹಾಗೂ ಹಾಡಿಗಳಲ್ಲಿ 'ಕಾಡ್ಗಿಚ್ಚು–ತಡೆ'ಗಾಗಿ ಜಾಗೃತಿ ಕಾರ್ಯಕ್ರಮ ಆಯೋಜಿಸಿ ವಿಶ್ವಾಸ ಗಳಿಸಲಾಗುತ್ತಿದೆ.

ಬಿಸಿಲಿನ ಬೇಗೆಯಿಂದಾಗಿ ಬೇಸಿಗೆ ಆರಂಭಕ್ಕೂ ಮುನ್ನವೇ ಅರಣ್ಯ ಪ್ರದೇಶ ಒಣಗಲಾರಂಭಿಸಿದ್ದು, ಎಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದೆ. ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ, ಅತಿ ಹೆಚ್ಚು ಹುಲಿ, ಆನೆ, ಚಿರತೆ ಸೇರಿದಂತೆ ಇನ್ನಿತರ ಪ್ರಾಣಿ ಸಂಕುಲವನ್ನು ಹೊಂದಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವನ್ನು ಕಾಡ್ಗಿಚ್ಚಿನಿಂದ ಕಾಪಾಡುವುದು ಸಿಬ್ಬಂದಿಗಳಿಗೆ ಸವಾಲಿನ ಕೆಲಸವಾಗಿದೆ. ಈ ನಿಟ್ಟಿನಲ್ಲಿ ಕಾಡಂಚಿನ ಗ್ರಾಮ ಮತ್ತು ಹಾಡಿಗಳ ಜನರ ಸಹಕಾರ ಪಡೆಯಲು ಬಂಡೀಪುರದ ಅರಣ್ಯಾಧಿಕಾರಿಗಳು ಮುಂದಾಗಿದ್ದು, ವಲಯವಾರು ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡ ಕಾಡಂಚಿನ ಗ್ರಾಮಗಳ ಸಹಕಾರ ಕೋರುವ ಅಭಿಯಾನ ನಡೆಸುತ್ತಿದ್ದಾರೆ.

ಅರಣ್ಯ ಪ್ರದೇಶದಲ್ಲಿ ಈಗಾಗಲೇ ಫೈರ್‌ಲೈನ್, ವ್ಯೂವ್‌ಲೈನ್ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗಿದ್ದು, ಬೆಂಕಿ ಪ್ರಕರಣ ಪತ್ತೆಗೆ ಸಿಬ್ಬಂದಿಗಳ ಗಸ್ತು ಹೆಚ್ಚಿಸಲಾಗಿದೆ. ಬೆಂಕಿ ತಡೆಗಾಗಿ 500 ಬೆಂಕಿ ರಕ್ಷಕರನ್ನು ನಿಯೋಜಿಸಲಾಗಿದ್ದು, ಅವರೊಂದಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ 300ಕ್ಕೂ ಹೆಚ್ಚು ಮಂದಿ ಸಾಥ್ ನೀಡುತ್ತಿದ್ದಾರೆ. ಕಳೆದ ಎರಡು ವರ್ಷದಿಂದ ಬಂಡೀಪುರ ಅರಣ್ಯದಲ್ಲಿ ಶೂನ್ಯ ಬೆಂಕಿ ಪ್ರಕರಣವಿದ್ದು, ಈ ಬಾರಿ ದೊಡ್ಡಮಟ್ಟದ ಸವಾಲು ಎದುರಾಗಿದೆ. ಅದಕ್ಕಾಗಿ ಎಲ್ಲಾ ವಲಯಗಳ ಸಿಬ್ಬಂದಿಗಳು ಹೈ ಅಲರ್ಟ್ ಆಗಿದ್ದಾರೆ.

2020ರ ಹಿಂದೆ ಬಂಡೀಪುರ ಅರಣ್ಯದ ಯಾವ ಯಾವ ಭಾಗದಲ್ಲಿ ಬೆಂಕಿ ಪ್ರಕರಣ ಸಂಭವಿಸಿದೆ ಎಂದು ಪಟ್ಟಿ ತಯಾರಿಸಿಕೊಳ್ಳಲಾಗಿದ್ದು, ಯಾವ ಭಾಗದಿಂದ ಯಾವ ಭಾಗಕ್ಕೆ ಗಾಳಿ ಬೀಸುತ್ತದೆ ಎಂಬ ಮಾಹಿತಿ ಕಲೆಹಾಕಿ ದಾಖಲೀಕರಿಸಲಾಗಿದೆ. ಈಗಾಗಲೇ ಅರಣ್ಯ ಇಲಾಖೆಗೆ ಸಾಥ್ ನೀಡಲು ಅಗ್ನಿಶಾಮಕ ಸಿಬ್ಬಂದಿಗಳ ತಂಡ ವಾಹನದೊಂದಿಗೆ ಬಂಡೀಪುರದ ಆಯ್ದ ಪ್ರದೇಶದಲ್ಲಿ ಬೀಡು ಬಿಟ್ಟಿದೆ. ಈ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಂಡ ಬಳಿಕ ಇದೀಗ ಜಾಗೃತಿ ಮೂಡಿಸಿ, ವಾಗ್ದಾನ ಪಡೆಯುವ ಕಾರ್ಯದಲ್ಲಿ ಅರಣ್ಯಾಧಿಕಾರಿಗಳು ಮುಂದಾಗಿದ್ದಾರೆ.

ಅರಣ್ಯ ಸಂಪತ್ತು ಸಂರಕ್ಷಣೆಯಲ್ಲಿ ಬುಡಕಟ್ಟು ಸಮುದಾಯದ ಪಾತ್ರ ಬಹುಮುಖ್ಯವಾಗಿರುವುದರಿಂದ ಸ್ಥಳೀಯ ಜನರ ಸಹಕಾರದಿಂದಲೇ ಕಾಡ್ಗಿಚ್ಚು ತಡೆ ಹಾಗೂ ಅರಣ್ಯ ಅಪರಾಧ ತಡೆಗಟ್ಟಲು ಕಾರ್ಯಕ್ರಮ ರೂಪಿಸಲಾಗಿದೆ. ಅದಕ್ಕಾಗಿ 'ಕಾಡ್ಗಿಚ್ಚು–ತಡೆ' ಜಾಗೃತಿ ಅಭಿಯಾನ ನಡೆಸಲಾಗುತ್ತಿದ್ದು, ಹಾಡಿ ಹಾಗೂ ಗ್ರಾಮದ ಮುಖಂಡರ ಸಹಕಾರ ಪಡೆಯಲಾಗುತ್ತಿದೆ. ಇಂದು ಮದ್ದೂರು ವಲಯದ ಮದ್ದೂರು ಕಾಲೋನಿಯಲ್ಲಿ ನಡೆದ ಜಾಗೃತಿ ಅಭಿಯಾನದಲ್ಲಿ ಬುಡಕಟ್ಟು ಸಮುದಾಯ ಜನರಿಗೆ ಕಾಡ್ಗಿಚ್ಚು ತಡೆಗೆ ಸಹಕಾರ ನೀಡುವಂತೆ ಕೋರಲಾಯಿತು.

ಈ ವೇಳೆ ಮದ್ದೂರು ಕಾಲೋನಿಯ ಜನರು ಬಂಡೀಪುರ ಅರಣ್ಯ ನಮ್ಮ ಆಸ್ತಿ, ಅದರ ರಕ್ಷಣೆಗೆ ಸದಾ ಶ್ರಮಿಸುತ್ತೇವೆ ಅಪರಿಚಿತರು ಬಂದರೆ ಮಾಹಿತಿ ನೀಡುತ್ತೇವೆ. ಅರಣ್ಯ ಪ್ರದೇಶಕ್ಕೆ ಯಾರೇ ಹೋದರೂ ಅವರ ಚಟುವಟಿಕೆಯನ್ನು ಗಮನಿಸಿ ಮಾಹಿತಿ ನೀಡುತ್ತೇವೆ. ಅರಣ್ಯ ಪ್ರದೇಶ ನಮಗೆ ದೇವರಿದ್ದಂತೆ. ನಮ್ಮ ದೇವರನ್ನು ನಾವು ಕಾಪಾಡಿಕೊಳ್ಳುತ್ತೇವೆ ಎಂದು ವಾಗ್ದಾನ ನೀಡಿದ್ದಾರೆ.

ಈ ಸಂದರ್ಭದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಎಸಿಎಫ್ ಜಿ.ರವೀಂದ್ರ ಆರ್‌ಎಫ್‌ಓ ಬಿ.ಎಂ. ಮಲ್ಲೇಶ್, ಬುಡಕಟ್ಟು ಸಮುದಾಯ ಮುಖಂಡರಾದ ಡಾ.ರತ್ನಮ್ಮ, ಚಲುವರಾಜು, ಡಿಆರ್‌ಎಫ್‌ಓಗಳಾದ ಎಂ.ದೇವರಾಜ್, ಪ್ರವೀಣ್ ಹಂಚಿನಾಳ್, ರವಿ ಸಂಗೂರ್ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಅರಣ್ಯ ಸಂರಕ್ಷಣೆ ಕುರಿತಂತೆ ಪ್ರತಿಜ್ಞೆ ಬೋಧಿಸಲಾಯಿತು.

> "ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವನ್ನು ಬೇಸಿಗೆಯಿಂದ ಸಂರಕ್ಷಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದೀಗ ಕಾಡಂಚಿನ ಗ್ರಾಮ ಮತ್ತು ಹಾಡಿಗಳಲ್ಲಿ ಎರಡನೇ ಹಂತದಲ್ಲಿ ಜಾಗೃತಿ ಅಭಿಯಾನ ನಡೆಸಲಾಗುತ್ತಿದೆ. ಅರಣ್ಯ ಸಂರಕ್ಷಣೆ ವಿಚಾರದಲ್ಲಿ ಹುಲಿ ಮತ್ತು ಆದಿವಾಸಿ ಜನರು ಎರಡು ಕಣ್ಣುಗಳಿದ್ದಂತೆ. ಆ ಕಾರಣದಿಂದ ಬುಡಕಟ್ಟು ಸಮುದಾಯ ಹಾಗೂ ಕಾಡಂಚಿನ ಗ್ರಾಮಗಳ ಜನರ ಸಹಕಾರ ಪಡೆದು ಕಾಡ್ಗಿಚ್ಚು ತಡೆ ಕಾರ್ಯಕ್ರಮ ರೂಪಿಸಲಾಗಿದೆ. ಸ್ಥಳೀಯರಲ್ಲಿ 'ಬಂಡೀಪುರ ನಮ್ಮದು' ಎಂಬ ಭಾವನೆ ಮೂಡಿದ್ದು, ಭಾವನಾತ್ಮಕವಾಗಿ ಬಂಡೀಪುರವನ್ನು ನೋಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅರಣ್ಯ ಸಂರಕ್ಷಣೆಗೆ ಎಲ್ಲರೂ ಸಹಕಾರ ಅಗತ್ಯ.
>
> – ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.2.2024 ಭಾನುವಾರ, ಮಳೆ ನಕ್ಷತ್ರ: ಧನಿಷ್ಠ 6.2.2024 ರಿಂದ 19.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಶತಭಿಷ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಸಾಹಿತ್ಯ ಅಕಾಡೆಮಿ, ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್** : ವಲ್ಲಿ ವಗ್ಗ (ಡಿಸೋಜಾ) ಅವರೊಂದಿಗೆ ಕಥಾಸಂಧಿ ಕಾರ್ಯಕ್ರಮ, ವಿಶೇಷಚೇತನ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಕೊಂಕಣಿ ಭವನ, ವಿಜಯನಗರ 2ನೇ ಹಂತ, ಬೆಳಗ್ಗೆ 8.30 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್** : ಶ್ರೀ ಪುರಂದರದಾಸರ ಮತ್ತು ತ್ಯಾಗರಾಜರ ಆರಾಧನೆ ಮತ್ತು ಸಭೆ ವಾರ್ಷಿಕೋತ್ಸವ, ಉಂಛವೃತ್ತಿ, ಮೆರವಣಿಗೆ, 37ನೇ ವಾರ್ಷಿಕೋತ್ಸವ, ಸಾಧಕರಿಗೆ ಸನ್ಮಾನ, ಪಂಚರತ್ನ ಕೃತಿಗಳ ಗೋಷ್ಠಿ ಗಾಯನ, ಮುಖ್ಯ ಅತಿಥಿಗಳು : ಪ್ರೊ. ರಾ. ವಿಶ್ವೇಶ್ವರನ್, ಡಾ. ಸಿ.ಜಿ. ನರಸಿಂಹನ್, ಸ್ಥಳ: ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಬೆಳಗ್ಗೆ 7 ರಿಂದ.

■ **ಕ್ರೀಡಾ ಭಾರತಿ, ಜಿಲ್ಲಾ ಘಟಕ** : ಬ್ಯಾಡ್ಮಿಂಟನ್ ಪಂದ್ಯಾವಳಿ, ಸ್ಥಳ: ಬೋಗಾದಿಯ ಸ್ಪೋರ್ಟ್ಸ್ ಸ್ಪಾರ್ಕ್, ಬೆಳಗ್ಗೆ 9 ರಿಂದ.

■ **ದೇವಾಲಯ ಸಂವರ್ಧನಾ ಸಮಿತಿ–ಕರ್ನಾಟಕ** : ಹಿಂದೂ ದೇವಾಲಯ ಭಕ್ತ ಮಂಡಳಿ ಸದಸ್ಯರ ಚಿಂತನಾ ಸಭೆ, ಉಪಸ್ಥಿತರು : ಕನ್ನಡದ ಪೂಜಾರಿ ಹಿರೇಮಗಳೂರು ಕಣ್ಣನ್, ದೇವಾಲಯ ಸಂವರ್ಧನಾ ಸಮಿತಿ ಸಂಯೋಜಕ ಮನೋಹರ ಮಠದ್, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ಬೆಳಗ್ಗೆ 9 ರಿಂದ.

■ **ನಿರ್ಮಾಯ ಫೌಂಡೇಷನ್, ಸ್ವಚ್ಛಂದ ಗ್ರೂಪ್ ಮತ್ತು ಸುರಕ್ಷಾ ಫೌಂಡೇಷನ್** : ಹೆರಿಟೇಜ್ ಕಪ್–2024, ದೃಷ್ಟಿಹೀನ ಮಹಿಳಾ ಕ್ರಿಕೆಟ್ ಪಂದ್ಯಾವಳಿ, ಮುಖ್ಯ ಅತಿಥಿಗಳು : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಶೇಖರ್ ನಾಯಕ್, ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ, ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ. ಎನ್. ಚಂದ್ರಶೇಖರ್, ಭಾಸ್ಕರ್ ಕಳಲೆ, ಸ್ಥಳ: ಪವಿಲಿಯನ್ ಮೈದಾನ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಫ್ಯಾಟಿ ಲಿವರ್ ತೊಂದರೆ ಮತ್ತು ಪಾರ್ಕಿನ್‌ಸನ್ಸ್ ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ

■ **ರಾಮ್‌ಸನ್ಸ್ ಬೊಂಬೆ ಮನೆ** : ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಮೈಸೂರು ಹಾಸ್ಪಿಟಲ್** : ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕರಾದ ರಿಜ್ವಾನ್ ಹರ್ಷದ್, ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ಅಬ್ದುಲ್ ಅಜೀಜ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್, ಮಾಜಿ ಮೇಯರ್ ಆಯೂಬ್ ಖಾನ್, ಪಾಲಿಕೆ ಸದಸ್ಯರಾದ ಬಶೀರ್ ಅಹಮದ್, ಅಯಾಜ್ ಪಾಷಾ, ಮಾಜಿ ಮೇಯರ್ ಅಫ್ತಾಬ್ ಬೇಗ್, ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಎನ್. ಸುಧಾಕರ್, ಸ್ಥಳ: ಮಹದೇವಪುರ ರಸ್ತೆ, ಉದಯಗಿರಿ ಸಮೀಪ, ಬೆಳಗ್ಗೆ 10ಕ್ಕೆ.

■ **ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ** : ರಾಜ್ಯ ಸರ್ಕಾರದ ಪ್ರತಿಷ್ಠಿತ ಕುಮಾರವ್ಯಾಸ ಪ್ರಶಸ್ತಿಗೆ ಭಾಜನರಾದ ಹಿರಿಯ ಗಮಕಿ ಕೃಷ್ಣಗಿರಿ ರಾಮಚಂದ್ರ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಮೇಲುಕೋಟೆ ವಂಗೀಪುರ ನಂಬೀ ಮಠದ ಶ್ರೀ ಇಳೈ ಆಳ್ವಾರ್‌ಸ್ವಾಮೀಜಿ ಉದ್ಘಾಟನೆ : ಕರ್ನಾಟಕ ಮುಕ್ತ ವಿವಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಜ್ಯೋತಿಶಂಕರ್, ಅಧ್ಯಕ್ಷತೆ : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಹಿರಿಯ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಹಿರಿಯ ನೃತ್ಯ ಕಲಾವಿದೆ ಡಾ.ತುಳಸಿ ರಾಮಚಂದ್ರ, ಹಿರಿಯ ಲೇಖಕ ಬಿ.ಪಿ.ಅಶ್ವತ್ಥನಾರಾಯಣ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ

■ **ವ್ಯವಸ್ಥಾಪಕರು** : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸೋಮಣ್ಣ, ಪ್ರೊ. ಸಿ.ಆರ್. ಚಂದ್ರಶೇಖರ್ ಅವರಿಗೆ ಸನ್ಮಾನ ಸಮಾರಂಭ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ, ನಂಜುಮಳಿಗೆ, ಬೆಳಗ್ಗೆ 10.30ಕ್ಕೆ.

■ **ಅಯ್ಯನಾರ್ ಸಂಗೀತ ಕಾಲೇಜು** : ಶ್ರೀ ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ, ಶ್ರೀ ತ್ಯಾಗರಾಜರ ಪಂಚರತ್ನ ಕೃತಿ ಸಭಾ ಗಾಯನ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪ ರಾಮಮಂದಿರ, ಬೆಳಗ್ಗೆ 11 ರಿಂದ.

■ **ನಾಗಾ ಮಾರ್ಷಲ್ ಆರ್ಟ್ಸ್ ಅಕಾಡೆಮಿ** : ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್‌ಶಿಪ್, ಸಾನ್ನಿಧ್ಯ : ಬಂತೆ ಬೋಧಿರತ್ನ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಮಾಜಿ ಶಾಸಕ ಅರುಣ್ ಮಾಚಯ್ಯ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕ್ರೀಡಾ ಇಲಾಖೆ ನಿರ್ದೇಶಕ ಡಾ. ವೆಂಕಟೇಶ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಾ. ಮರಿಸ್ವಾಮಿ, ಶ್ರೀಮತಿ ಮಾಲವಿಕ ಗುಬ್ಬಿವಾಣಿ, ಮಲ್ಲಿಕಾರ್ಜುನ, ಎನ್.ಜಿ. ಶಿವದಾಸ್, ಎನ್. ಶಂಕರ್, ದೀಪಕ್ ಕುಮಾರ್, ಸ್ಥಳ: ಯೋಗಾ ಸಭಾಂಗಣ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿವಿ, ಬೆಳಗ್ಗೆ 11.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್** : ಕೆ.ಎಸ್. ನರಸಿಂಹಸ್ವಾಮಿ ಹಾಗೂ ದ.ರಾ. ಬೇಂದ್ರೆ ನೆನಪಿನೋತ್ಸವ, ದಾಂಪತ್ಯ ಕವಿಗೋಷ್ಠಿ ಹಾಗೂ ಬೇಂದ್ರೆ ಗೀತ ಗಾಯನ ಕಾರ್ಯಕ್ರಮ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್, ಅಧ್ಯಕ್ಷತೆ : ಕವಯತ್ರಿ ಡಾ. ಕೆ.ಎನ್. ಲಾವಣ್ಯ ಪ್ರಭಾ, ಭಾವಚಿತ್ರಕ್ಕೆ ಪುಷ್ಪಾರ್ಚನೆ : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಸಾಹಿತಿ ಡಾ. ಕೆ. ಲೀಲಾಪ್ರಕಾಶ್, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಸಾಹಿತಿ ಶ್ರೀಮತಿ ಬಿ.ಆರ್. ನಾಗರತ್ನ, ಕವಿ ಶ್ರೀಮತಿ ಕೆ.ಟಿ. ಶ್ರೀಮತಿ, ಸ್ನೇಹ ಸಿಂಚನ ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಮ.ನ. ಲತಾಮೋಹನ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.

■ **ಆರ್ಟ್ ಆಫ್ ಲಿವಿಂಗ್**: ಧ್ಯಾನದ ಪರಿಚಯ ಕಾರ್ಯಾಗಾರ, ಸ್ಥಳ: #8, 2ನೇ ಮಹಡಿ, ನಳಪಾಕ್ ಪಕ್ಕ, ವಿಶ್ವಮಾನವ ಜೋಡಿ ರಸ್ತೆ, ಸರಸ್ವತಿಪುರಂ, ಸಂಜೆ 5.30 ರಿಂದ 6.30 ರವರೆಗೆ

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣ ಆರಾತ್ರಿಕ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ** : ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಕಾಕನಕೋಟೆ ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ, ಸ್ಥಳ: ವನರಂಗ ಬಯಲು ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಎನ್.ಆರ್. ಲಲಿತಾಂಬ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ–ಸೈಬರ್ ಸುರಕ್ಷೆ:ವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ. ಟಿ.ವಿ.ಸತ್ಯನಾರಾಯಣ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ–ನಮ್ಮ ಆರೋಗ್ಯ–ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮ ಕುರಿತು ಡಾ. ಮಲ್ಲಿಕಾ ಬಿ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಾ–ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಹಾಡುವ ಪ್ರತಿಭೆ ಶ್ರದ್ಧಾ ಆರ್.ಹೆಚ್. ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ನರಸಿಂಹನಾಯಕ್ ಮತ್ತು ಬಿ.ಆರ್.ಛಾಯಾ, 12.45 ಜನಪದ ಸಂಗೀತ ಪುಟ್ಟನಂಜಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ–ಆರ್. ಶೈಲಾ, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ "ಆನಂದ್", 4.00 ಯಕ್ಷಗಾನ ತಾಳ ಮದ್ದಲೆ–ಸಂಪೂರ್ಣ ಮಹಾಭಾರತ ಸರಣಿ, ಪ್ರಸಂಗ– ಕರ್ಣ ಪಟ್ಟಾಭಿಷೇಕ, ಪ್ರಸ್ತುತಿ– ಕೆ.ಎ. ಪದ್ಮನಾಭ ಪೂಜಾರಿ ಹಾಗೂ ಬಳಗದವರು, ಕಾಸರಗೋಡು, 6.50 ಕೃಷಿರಂಗ –ರಾಸುಗಳಲ್ಲಿ ಗರ್ಭಧರಿಸದಿರುವಿಕೆಗೆ ಕಾರಣಗಳು ಹಾಗೂ ಪರಿಹಾರ ಕುರಿತು ಡಾ. ಜ್ಯೋತಿಲಕ್ಷ್ಮಿ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ– ಬಾನುಲಿ ಸರಣಿ "ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಬುಡಕಟ್ಟು ಜನಾಂಗದ ಹೋರಾಟಗಾರ ಸೋಮಣ್ಣ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ವಿದ್ವಾನ್ ಪಿ. ಗಣೇಶ್– ಚಿತ್ರವೀಣಾ ವಾದನ

ಸುತ್ತೂರು ಜಾತ್ರಾ ಮಹೋತ್ಸವದ ಇಂದಿನ ಕಾರ್ಯಕ್ರಮಗಳು



ಕರ್ತೃ ಗದ್ದುಗೆಯಲ್ಲಿ ಪೂಜಾ ಕೈಂಕರ್ಯ ಮತ್ತು ಮೆರವಣಿಗೆ

ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ಭಾಗ್ಯೋದಯ ಪೂಜೆ, ಮಹಾಮಂಗಳಾರತಿ, ಬೆಳಗ್ಗೆ 6.30ಕ್ಕೆ ಸೋನಳ್ಳಿ, ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥಸಂಚಲನ, ಬೆಳಗ್ಗೆ 7.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಶನಿವಾರಸಂತೆ ತಾ., ಮನೆಹಳ್ಳಿ ಮಠ ಶ್ರೀ ತಪೋಕ್ಷೇತ್ರದ ಶ್ರೀ ಮಹಾಂತ ಶಿವಲಿಂಗ ಸ್ವಾಮಿಗಳು, ಧರ್ಮ ಸಂದೇಶ : ಮೀರಜ್ ಶ್ರೀ ಗುರುದೇವಾಶ್ರಮದ ಶ್ರೀ ಶಿವದೇವ ಸ್ವಾಮಿಗಳು, ಬೆಳಗ್ಗೆ 10.30ಕ್ಕೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವಮೂರ್ತಿಗೆ ಮಹಾರುದ್ರಾಭಿಷೇಕ, ಮಹಾರುದ್ರಾಭಿಷೇಕ (ಕಪಿಲಾ ನದಿ ತೀರ), ಅಷ್ಟೋತ್ತರ ಶತ ಕುಂಭೋತ್ಸವ, ಬೆಳಗ್ಗೆ 11.30ಕ್ಕೆ ಅನ್ನಬ್ರಹ್ಮೋತ್ಸವ, ಮಹಾಮಂಗಳಾರತಿ, ಸಂಜೆ 4ಕ್ಕೆ ಮಹಾರುದ್ರಾಭಿಷೇಕ, ಸಂಜೆ 6ಕ್ಕೆ ಧ್ವಜಾವರೋಹಣ, ಸಂಜೆ 6.30ಕ್ಕೆ ಉತ್ಸವಮೂರ್ತಿಯನ್ನು ಶ್ರೀಮಠಕ್ಕೆ ಬಿಜಯಂಗೈಸುವುದು.

ಕೃಷಿ ಮೇಳ ಮತ್ತು ವಸ್ತುಪ್ರದರ್ಶನ : ಸಮಾರೋಪ

ಸಮ್ಮುಖ : ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಬೆಂಗಳೂರು ದಿವ್ಯಜ್ಯೋತಿ ಜಾಗೃತಿ ಸಂಸ್ಥಾನದ ಮಾತಾ ಸಾಧ್ವಿ ಉನ್ಮೇಷ ಭಾರತೀಯವರು, ಅಧ್ಯಕ್ಷತೆ : ಆರ್‌ಎಸ್‌ಎಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಸಮಾರೋಪ ಭಾಷಣ : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್, ಬಹುಮಾನ ವಿತರಣೆ : ಕೃಷಿಮೇಳ – ಸಂಸದ್ ವಿ. ಶ್ರೀನಿವಾಸ ಪ್ರಸಾದ್, ಶಿಕ್ಷಣ ಮತ್ತು ವಿಜ್ಞಾನ–ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ವಸ್ತುಪ್ರದರ್ಶನ–ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು, ಮುಖ್ಯ ಅತಿಥಿಗಳು : ಶಾಸಕರಾದ ವಿನಯ್ ಕುಲಕರ್ಣಿ, ಪಿ.ಎಂ. ನರೇಂದ್ರಸ್ವಾಮಿ, ಹೆಚ್.ಕೆ. ಸುರೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಎಂ. ಕವಟಗಿಮಠ, ಅಯೋಧ್ಯಾ ಮಾಜಿ ಮೇಯರ್ ಋಷಿಕೇಶ್ ಉಪಾಧ್ಯಾಯ, ಉದ್ಯಮಿ ಘನರಾಂ ಭಾಯಿ ಪಟೇಲ್, ಯುಎಸ್‌ಎ ಮೇರಿಲ್ಯಾಂಡ್‌ನ ಶ್ರೀಮತಿ ಶುಭಾ ಮತ್ತು ಗುರುದಾಸ್ ಪ್ರಭು, ಉದ್ಯಮಿ ಸೌರಭ್ ಶರ್ಮಾ, ಬೆಳಗ್ಗೆ 10.30ಕ್ಕೆ.

ಶ್ರೀಮತಿ ಪಾರ್ವತಮ್ಮ ಮತ್ತು ಡಾ. ಶಾಮನೂರು ಶಿವಶಂಕರಪ್ಪ ಅತಿಥಿ ಗೃಹ ಉದ್ಘಾಟನೆ

ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ, ಮುಖ್ಯ ಅತಿಥಿಗಳು : ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ವಿ. ಜೋಷಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಚಿವ ಡಾ. ಸಿ.ಟಿ. ರವಿ, ಮಾಜಿ ಸಂಸದ ಡಾ. ಪ್ರಭಾಕರ ಕೋರೆ, ಉದ್ಯಮಿ ಎಸ್.ಎಸ್. ಗಣೇಶ್, ಮಧ್ಯಾಹ್ನ 12ಕ್ಕೆ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಗದ್ದುಗೆ ಆವರಣ : ಬೆಳಗ್ಗೆ 7.30ಕ್ಕೆ ಸಾಂಸ್ಕೃತಿಕ ತಿರುಳು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಂದ.

ವಿಶೇಷ ಕಾರ್ಯಕ್ರಮಗಳು

ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ –ಕೈಮಗ್ಗ, ಜವಳಿ, ಕರಕುಶಲ ಉತ್ಪನ್ನಗಳು, ಗ್ರಾಮೀಣ ಉತ್ಪನ್ನಗಳು, ಕೈಗಾರಿಕೋತ್ಪನ್ನಗಳು, ಗೃಹ ಬಳಕೆ ವಸ್ತುಗಳು, ಪುಸ್ತಕ ಹಾಗೂ ಕಲಾಕೃತಿಗಳ ಪ್ರದರ್ಶನ, ಪ್ರೌಢಶಾಲಾ ವಿದ್ಯಾರ್ಥಿಗಳು ತಯಾರಿಸಿದ ಶೈಕ್ಷಣಿಕ ಮಾದರಿಗಳ ಪ್ರದರ್ಶನ, ವಿವಿಧ ಸಂಸ್ಥೆಗಳು, ಸಹಕಾರ ಸಂಘಗಳು, ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ಮತ್ತು ಗುಡಿ ಕೈಗಾರಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಆರೋಗ್ಯ, ವೈದ್ಯಕೀಯ ಮತ್ತು ತಾಂತ್ರಿಕ ವಸ್ತುಪ್ರದರ್ಶನ.

ಕೃಷಿ ಮೇಳ : ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 7.30 ರವರೆಗೆ

ಹನಿ ನೀರಾವರಿಯಲ್ಲಿ ಭತ್ತದ ಬೆಳೆ ಪ್ರಾತ್ಯಕ್ಷಿಕೆ, ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ, ಹಸು, ಕುರಿ, ಮೇಕೆ ಹಾಗೂ ಕೋಳಿಗಳು–ದೇಸಿ ತಳಿಗಳ ಪ್ರದರ್ಶನ, ವೈವಿಧ್ಯಮಯ ಬೆಳೆಗಳ ಪ್ರಾತ್ಯಕ್ಷಿಕೆ, ಒಂದು ಎಕರೆ ಕೃಷಿ ಬ್ರಹ್ಮಾಂಡ, ವಿದೇಶಿ ಆಹಾರ ಬೆಳೆಗಳಾದ ಚಿಯಾ ಮತ್ತು ಟೆಫ್‌ಗಳ ಪ್ರದರ್ಶನ, ದ್ವಿದಳ ಧಾನ್ಯಗಳ ವಿವಿಧ ತಳಿಗಳ ಪ್ರದರ್ಶನ.

ಬೆಳಗ್ಗೆ 6 ರಿಂದ 10 ರವರೆಗೆ : ಜೆಎಸ್‌ಎಸ್ ಆಸ್ಪತ್ರೆ ನುರಿತ ವೈದ್ಯರಿಂದ ಆರೋಗ್ಯ ತಪಾಸಣೆ ಶಿಬಿರ ಮತ್ತು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವೈದ್ಯರಿಂದ ಕ್ಯಾನ್ಸರ್ ತಪಾಸಣಾ ಶಿಬಿರ

ದೇಸಿ ಆಟಗಳು

ಜೆಎಸ್‌ಎಸ್ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ : ಗೋಲಿ, ಬುಗುರಿ, ಹುಲಿ–ಕುರಿ, ನವಕಂಕರಿ, ಹಾವು–ಏಣಿ, ಚೌಕಾಬಾರ, ಚದುರಂಗ, ಪಗ್ಗದ ಆಟ, ತಾಬ್ಲ, ಪಂಚೀ, ಸಿಂಗಮ್, ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಅಣ್ಣೆಕಲ್ಲು, ಕುಂಟೆಬಿಲ್ಲೆ, ಅಳಿಗುಳಿಮಣೆ.

ಗ್ರಾಮೀಣ ಜನತೆಗಾಗಿ : ಕಲ್ಲುಗುಂಡು ಎತ್ತುವುದು, 50 ಕೆಜಿ ಭಾರದ ಚೀಲ ಹೊತ್ತುಕೊಂಡು ಓಡುವುದು, ಬುಗುರಿ, ಕೆಸರುಗದ್ದೆ ಓಟ, ಕೆಸರುಗದ್ದೆಯಲ್ಲಿ ಹಗ್ಗ ಜಗ್ಗಾಟ, ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿಟ್ಟುಕೊಂಡು ಓಡುವುದು, ಹಗ್ಗಜಗ್ಗಾಟ, ಅಳಗುಳಿಮಣೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಕೆ ಒಡೆಯುವುದು, ಅಣ್ಣೆಕಲ್ಲು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವುದು.

ವಾಸ್ತವ್ಯ ಮತ್ತು ಪ್ರಸಾದ : ಪ್ರತಿನಿತ್ಯ ಭಕ್ತಾದಿಗಳಿಗೆ ಪ್ರಸಾದ ಹಾಗೂ ದೂರದಿಂದ ಬರುವವರಿಗೆ ವಾಸ್ತವ್ಯಕ್ಕೆ ತಾತ್ಕಾಲಿಕ ಕುಟೀರಗಳಲ್ಲಿ ವ್ಯವಸ್ಥೆ.

ಬಸ್ ಸೌಲಭ್ಯ, ನೇರ ಪ್ರಸಾರ

ಬಸ್ ಸೌಲಭ್ಯ: ವಿವಿಧ ತಾಲೂಕುಗಳು ಮತ್ತು ಜಿಲ್ಲೆಗಳಿಂದ ಸುತ್ತೂರು ಜಾತ್ರಾ ವಿಶೇಷವಾಗಿ ಸಾರಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಮಾಹಿತಿಗೆ ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು, ದೂ. 08221–232223, 232224 **ಜೆಎಸ್‌ಎಸ್ ಮಹಾವಿದ್ಯಾಪೀಠ. ದೂ.0821–2548212–122.** https://www.youtube.com/@jssmhavidyapeetaonlineನಲ್ಲಿ ಸುತ್ತೂರು ಜಾತ್ರೆ ನೇರ ಪ್ರಸಾರ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 11 ಭಾನುವಾರ 2024

ಸಂಪುಟ: 44 | ಸಂಚಿಕೆ: 294 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ನಾಳೆಯಿಂದ ವಿಧಾನಮಂಡಲ
ಬಜೆಟ್ ಅಧಿವೇಶನ

- ಲೋಕಸಭಾ ಚುನಾವಣೆಗೆ ವೇದಿಕೆಯಾಗಿಸಿಕೊಳ್ಳಲು ಆಡಳಿತ–ವಿಪಕ್ಷಗಳು ಸಿದ್ಧತೆ
- ಕೇಂದ್ರದಿಂದ ಅನುದಾನ 'ಅನ್ಯಾಯ' ಹೋರಾಟವನ್ನೇ ಅಸ್ತ್ರ ಮಾಡಿಕೊಳ್ಳುವ 'ಆಡಳಿತ ಪಕ್ಷ'; ಗುತ್ತಿಗೆದಾರರ ಸಂಘ ಮಾಡಿರುವ ಶೇ. 40 ಕಮೀಷನ್ ವಿಪಕ್ಷಗಳ ಪ್ರತ್ಯಾಸ್ತ್ರ!



ಬೆಂಗಳೂರು, ಫೆ.10(ಕೆಎಂಶಿ)– ಸೋಮವಾರದಿಂದ ಆರಂಭಗೊಳ್ಳಲಿರುವ ವಿಧಾನಮಂಡಲದ ಬಜೆಟ್ ಅಧಿವೇಶನವನ್ನು ಆಡಳಿತ ಮತ್ತು ಪ್ರತಿಪಕ್ಷಗಳು ಮುಂಬರುವ ಲೋಕಸಭಾ ಚುನಾವಣೆಗೆ ವೇದಿಕೆಯಾಗಿ ಮಾಡಿಕೊಳ್ಳಲು ಸಜ್ಜಾಗಿವೆ.

ಅಯೋಧ್ಯೆ ಹಾಗೂ ಕೇಂದ್ರದ ಅನುದಾನದ ವಿಚಾರವೇ ಇಡೀ ಅಧಿವೇಶನದಲ್ಲಿ ಭಾರಿ ಚರ್ಚೆಗೆ ಕಾರಣವಾಗಲಿದೆ.

ಆಡಳಿತಾರೂಢ ಕಾಂಗ್ರೆಸ್ ಜನಪರ ಬಜೆಟ್ ಮಂಡನೆ ಮಾಡಿ ಮತದಾರರ ಒಲವು ಗಳಿಸಲು ಈ ವೇದಿಕೆಯನ್ನು ಬಳಸಿಕೊಳ್ಳಲು ಮುಂದಾದರೆ, ಪ್ರತಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರದ ವೈಫಲ್ಯಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟು ರಾಜಕೀಯ ಅಖಾಡವಾಗಿ ಮಾಡಿಕೊಳ್ಳಲು ಸಿದ್ಧತೆ ನಡೆಸಿವೆ. ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ವಿಷಯಗಳ ಚರ್ಚೆಗೆ ಸೀಮಿತ ಮಾಡಿಕೊಂಡಿದ್ದ ಪ್ರತಿಪಕ್ಷಗಳು ಇದೀಗ ತಮ್ಮ ಬತ್ತಳಿಕೆಯಲ್ಲಿರುವ ಅಸ್ತ್ರಗಳನ್ನು ಸದನದ ಮುಂದಿಟ್ಟು ಸರ್ಕಾರದ ವೈಫಲ್ಯಗಳನ್ನು ದಾಖಲೆ ಸಮೇತ ಬಿಡಿಸಿಡಲು ಮುಂದಾಗಿವೆ.

ಉಭಯಕ್ಕೆ ಬಲ: ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರಿದ ನಂತರ ಎರಡೂ ಪಕ್ಷಗಳಿಗೂ ಬಲ ಬಂದಿದೆ. ಅವು ಒಗ್ಗಟ್ಟಾಗಿ ಆಡಳಿತ ಪಕ್ಷವನ್ನು ಎದುರಿಸಲು ಅಧಿವೇಶನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಿವೆ. ಸರ್ಕಾರದ ವೈಫಲ್ಯಗಳ ಜೊತೆ ಆಡಳಿತದಲ್ಲಿ ನಡೆದಿರುವ ಅಕ್ರಮಗಳನ್ನು ಬಯಲು ಮಾಡಲು ಬಿಜೆಪಿ ಮತ್ತು ಜೆಡಿಎಸ್ ಮುಂದಾಗಿದ್ದರೆ, ಅದನ್ನು ಎದುರಿಸಲು ಆಡಳಿತ ಪಕ್ಷ ಪ್ರತಿತಂತ್ರ ರೂಪಿಸಿರುವುದಲ್ಲದೆ, ಹಿಂದಿನ ಆಡಳಿತಾವಧಿಯಲ್ಲಿ ನಡೆದಿರುವ ಹಗರಣಗಳನ್ನು ಹೊರತರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ. ಈಗಾಗಲೇ ಸದನದಲ್ಲಿ ಇವರ ಬಣ್ಣ ಬಯಲು ಮಾಡುತ್ತೇವೆ ಎಂದು ಇಬ್ಬರೂ ಹೇಳಿಕೊಂಡಿದ್ದಾರೆ. ರಾಜ್ಯ ಎದುರಿಸುತ್ತಿರುವ ಭೀಕರ ಬರಗಾಲ, ಕುಡಿಯುವ ನೀರು, ● 9ನೇ ಪುಟಕ್ಕೆ

ಇಂದು ಚಾಮುಂಡಿಬೆಟ್ಟಕ್ಕೆ ಅಮಿತ್ ಷಾ ಭೇಟಿ

ಸಾರ್ವಜನಿಕರಿಗೆ ಬೆಳಗ್ಗೆ ಕೆಲಕಾಲ ನಿರ್ಬಂಧ

ಮೈಸೂರು, ಫೆ. 10(ಆರ್‌ಕೆ)– ಕೇಂದ್ರ ಗೃಹ ಸಚಿವ ಅಮಿತ್ ಷಾ ಭೇಟಿ ನೀಡುವ ಹಿನ್ನೆಲೆಯಲ್ಲಿ ನಾಳೆ (ಭಾನುವಾರ) ಬೆಳಗ್ಗೆ 10ರಿಂದ 11.30 ಗಂಟೆವರೆಗೆ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಸಾರ್ವಜನಿಕರು, ಭಕ್ತರ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.



ಅಮಿತ್ ಶಾ ಭಾನುವಾರ ಬೆಟ್ಟಕ್ಕೆ ತೆರಳಲಿದ್ದು, ಶ್ರೀ ಚಾಮುಂಡೇಶ್ವರಿ ದರ್ಶನ ಮಾಡಿ ಹಿಂದಿರುಗುವ ಅವಧಿಯಲ್ಲಿ ಅಗತ್ಯ ಸುರಕ್ಷತಾ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಭಕ್ತಾದಿಗಳು ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಿದ್ದಾರೆ.

ಮುಂಜಾನೆಯಿಂದ ಬೆಳಗ್ಗೆ 10 ಗಂಟೆವರೆಗೆ ಹಾಗೂ ಅಮಿತ್ ಷಾ ವಾಪಸ್ ಮೈಸೂರು ನಗರಕ್ಕೆ ಬಂದ ನಂತರ ಭಕ್ತರು ಎಂದಿನಂತೆ ಚಾಮುಂಡಿಬೆಟ್ಟಕ್ಕೆ ಹೋಗಬಹುದು. ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸುವುದರಿಂದ ತೊಂದರೆಯಾಗುತ್ತದೆಯಾದರೂ, ಭದ್ರತೆ ದೃಷ್ಟಿಯಿಂದ ಈ ಕ್ರಮ ಅನಿವಾರ್ಯ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಮಂಡಕಳ್ಳಿ ವಿಮಾನ ನಿಲ್ದಾಣ, ವಾಸ್ತವ್ಯ ಹೂಡಲಿರುವ ಮೈಸೂರು ನಗರದ ರ್‍ಯಾಡಿಸನ್ ಬ್ಲೂ ಪ್ಲಾಜಾ, ಚಾಮುಂಡಿ ಬೆಟ್ಟ ಹಾಗೂ ಅವರು ಸಂಚರಿಸುವ ಮಾರ್ಗದಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಝಡ್ ವರ್ಗದ ಭದ್ರತೆ ಒದಗಿಸಿ ಭಾರೀ ಕಟ್ಟೆಚ್ಚರ ವಹಿಸಲಾಗಿದೆ.

ಲೋಕಸಭೆ ಚುನಾವಣೆ
ಮುನ್ನ ಸಿಎಎ ಜಾರಿ

ಎನ್‌ಡಿಎ 400ಕ್ಕೂ ಅಧಿಕ ಸೀಟು ಗೆದ್ದು ಅಧಿಕಾರಕ್ಕೆ ಬರುವುದು ನಿಶ್ಚಿತ: ಅಮಿತ್ ಷಾ



ನವದೆಹಲಿ: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ 370 ಮತ್ತು ಎನ್‌ಡಿಎ ಒಕ್ಕೂಟ 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಪ್ರಧಾನಿ ಮೋದಿ ನೇತೃತ್ವದಲ್ಲಿ ಸತತ ಮೂರನೇ ಅವಧಿಗೆ ಸರ್ಕಾರ ರಚಿಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಲೋಕಸಭೆ ಚುನಾವಣೆಯ ಫಲಿತಾಂಶದ ಬಗ್ಗೆ ಯಾವುದೇ ಅಚ್ಚರಿಯಿಲ್ಲ. ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಮತ್ತೆ ವಿರೋಧ ಪಕ್ಷದ ಸ್ಥಾನದಲ್ಲಿ ಕೂರಬೇಕಾಗುತ್ತದೆ ಎಂದು ಈಗಾಗಲೇ ಮನವರಿಕೆ ಮಾಡಿಕೊಂಡಿವೆ ಎಂದು ಹೇಳಿದರು. ನಾವು ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿದ್ದೇವೆ, (ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿತ್ತು) ಜನತೆಗೆ ಕೊಟ್ಟ ಮಾತುಗಳನ್ನು ಈಡೇರಿಸಿದ್ದೇವೆ. ಆದ್ದರಿಂದ ದೇಶದ ಜನರು ಬಿಜೆಪಿಗೆ 370 ಸ್ಥಾನಗಳನ್ನು ಮತ್ತು ಎನ್‌ಡಿಎಗೆ 400ಕ್ಕೂ ಹೆಚ್ಚು ಸ್ಥಾನಗಳನ್ನು ನೀಡಿ ಆಶೀರ್ವದಿಸುತ್ತಾರೆ ಎಂಬ ನಂಬಿಕೆಯಿದೆ ಎಂದು ಅಮಿತ್ ಷಾ ಇಟಿ ನೌ ಗ್ಲೋಬಲ್ ಬಿಸಿನೆಸ್ ಶೃಂಗಸಭೆ 2024ನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು. ಜಯಂತ್ ಚೌಧರಿ ನೇತೃತ್ವದ ರಾಷ್ಟ್ರೀಯ ಲೋಕದಳ (RLD), ಶಿರೋಮಣಿ ಅಕಾಲಿದಳ (SAD) ಮತ್ತು ಇತರ ಕೆಲವು ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (NDA) ಸೇರುವ ಸಾಧ್ಯತೆಯ ಕುರಿತು ಕೇಳಲಾದ ಪ್ರಶ್ನೆಗೆ ನಮಗೆ ಕುಟುಂಬ ಯೋಜನೆಯಲ್ಲಿ ನಂಬಿಕೆ ಇದೆ. ಆದರೆ ರಾಜಕೀಯದಲ್ಲಿ ಅಲ್ಲ ಎಂದು ಮುಂಬರುವ ದಿನಗಳಲ್ಲಿ ಇನ್ನಷ್ಟು ಪಕ್ಷಗಳು ಎನ್‌ಡಿಎ ಒಕ್ಕೂಟಕ್ಕೆ ಸೇರುವ ಸುಳಿವನ್ನು ನೀಡಿದರು.

ಅಭಿವೃದ್ಧಿ v/s ಘೋಷಣೆ ನಡುವಿನ ಹೋರಾಟ: 2024 ರ ಚುನಾವಣೆಯು ಎನ್‌ಡಿಎ ಮತ್ತು ವಿರೋಧ ಪಕ್ಷದ ನಡುವಿನ ಚುನಾವಣೆಯಾಗಿರುವುದಿಲ್ಲ. ದೇಶದ ಒಟ್ಟಾರೆ ಅಭಿವೃದ್ಧಿ ಮತ್ತು ● 9ನೇ ಪುಟಕ್ಕೆ

ಯುಎಇಯಲ್ಲಿ ಮೊದಲ ಹಿಂದೂ ದೇವಾಲಯ ಉದ್ಘಾಟಿಸುವ ಪ್ರಧಾನಿ ಮೋದಿ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರದಿಂದ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಎರಡು ದಿನಗಳ ಪ್ರವಾಸ ಕೈಗೊಳ್ಳಲಿದ್ದು, ಈ ಸಂದರ್ಭದಲ್ಲಿ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಮತ್ತು ● 9ನೇ ಪುಟಕ್ಕೆ

ಐದು ವರ್ಷದಲ್ಲಿ ದೇಶ ಬಹು ದೊಡ್ಡ ಬದಲಾವಣೆ ಕಂಡಿದೆ

- ಸುಧಾರಣೆ; ಸಾಧನೆ; ಪರಿವರ್ತನೆ: ಪ್ರಧಾನಿ ಮೋದಿ
- 17ನೇ ಲೋಕಸಭಾ ಕೊನೆ ಅಧಿವೇಶನಕ್ಕೆ ತೆರೆ



ನವದೆಹಲಿ: 17ನೇ ಲೋಕಸಭೆಯ ಐದು ವರ್ಷಗಳು 'ಸುಧಾರಣೆ, ಸಾಧನೆ ಮತ್ತು ಪರಿವರ್ತನೆ'ಯ ಅವಧಿಯಾಗಿದ್ದು, ದೇಶ "ದೊಡ್ಡ ಬದಲಾವಣೆಯ' ವೇಗದಲ್ಲಿ ಸಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಸಂಸತ್ ಬಜೆಟ್ ಅಧಿವೇಶನಕ್ಕೆ ಇಂದು ತೆರೆ ಬಿದ್ದಿದ್ದು, 17ನೇ ಲೋಕಸಭೆ ಅಧಿವೇಶನದ ಕೊನೆಯ ಕಲಾಪವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಕಳೆದ ಐದು ವರ್ಷಗಳಲ್ಲಿ ದೇಶ ದೊಡ್ಡ ಬದಲಾವಣೆ ಕಂಡಿದೆ. ಈ ಲೋಕಸಭೆಯು ಕೋವಿಡ್‌ನ ಸವಾಲನ್ನು ಎದುರಿಸಿ ಹೊಸ ರೀತಿಯಲ್ಲಿ ಕೆಲಸ ಮಾಡಿದೆ ಎಂದು ಹೇಳಿದರು. ದೇಶವು ತ್ವರಿತಗತಿಯಲ್ಲಿ ದೊಡ್ಡ ಬದಲಾವಣೆಗಳತ್ತ ಸಾಗಿದೆ ಮತ್ತು ಸದನದ ಎಲ್ಲಾ ಸದಸ್ಯರು ಮಹತ್ವದ ಕೊಡುಗೆ ನೀಡಿದ್ದಾರೆ. ಜನರು ಶತಮಾನಗಳಿಂದ ಕಾಯುತ್ತಿದ್ದ ಮಹತ್ವದ ಕೆಲಸಗಳು ಪೂರ್ಣಗೊಂಡಿವೆ ಎಂದು ಲೋಕಸಭೆ ಚುನಾವಣೆಗೆ ಮುನ್ನ ನಡೆದ ಕೊನೆಯ ಅಧಿವೇಶನದಲ್ಲಿ ಪ್ರಧಾನಿ ಹೇಳಿದರು.

ಜನ ತಲೆಮಾರುಗಳಿಂದ ಒಂದೇ ಸಂವಿಧಾನದ ಕನಸು ಕಂಡಿದ್ದರು. ಆದರೆ ಈ ಸದನವು 370ನೇ ವಿಧಿಯನ್ನು ತೆಗೆದು ಹಾಕುವ ಮೂಲಕ ಅದನ್ನು ಸಾಧ್ಯವಾಗಿಸಿದೆ. 17ನೇ ಲೋಕಸಭೆಯಲ್ಲಿ ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಮೋದಿ ತಿಳಿಸಿದರು.

ಹಲವಾರು ಸವಾಲುಗಳನ್ನು ಎದುರಿಸಿ ದೇಶಕ್ಕೆ ಸೂಕ್ತ ನಿರ್ದೇಶನ ನೀಡಲಾಗಿದೆ. ಈ ಐದು ವರ್ಷಗಳು ಸುಧಾರಣೆ, ಸಾಧನೆ ಮತ್ತು ಪರಿವರ್ತನೆಯಾಗಿದೆ. ನಾವು ಸುಧಾರಣೆ, ಸಾಧನೆ ಮತ್ತು ಪರಿವರ್ತನೆಯನ್ನು ನೋಡುವುದು ಅಪರೂಪ. ದೇಶವು 17ನೇ ಲೋಕಸಭೆಯನ್ನು ಆಶೀರ್ವದಿಸುತ್ತಲೇ ಇರುತ್ತದೆ ಎಂದು ಪ್ರಧಾನಿ ಹೇಳಿದರು.

17ನೇ ಲೋಕಸಭೆಯ ಕೊನೆಯ ಅಧಿವೇಶನದಲ್ಲಿ ಎಲ್ಲರಿಗೂ, ವಿಶೇಷವಾಗಿ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಧನ್ಯವಾದ ಹೇಳಿದ ಪ್ರಧಾನಿ ಮೋದಿ, ಏನೇ ಸಂಭವಿಸಿದರೂ ನಿಮ್ಮ ಮುಖದಲ್ಲಿ ಯಾವಾಗಲೂ ನಗು ಇರುತ್ತಿತ್ತು. ನೀವು ನಿಷ್ಪಕ್ಷಪಾತವಾಗಿ ಈ ಸದನವನ್ನು ಮುನ್ನಡೆಸಿದ್ದೀರಿ ಮತ್ತು ಅದಕ್ಕಾಗಿ ನಾನು ನಿಮ್ಮನ್ನು ಶ್ಲಾಘಿಸುತ್ತೇನೆ. ಕೋಪ ಮತ್ತು ಆರೋಪಗಳ ಸಂದರ್ಭಗಳು ಇದ್ದವು. ಆದರೆ ನೀವು ಈ ಸಂದರ್ಭಗಳನ್ನು ತಾಳ್ಮೆಯಿಂದ ನಿಭಾಯಿಸಿದ್ದೀರಿ ಮತ್ತು ಬುದ್ಧಿವಂತಿಕೆಯಿಂದ ಕಲಾಪವನ್ನು ನಡೆಸಿದ್ದೀರಿ ಎಂದು ಬಿರ್ಲಾ ಅವರನ್ನು ಅಭಿನಂದಿಸಿದರು. ತಮ್ಮ ಸರ್ಕಾರದ ಸಾಧನೆಗಳನ್ನು ವಿವರಿಸಿದ ಮೋದಿ, 370ನೇ ವಿಧಿಯನ್ನು ರದ್ದುಗೊಳಿಸಿರುವುದು, ತ್ರಿವಳಿ ತಲಾಖ್ ಮಸೂದೆಯ ಅಂಗೀಕಾರವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಮಹಿಳಾ ಮೀಸಲಾತಿ ಮಸೂದೆಯೊಂದಿಗೆ ಹೊಸ ಸಂಸತ್ ಕಟ್ಟಡ ತನ್ನ ಪ್ರಯಾಣವನ್ನು ಪ್ರಾರಂಭಿಸಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಮುಂಬರುವ 25 ವರ್ಷಗಳು ದೇಶಕ್ಕೆ ಬಹಳ ನಿರ್ಣಾಯಕವಾಗಿದೆ, ಒಂದು ಕಡೆ, ರಾಜಕೀಯ ಆಕಾಂಕ್ಷೆಗಳಿವೆ, ಮತ್ತೊಂದೆಡೆ ದೇಶಕ್ಕಾಗಿ ಕನಸುಗಳಿವೆ. ಮುಂದಿನ 25 ವರ್ಷಗಳಲ್ಲಿ ಭಾರತವು 'ವಿಕಸಿತ್ ಭಾರತ' ಆಗಲಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ರಾಜ್ಯದಲ್ಲಿ 6 ವರ್ಷ ಮೇಲ್ಪಟ್ಟ ಮಕ್ಕಳಿಗೂ ಹೆಲ್ಮೆಟ್ ಕಡ್ಡಾಯ

ಬೆಂಗಳೂರು: ಆರು ವರ್ಷ ಮೇಲ್ಪಟ್ಟ ಎಲ್ಲ ಮಕ್ಕಳಿಗೂ ಹೆಲ್ಮೆಟ್ ಕಡ್ಡಾಯವಿದ್ದು, ಈ ನಿಯಮವನ್ನು ಪಾಲಿಸಬೇಕು ಎಂದು ಸಂಚಾರ ಪೊಲೀಸರು ಸೂಚನೆ ನೀಡಿದ್ದಾರೆ.



ನಗರದ ಶಾಲೆ–ಕಾಲೇಜು ಬಳಿ ಸಂಚಾರ ನಿಯಮ ಉಲ್ಲಂಘನೆ ಆಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಹಲವು ಪೋಷಕರು, ಮಕ್ಕಳನ್ನು ಹೆಲ್ಮೆಟ್ ಇಲ್ಲದೇ ದ್ವಿಚಕ್ರ ವಾಹನದಲ್ಲಿ ಕರೆದೊಯ್ಯುತ್ತಿದ್ದಾರೆ. ಇಂಥ ಪೋಷಕರಿಗೆ ಪೊಲೀಸರು, 6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯವಿದೆ. ಇಂದಿನಿಂದಲೇ ಮಕ್ಕಳಿಗೆ ಹೆಲ್ಮೆಟ್ ಹಾಕಿಸಿ ಎಂದು ಸೂಚನೆ ನೀಡುತ್ತಿದ್ದಾರೆ.

ಶಾಲೆ–ಕಾಲೇಜು ಬಳಿ ಹೆಲ್ಮೆಟ್ ರಹಿತ ಚಾಲನೆ, ಪರವಾನಗಿ ಇಲ್ಲದೇ ಚಾಲನೆ, ಪಾದಚಾರಿ ಮಾರ್ಗದಲ್ಲಿ ಸವಾರಿ ಸೇರಿದಂತೆ ವಿವಿಧ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಪೊಲೀಸರು ಪ್ರಕರಣಗಳನ್ನೂ ದಾಖಲಿಸಿ, ದಂಡ ವಸೂಲಿ ಮಾಡುತ್ತಿದ್ದಾರೆ.

ಕಾಯ್ದೆಯಲ್ಲಿ ಉಲ್ಲೇಖ: 6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯ ಎಂಬುದು ಹೊಸ ನಿಯಮವಲ್ಲ. ಕಾಯ್ದೆಯಲ್ಲಿ ಮೊದಲಿನಿಂದಲೂ ಇದೆ. ಆದರೆ, ಜನರು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಸಂಚಾರ ವಿಭಾಗದ ಅಧಿಕಾರಿಯೊಬ್ಬರು ಹೇಳಿದರು. ಬಹುತೇಕ ಅಪಘಾತಗಳಲ್ಲಿ ತಲೆಗೆ ಪೆಟ್ಟು ಬಿದ್ದು ಸವಾರರು ಮೃತಪಡುತ್ತಿದ್ದಾರೆ. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಹೆಲ್ಮೆಟ್ ಹಾಕಿಸುವುದು ಒಳ್ಳೆಯದು. ಈ ಬಗ್ಗೆ ಪೋಷಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಸತ್ತ ವ್ಯಕ್ತಿಯ ಹೆಸರಲ್ಲಿ ಆಧಾರ್ ಕಾರ್ಡ್ ಸೃಷ್ಟಿಸಿ ಕೋಟ್ಯಾಂತರ ಮೌಲ್ಯದ ಸರ್ಕಾರಿ ಭೂಮಿ ಅಕ್ರಮ ಪರಭಾರೆ ಮಾಡಿದ

ತಹಸೀಲ್ದಾರ್ ರಕ್ಷಣೆಗೆ ಮುಂದಾದ ಸ್ಪೀಕರ್, ಸಿಎಂ ರಾಜಕೀಯ ಕಾರ್ಯದರ್ಶಿ, ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ!

- ಸಾಮಾಜಿಕ ಹೋರಾಟಗಾರ ಕೆ.ಆರ್. ರವೀಂದ್ರ ದಾಖಲೆ ಬಿಡುಗಡೆ
- ಇಷ್ಟಾದರೂ ಆರೋಪಿತ ತಹಸೀಲ್ದಾರ್ ವಿರುದ್ಧ ಕ್ರಮಕ್ಕೆ ಶಿಫಾರಸು

ಮೈಸೂರು, ಫೆ. 10(ಎಂಟಿವೈ)– ಸರ್ಕಾರಕ್ಕೆ ಭೂಸ್ವಾಧೀನವಾಗಿರುವ ಕೋಟ್ಯಾಂತರ ರೂ. ಮೌಲ್ಯದ ಜಮೀನನ್ನು ಸತ್ತ ವ್ಯಕ್ತಿಯ ಹೆಸರಲ್ಲಿ ಆಧಾರ್ ಕಾರ್ಡ್ ಸೃಷ್ಟಿಸಿ ಖರೀದಿ ಹಾಗೂ ಹಕ್ಕು ಬದಲಾವಣೆ ಮಾಡಿರುವ ಪ್ರಕರಣದಲ್ಲಿ ಶಿಸ್ತುಕ್ರಮ ಎದುರಿಸುತ್ತಿರುವ ತಹಸೀಲ್ದಾರ್‌ರ ರಕ್ಷಣೆಗೆ ನಿಂತಿರುವ ರಾಜಕಾರಣಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ತಾವು ರಾಜ್ಯಪಾಲರಿಗೆ ಮನವಿ ಸಲ್ಲಿಸಿರುವುದಾಗಿ ಮಂಡ್ಯದ ಸಾಮಾಜಿಕ ಹೋರಾಟಗಾರ ಕೆ.ಆರ್.ರವೀಂದ್ರ ತಿಳಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಮಂಡ್ಯದ ಹಿಂದಿನ ತಹಸೀಲ್ದಾರ್ ಎನ್.ಎ. ಕುಂಞ ಅಹಮದ್ (ಹಾಲಿ ಪಿರಿಯಾಪಟ್ಟಣ ತಹಸೀಲ್ದಾರ್) ಮಂಡ್ಯ ನಗರದ ಕೋಟ್ಯಾಂತರ ರೂ. ಮೌಲ್ಯದ ಜಮೀನನ್ನು ಅಕ್ರಮವಾಗಿ ಪರಭಾರೆ ಮಾಡಿದ್ದರು. ಈ ಪ್ರಕರಣದಲ್ಲಿ ಸತ್ತ ವ್ಯಕ್ತಿಯ ಹೆಸರಲ್ಲಿ ನಕಲಿ ಆಧಾರ್ ಕಾರ್ಡ್ ಸೃಷ್ಟಿಸಿ ಜಮೀನು ಖರೀದಿಸಲಾಗಿದೆ. ಈ ಸಂಬಂಧ ರಾಜಸ್ವ ನಿರೀಕ್ಷಕರು ಆಕ್ಷೇಪ ವ್ಯಕ್ತಪಡಿಸಿ ವರದಿ ಸಲ್ಲಿಸಿದ್ದರೂ ಅದನ್ನು ಪರಿಗಣಿಸದೇ ತಹಸೀಲ್ದಾರ್‌ರು ಭೂಮಿಯ ಹಕ್ಕು ಬದಲಾವಣೆ ಮಾಡಿಕೊಟ್ಟಿದ್ದರು ಎಂದು ತಿಳಿಸಿದರು.

ಈ ಸಂಬಂಧ ಉಪ ವಿಭಾಗಾಧಿಕಾರಿಗಳು ತನಿಖೆ ನಡೆಸಿ ನೀಡಿದ ವರದಿಯನ್ವಯ ತಹಸೀಲ್ದಾರ್ ಕುಂಞ ಅಹಮದ್ ವಿರುದ್ಧ ಇಲಾಖೆ ತನಿಖೆ ನಡೆಸಿ ಶಿಸ್ತುಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆಯುವ ಹಂತದಲ್ಲಿ ಕುಂಞ ಅಹಮದ್ ಕೆಎಟಿ ಮೊರೆ ಹೋಗಿದ್ದು, ಅಲ್ಲಿ ಅವರ ಅರ್ಜಿ ವಜಾ ಆಗಿತ್ತು ಎಂದು ತಿಳಿಸಿದ ರವೀಂದ್ರ, ಈ ಮಧ್ಯೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಕುಂಞ ಅಹಮದ್ ವಿರುದ್ಧ ಇಲಾಖಾ ತನಿಖೆ ಆದೇಶವನ್ನು ಮರು ಪರಿಶೀಲಿಸುವಂತೆ ತಮಗೆ ಮಲೆನಾಡು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಿಯಾಜ್ ಕಟ್ಟೆಕ್ಕಾರ್ಸ್ ಅವರು ಮನವಿ ಸಲ್ಲಿಸಿದ್ದು, ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಅದೇ ರೀತಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಕೂಡ ಇಲಾಖಾ ತನಿಖೆ ಆದೇಶವನ್ನು ನಿಯಮಾನುಸಾರ ಮತ್ತೊಮ್ಮೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮತ್ತು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ ಅವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಕುಂಞ ಅಹಮದ್ ಅವರಿಗೆ ಮುಂಬಡ್ತಿ ದೊರೆಯುವ ಸಾಧ್ಯತೆಗಳಿರುವುದರಿಂದ ಇವರ ವಿರುದ್ಧ ಇಲಾಖಾ ತನಿಖೆ ಮಾಡಿರುವ ಆದೇಶವನ್ನು ಮರು ಪರಿಶೀಲಿಸಬೇಕೆಂದು ಕೋರಿದ್ದಾರೆ ಎಂದು ರವೀಂದ್ರ ವಿವರಿಸಿದರು. ಒಬ್ಬ ಅಧಿಕಾರಿ ಸರ್ಕಾರದ ಕೋಟ್ಯಾಂತರ ರೂ. ಮೌಲ್ಯದ ಭೂಮಿಯನ್ನು ಅಕ್ರಮವಾಗಿ ಪರಭಾರೆ ಮಾಡಿರುವುದು ದೃಢಪಟ್ಟು ಇಲಾಖಾ ತನಿಖೆಗೆ ಒಳಪಟ್ಟಿರುವಾಗ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಮುಖ್ಯಮಂತ್ರಿಗಳ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಮಕ್ಕಳೇ, ಸಾವಿತ್ರಿ ತನ್ನ ಪತಿಗಾಗಿ ಸಾವಿನ ದೇವರು ಯಮನ ಬಳಿ ಹೋರಾಡಿ ಪತಿಯನ್ನು ಉಳಿಸಿಕೊಂಡಳು. ಈ ಕಥೆಯ ನೀತಿ ಪಾಠವೇನು?

ಗುಂಡ : ಹೆಂಡತಿಯಿಂದ ಪತಿಯನ್ನು ಬಚಾವ್ ಮಾಡಲು ಯಾವ ಯಮನಿಂದಲೂ ಸಾಧ್ಯವಿಲ್ಲ

ಮೈಸೂರು ಮಿತ್ರ

ಭಾನುವಾರ, 11 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇನ್ನೊಬ್ಬರ ಮಾತು–ಕೃತಿಗಳಿಂದ ನೋವು ಅನುಭವಿಸುವುದು ನಿಮಗೆ ಸಾಧ್ಯವಿಲ್ಲ ಎಂದಾದರೆ, ನಿಮ್ಮ ಮಾತು–ಕೃತಿಗಳು ಇನ್ನೊಬ್ಬನನ್ನು ನೋಯಿಸದಂತೆ ನೋಡಿಕೊಳ್ಳಿ –ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಟಿ ರಾಗವಾದರೂ ಪಾಠವಿಲ್ಲದೆ ಬಾರದು

ನಿಮ್ಮ ಪತ್ರಗಳು

ಸ್ತುತ್ಯಾರ್ಹ ಕಾರ್ಯ

ಮಾನ್ಯರೆ,

ದೇಶ ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿರುವ ಈ ಹೊತ್ತಿನಲ್ಲಿ ಕೇಂದ್ರ ಸರ್ಕಾರ ಐವರು ಮಹನೀಯರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ' ಪ್ರಶಸ್ತಿಯನ್ನು ಘೋಷಿಸಿದೆ. ಕೆಲವೇ ದಿನಗಳ ಹಿಂದೆ ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಹಾಗೂ ಮಾಜಿ ಉಪ ಪ್ರಧಾನಿ ಎಲ್.ಕೆ. ಅಡ್ವಾನಿಯವರಿಗೆ ಭಾರತರತ್ನ ಘೋಷಿಸಿದ್ದ ಕೇಂದ್ರ ಸರ್ಕಾರ ಇದೀಗ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ಚೌಧುರಿ ಚರಣ್ ಸಿಂಗ್, ಪಿ.ವಿ.ನರಸಿಂಹರಾವ್ ಹಾಗೂ ಹಸಿರುಕ್ರಾಂತಿಯ ಹರಿಕಾರ ಡಾ.ಸ್ವಾಮಿನಾಥನ್ ಅವರಿಗೆ ಭಾರತ ರತ್ನ ಘೋಷಿಸಿದೆ. ಈ ಎಲ್ಲಾ ಮಹನೀಯರೂ ದೇಶಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ ಎನ್ನುವುದರಲ್ಲಿ ಎರಡನೆಯ ಮಾತೇ ಇಲ್ಲ. ಆದರೆ ಚುನಾವಣಾ ವರ್ಷದಲ್ಲಿ ಈ ರೀತಿ ದಾಖಲೆಯ ಮಟ್ಟದಲ್ಲಿ 'ಭಾರತ ರತ್ನ' ಪ್ರಶಸ್ತಿಯನ್ನು ಘೋಷಿಸುವುದು ಎಷ್ಟು ಸರಿ ಎಂಬ ಪ್ರಶ್ನೆ ಪ್ರಜ್ಞಾವಂತ ನಾಗರಿಕರನ್ನು ಕಾಡಿದರೆ ಅಚ್ಚರಿಯಿಲ್ಲ. ಹಿಂದಿನ ವರ್ಷಗಳಲ್ಲಿ ಸಹ ಈ ಪ್ರಶಸ್ತಿಯನ್ನು ಕೆಲವರಿಗೆ ಘೋಷಿಸಿದಾಗ ಸ್ವಲ್ಪ ಮಟ್ಟಿನ ವಿವಾದ ಭುಗಿಲೆದ್ದು ನಂತರ ತಣ್ಣಗಾಯಿತು. ಅದೇನೇ ಇರಲಿ ಕೇಂದ್ರ ಸರ್ಕಾರದ ನಿರ್ಧಾರ ಸ್ವಾಗತಾರ್ಹವಾಗಿದೆ.

ಪಿ.ವಿ.ನರಸಿಂಹರಾವ್ ಕುಸಿದು ಬೀಳುತ್ತಿದ್ದ ಭಾರತದ ಆರ್ಥ ವ್ಯವಸ್ಥೆಗೆ ಹೊಸ ಭಾಷ್ಯ ಬರೆದು ಕುಂಟುತ್ತಲೇ ಐದು ವರ್ಷದ ತಮ್ಮ ಅಧಿಕಾರಾವಧಿಯನ್ನು ಪೂರೈಸಿದರು. ಜಾಟ್ ಸಮುದಾಯದ ಪ್ರಬಲ ನಾಯಕರಾಗಿದ್ದ ಚೌಧುರಿ ಚರಣ್ ಸಿಂಗ್, ಗೃಹ ಮಂತ್ರಿ ಹಾಗೂ ಪ್ರಧಾನ ಮಂತ್ರಿಗಳಾಗಿ ದೇಶಕ್ಕೆ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅವರು ಓರ್ವ ಶ್ರೇಷ್ಠ ರೈತ ನಾಯಕ ಕೂಡ ಆಗಿದ್ದರು. ಇನ್ನು ಡಾ.ಸ್ವಾಮಿನಾಥನ್ 'ಹಸಿರುಕ್ರಾಂತಿ'ಯ ಹರಿಕಾರ ಎಂದೇ ಕರೆಯಲ್ಪಡು ತ್ತಿದ್ದರು. ಲಾಲ್‌ಕೃಷ್ಣ ಅಡ್ವಾನಿಯವರನ್ನು ಹೊರತುಪಡಿಸಿ ಉಳಿದ ಮಹನೀಯರೆಲ್ಲಾ ಅಸ್ತಂಗತರಾಗಿದ್ದು, ಅವರಿಗೆ ಮರಣೋತ್ತರವಾಗಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇದು ಸ್ತುತ್ಯಾರ್ಹವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ರಸ್ತೆಯನ್ನು ಸಮತಟ್ಟಾಗಿ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನ ಸರಸ್ವತಿಪುರಂನ ಕಾಂತರಾಜ ಅರಸ್ ರಸ್ತೆಯಲ್ಲಿನ ಭಾರತ್ ಪೆಟ್ರೋಲ್ ಬಂಕ್ ಎದುರು ಪೈಪ್ ಅಳವಡಿಕೆಯ ಸಲುವಾಗಿ ರಸ್ತೆಯನ್ನು ಅಗೆದು, ನಂತರ ರಸ್ತೆ ಗುಂಡಿಯನ್ನು ವ್ಯವಸ್ಥಿತವಾಗಿ ಮುಚ್ಚದೆ ಹಳ್ಳದಿಣ್ಣೆಗಳಾಗಿದೆ. ಇದರಿಂದಾಗಿ ಈ ಮಾರ್ಗವಾಗಿ ಓಡಾಡುವ ವಾಹನ ಸವಾರರು ಹಠಾತ್ ಎದುರಾಗುವ ಈ ಹಳ್ಳದಿಣ್ಣೆಯಿಂದ ಆಯತಪ್ಪಿ ಬಿದ್ದು ಸಣ್ಣಪುಟ್ಟ ಅಪಘಾತಗಳು ಸಂಭವಿಸಿವೆ. ಆದ್ದರಿಂದ, ಸಂಬಂಧಪಟ್ಟವರು ಇನ್ನಾದರೂ ತ್ವರಿತವಾಗಿ ಎಚ್ಚೆತ್ತು ರಸ್ತೆಯನ್ನು ಸಮತಟ್ಟಾಗಿ ದುರಸ್ತಿಗೊಳಿಸಿ ಮುಂದಾಗಬಹುದಾದ ಸಾವು ನೋವುಗಳನ್ನು ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಜಯನಗರದ ಹೊಸ ಕೋರ್ಟ್ ಬಳಿ ಕಸದ ರಾಶಿ



ಮಾನ್ಯರೆ,

ಮೈಸೂರು ನಗರವು ದೇಶದಲ್ಲಿ ಸ್ವಚ್ಛ ನಗರವೆಂದು ಕರೆಯಲ್ಪಡುತ್ತಿದ್ದು, ಕಳೆದ ಮೂರು ನಾಲ್ಕು ವರ್ಷಗಳಿಂದ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ, ನಗರಪಾಲಿಕೆ ಅಧಿಕಾರಿಗಳ ಉದಾಸೀನತೆಯಿಂದ ಮೈಸೂರು ಸ್ವಚ್ಛ ನಗರ ಎಂಬ ಕಿರೀಟದಿಂದ ದೂರ ಹೋಗಿ ಬಹಳ ವರ್ಷದ ಕಳೆದು ಹೋಗಿದೆ. ಪ್ರಜ್ಞಾವಂತ ಮೈಸೂರು ನಾಗರಿಕರು ಈ ಬಗ್ಗೆ ಹಲವು ಬಾರಿ ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗುವುದಿಲ್ಲ. ಮೈಸೂರಿನ ಹೃದಯ ಭಾಗದಲ್ಲಿರುವ ಜಯನಗರದ ಹೊಸ ಕೋರ್ಟಿನ ಪಕ್ಕ ಕಸದ ರಾಶಿಯು ಪ್ರತಿ ದಿನವೂ ಬೀಳುತ್ತಿದ್ದು, ಅದರ ನಿಯಂತ್ರಣ ಮಾಡಲು ನಗರಪಾಲಿಕೆ ಅಧಿಕಾರಿಗಳು ವಿಫಲರಾಗಿದ್ದಾರೆ. ಇದರಿಂದಾಗಿ ದುರ್ವಾಸನೆ ಬೀರುತ್ತಿದ್ದು, ವಕೀಲರು ಮತ್ತು ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದಯಮಾಡಿ ಈ ಕೂಡಲೇ ಆಯುಕ್ತರು ಕ್ರಮವನ್ನು ಕೈಗೊಂಡು ಕಸ ಎಸೆಯುವ ಜಾಗವನ್ನು ಗುರುತಿಸಿ ಸ್ವಚ್ಛ ಮಾಡಬೇಕು ಹಾಗೂ ಮೈಸೂರಿನಲ್ಲಿ ಸ್ವಚ್ಛತೆಗೆ ಮತ್ತಷ್ಟು ಆದ್ಯತೆ ನೀಡಿ ಮೈಸೂರು ನಗರವು ಸ್ವಚ್ಛತೆಯಲ್ಲಿ ಪ್ರಥಮ ಸ್ಥಾನ ಪಡೆಯಬೇಕೆಂದು ಮೈಸೂರು ನಾಗರಿಕರು ಹಾಗೂ ಜಯನಗರ ನಿವಾಸಿಗಳ ವತಿಯಿಂದ ಆಯುಕ್ತರಲ್ಲಿ ಮನವಿ.

– ಎಂ.ಜೆ. ಚೇತನ್, ಜಯನಗರ, ಮೈಸೂರು

ಹೆಚ್ಚು ಬಸ್ಸು ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಪ್ರತಿನಿತ್ಯ ಜೀವನ ಸಾಗಿಸಲು ತಲಕಾಡಿನಿಂದ–ಟಿ.ನರಸೀಪುರ ಮಾರ್ಗದಲ್ಲಿ ಪುರುಷರು, ಮಹಿಳೆಯರು ಟಿ. ನರಸೀಪುರ ಮತ್ತು ಮೈಸೂರಿಗೆ ಪ್ರಯಾಣಿಸುತ್ತಾರೆ. ಈ ಮಾರ್ಗದಲ್ಲಿ ಸುಮಾರು ಹತ್ತಾರು ಊರುಗಳು ಸೇರಿವೆ. ಸರಿಯಾಗಿ ಸಾರಿಗೆ ಬಸ್ ಬಾರದೆ ಸಾರ್ವಜನಿಕರು ಪ್ರಯಾಣ ಮಾಡುವುದಕ್ಕೆ ಸರ್ಕಾರಿ ಬಸ್ ಅನ್ನು ಅವಲಂಬಿತರಾಗಿದ್ದಾರೆ. ಆದರೆ ಇತ್ತೀಚಿನ ದಿನದಲ್ಲಿ ಸರ್ಕಾರದ ವತಿಯಿಂದ ಮಹಿಳೆಯರಿಗಾಗಿ ಶಕ್ತಿ ಯೋಜನೆಯು ಘೋಷಣೆಯಾಗಿರುವುದರಿಂದ ಮಹಿಳೆಯರು ಬಸ್ಸಿನ ಸೌಲಭ್ಯ ಇಲ್ಲದೆ ಆಟೋದಲ್ಲಿ ಗಾರ್ಮೆಂಟ್‌ಗೆ ತೆರಳುವಂತಾಗಿದೆ. ಇದರ ಬಗ್ಗೆ ಸಂಬಂಧಪಟ್ಟವರು ಗಮನಹರಿಸಿ ಸಾರ್ವಜನಿಕರಿಗೆ ಉಪಯೋಗವಾಗುವಂತೆ ಹೆಚ್ಚಿನ ಸರ್ಕಾರಿ ಬಸ್ಸುಗಳ ಸೌಲಭ್ಯವನ್ನು ಕಲ್ಪಿಸಬೇಕೆಂದು ಮನವಿ. ಈ ಮಾರ್ಗದಲ್ಲಿ ಖಾಸಗಿ ಬಸ್ಸುಗಳ ಸಂಚಾರವಿಲ್ಲ ಎಂಬುದನ್ನು ಅಧಿಕಾರಿಗಳು ಮನಗಾಣಬೇಕು.


–ಕುಮಾರ ಎಸ್, ಮಾವಿನಹಳ್ಳಿ

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

8. ರಾವ್ ಬಹದ್ದೂರ್ ಮುತ್ತಣ್ಣ





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ಒಂದೇ ಕುಟುಂಬದ ತಂದೆ ಮತ್ತು ಇಬ್ಬರು ಮಕ್ಕಳು 70 ವರ್ಷಗಳ ಕಾಲ ಮೈಸೂರಿನ ಅರಣ್ಯ ಇಲಾಖೆಯಲ್ಲಿ ಗಮನಾರ್ಹ ಸೇವೆ ಸಲ್ಲಿಸಿ ತಮ್ಮ ಛಾಪು ಮೂಡಿಸಿ ಹೋಗಿದ್ದಾರೆ. ಅವರೆಂದರೆ ರಾವ್ ಬಹದ್ದೂರ್ ಮುತ್ತಣ್ಣ ಮತ್ತು ಅವರ ಇಬ್ಬರು ಪುತ್ರರು. ಎಂ. ಮಾಚಯ್ಯ ಮತ್ತು ಎಂ.ಎ. ಮುತ್ತಣ್ಣ.

ಮನ್ನಪಂಡ ಮುತ್ತಣ್ಣ ಅವರು 1855ರ ಅಕ್ಟೋಬರ್ 2ರಂದು ಕೊಡಗಿನ ಪ್ರತಿಷ್ಠಿತ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಕೊಡಗಿನಲ್ಲಿ ದೊಡ್ಡ ಪ್ರಮಾಣದ ಭೂಮಿ ಹೊಂದಿದ್ದರು. ಪ್ರಾರಂಭದಲ್ಲಿ ಮಡಿಕೇರಿಯ ಸೆಂಟ್ರಲ್ ಸ್ಕೂಲಿನಲ್ಲಿ ವ್ಯಾಸಂಗ ಮಾಡಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದು ಸೆಂಟ್ರಲ್ ಕಾಲೇಜು ಸೇರಿದರು. ವಿದ್ಯಾಭ್ಯಾಸ ಮುಗಿಸಿ 1878ರಲ್ಲಿ ಅರಣ್ಯ ಇಲಾಖೆಯಲ್ಲಿ ಪ್ರೊಬೇಷನರ್ ಆಗಿ ಕೆಲಸಕ್ಕೆ ಸೇರಿದರು.

ಮುತ್ತಣ್ಣನವರು ಇಂಪೀರಿಯಲ್ ಫಾರೆಸ್ಟ್ ಸರ್ವೀಸ್‌ಗೆ ಸೇರಿದ ಮೊದಲ ಭಾರತೀಯ ಅಧಿಕಾರಿಯಾಗಿದ್ದರು. ಮೊದಲಿಗೆ ಬ್ರಿಟಿಷ್ ಆಧಿಪತ್ಯಕ್ಕೆ ಒಳಪಟ್ಟಿದ್ದ ಬೇರಾರ್ ಅರಣ್ಯ ವಿಭಾಗದಲ್ಲಿ ಸೇವೆಗೆ ಸೇರಿ ಅಲ್ಲಿ ಪ್ರಸಿದ್ಧಿ ಗಳಿಸಿದ್ದ ಬೀಟೆ ಮರಗಳನ್ನು ಅರಣ್ಯದಲ್ಲಿ ವ್ಯಾಪಕವಾಗಿ ಬೆಳಸುವುದು ಮತ್ತು ಮರಗಳನ್ನು ದಿಮ್ಮಿಗಳನ್ನಾಗಿ ನಾಟಾ ಮಾಡುವುದು. ಈ ಎರಡು ಪ್ರಮುಖ ಕೆಲಸಗಳಲ್ಲಿ ಕ್ರಾಂತಿಯನ್ನೇ ತಂದು ಶ್ರೇಷ್ಠ ಮಟ್ಟದ ಕೆಲಸ ಮಾಡಿ ಹೆಸರು ಗಳಿಸಿದರು. ಇವರ ಈ ವಿಶಿಷ್ಟ ಸಾಧನೆಯನ್ನು ಸರ್ಕಾರ ಗುರುತಿಸಿ ಇವರಿಗೆ ರಾವ್ ಬಹದ್ದೂರ್ ಪ್ರಶಸ್ತಿ ನೀಡಿ ಗೌರವಿಸಿತು. ಮುತ್ತಣ್ಣ ಸ್ವತಂತ್ರ ಮನೋಭಾವದ ಅಧಿಕಾರಿ. ತಾವು ಮಾಡುತ್ತಿದ್ದ ರೀತಿಯದೇ ಕೆಲಸ ಮಾಡುತ್ತಿದ್ದ ಆಂಗ್ಲ ಜಿಲ್ಲಾ ಅರಣ್ಯ ಅಧಿಕಾರಿಗೆ ತಮಗಿಂತ ಹೆಚ್ಚಿನ ವೇತನ ನೀಡುತ್ತಿದ್ದನ್ನು ವಿರೋಧಿಸಿ ಆಗಿನ ವೈಸರಾಯ್ ಅವರಿಗೇ ಪತ್ರ ಬರೆದರು. ಆಂಗ್ಲ ಅಧಿಕಾರಿಗೆ ವಿದೇಶೀ ಭತ್ಯೆ ಕೊಡುವುದೇನೋ ಸರಿ, ಆದರೆ ಮೂಲ ವೇತನದಲ್ಲಿನ ವ್ಯತ್ಯಾಸ ನ್ಯಾಯವಲ್ಲ ಹಾಗೂ ಇದು ಭಾರತೀಯನೊಬ್ಬನಿಗೆ ತೋರಿದ ಭೇದಭಾವವನ್ನು ಸೂಚಿಸುತ್ತದೆ ಎಂದು ಬರೆದರು. ಭಾರತ ಸರ್ಕಾರ ಹೊಂದಿದ್ದ ದೃಷ್ಟಿಕೋನವನ್ನು ಮುತ್ತಣ್ಣನವರಿಗೆ ಅವರ ಪತ್ರದ ಹಿನ್ನೆಲೆಯಲ್ಲಿ ವಿವರಿಸಿ ಹೇಳಲು ದೆಹಲಿಯಿಂದ ಡೆಪ್ಯುಟಿ ಆಡಿಟರ್ ಜನರಲ್ ಅವರನ್ನು ಕಳುಹಿಸಲಾಯಿತು. ಆತ ಕೊಟ್ಟ ಸಮಜಾಯಿಷಿ ಮುತ್ತಣ್ಣನವರಿಗೆ ಸರಿ ಕಾಣಲಿಲ್ಲ. ಕೆಲಸಕ್ಕೆ ರಾಜೀನಾಮೆ ನೀಡಿ ಕಾಫೀ ಪ್ಲಾಂಟರ್ ವೃತ್ತಿಯಲ್ಲಿ ಮುಂದಿನ ಬದುಕನ್ನು ನಡೆಸಲು ಕೊಡಗಿಗೆ ಹಿಂತಿರುಗಿದರು.

ಈ ಮಧ್ಯೆ ರಾವ್ ಬಹದ್ದೂರ್ ಮುತ್ತಣ್ಣನವರ ಕಾರ್ಯ ಸಾಧನೆಗಳ ಬಗ್ಗೆ ಅರಿತ ಮೈಸೂರು ಮಹಾರಾಜರು ಓರ್ವ ಅಧಿಕಾರಿಯನ್ನು ಕೊಡಗಿಗೆ ಕಳುಹಿಸಿ ತಮ್ಮ ಸರ್ಕಾರದಲ್ಲಿ ಸೇವೆ ಕೈಗೊಳ್ಳುವಂತೆ ಅವರನ್ನು ಆಹ್ವಾನಿಸಿದರು. ಮೈಸೂರು ಅರಣ್ಯ ಇಲಾಖೆಯ ಮುಖ್ಯಸ್ಥ ಓರ್ವ ಆಂಗ್ಲನಾಗಿದ್ದು, ಅವನ ಕಾರ್ಯ ನಿರ್ವಹಣೆ ಮಹಾರಾಜರಿಗೆ ಸಮಾಧಾನ ತಂದಿಲ್ಲವೆಂಬುದನ್ನು ತಿಳಿದ ಮುತ್ತಣ್ಣ ಮಹಾರಾಜರು ಕಳುಹಿಸಿದ್ದ ಕರೆಯನ್ನು ಒಪ್ಪಿ ಮೈಸೂರು ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಲು ಒಪ್ಪಿಕೊಂಡರು. 1900ರ ನವೆಂಬರ್ ಒಂದರಂದು ಮೈಸೂರು ಸರ್ಕಾರದ ಸೇವೆಗೆ ಸೇರಿದ ಅವರಿಗೆ ಮೊದಲಿಗೆ ಎಕ್ಸ್–ಅಫಿಷಿಯೋ ಕಾರ್ಯದರ್ಶಿ ಸ್ಥಾನ ನೀಡಲಾಯಿತು. 1901ರ ಪ್ರಾರಂಭದಲ್ಲಿಯೇ ಅವರನ್ನು ಮೈಸೂರು ಅರಣ್ಯ ಇಲಾಖೆಯ ಕನ್ಸರ್ವೇಟರ್ ಹುದ್ದೆಗೆ ನೇಮಿಸಲಾಯಿತು. ಅಲ್ಲಿಯವರೆಗೆ ಆ ಸ್ಥಾನದಲ್ಲಿದ್ದ ಎಲ್.ಸಿ. ಪಿಗೋಟ್ ಎಂಬ ಆಂಗ್ಲ ಅಧಿಕಾರಿಯಿಂದ ಮುತ್ತಣ್ಣನವರು ಅಧಿಕಾರ ವಹಿಸಿಕೊಂಡು ಇಲಾಖೆಯ ಮುಖ್ಯಸ್ಥರಾದರು.

ರಾವ್ ಬಹದ್ದೂರ್ ಮುತ್ತಣ್ಣನವರು 12 ವರ್ಷಗಳ ದೀರ್ಘ ಕಾಲ ಈ ಸ್ಥಾನದಲ್ಲಿದ್ದು ಹಲವಾರು ಗಮನಾರ್ಹ ಬದಲಾವಣೆಗಳನ್ನು ತಂದು ನೂತನ ವ್ಯವಸ್ಥೆಗಳನ್ನು ರೂಪಿಸಿದರು. ಕಾಡಾನೆಗಳನ್ನು ನದಿಯಲ್ಲಿ ಅಟ್ಟಿಸಿಕೊಂಡು ಹೋಗುವ ಮೈನವಿರೇಳುವ 'ರಿವರ್ ಡ್ರೈವ್' ಕಾರ್ಯಾಚರಣೆಯನ್ನು ಪ್ರಾರಂಭಿಸಿ ಅದೊಂದು ದೊಡ್ಡ ಆಕರ್ಷಣೆಯಾಗುವಂತೆ ಮಾಡಿದರು. ಖೆಡ್ಡಾದ ಭಾಗವಾದ ಈ ಮೈನವಿರೇಳುವ ಕಾರ್ಯ ಇಂಡಿಯಾದ ವೈಸರಾಯ್ ಅವರಿಗೂ ಒಂದು ಆಕರ್ಷಣೆಯಾಗಿ ಅವರೂ ಅದನ್ನು ವೀಕ್ಷಿಸಲು ಮೈಸೂರಿಗೆ ಬಂದರು. ಇದರಿಂದಾಗಿ ಮೈಸೂರಿನ ಖೆಡ್ಡಾ ಅಂತರರಾಷ್ಟ್ರೀಯ ಪ್ರಸಿದ್ಧಿ ಗಳಿಸಿತು. ದಟ್ಟ ಮಲೆನಾಡು ಅರಣ್ಯದಲ್ಲಿ ಕಾಡಾನೆಗಳು ಹೋಗುವ ಮಾರ್ಗ 20 ಕಿಲೋ ಮೀಟರುಗಳೆಂದು ನಿರ್ಧರಿಸಲಾಗಿತ್ತು. ಮುತ್ತಣ್ಣನವರು ಈ 20 ಕಿಲೋ ಮೀಟರುಗಳಿಗೆ ಒಂದು ಫಾರೆಸ್ಟ್ ಲಾಡ್ಜ್ ನಿರ್ಮಿಸಿದರು. ಅಧಿಕಾರಿಗಳಿಗೆ ಇದು ಆಯಕಟ್ಟಿನ ಜಾಗಗಳಲ್ಲಿ ತಂಗಲು ಮತ್ತು ಪ್ರಮುಖವಾದ ಅರಣ್ಯದ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಯಿತು. ಅವರು ಇಲಾಖೆಯಲ್ಲಿ ಮಾಡಿದ ಮತ್ತೊಂದು ಕೆಲಸವೆಂದರೆ ಮುಕ್ತವಾದ ಮತ್ತು ಚರ್ಚಿಸಬಹುದಾದ ಗೌಪ್ಯ ವರದಿ ವ್ಯವಸ್ಥೆಯನ್ನು ಜಾರಿಗೆ ತಂದುದು. ಇದರಿಂದಾಗಿ ಒಬ್ಬ ಕೆಳಮಟ್ಟದ ಅಧಿಕಾರಿ ಕೂಡ ತನ್ನ ಗೌಪ್ಯ ವರದಿಯಲ್ಲಿ ತನಗೆ ಅನ್ಯಾಯವಾಗಿದೆ ಎಂದು ಭಾವಿಸಿದರೆ ಮೇಲಿನವರೆಗೆ ಮನವಿ ಸಲ್ಲಿಸಬಹುದಾಗಿತ್ತು. ರಾಜ್ಯದ ಇತರ ಇಲಾಖೆಗಳು ಇದೇ ವ್ಯವಸ್ಥೆಯನ್ನು ನಂತರ ಜಾರಿಗೆ ತಂದವು.

ರಾಜ್ಯಕ್ಕೆ ಅದರಲ್ಲಿಯೂ ಮುಖ್ಯವಾಗಿ ಅರಣ್ಯ ಇಲಾಖೆಗೆ ಅವರು ಸಲ್ಲಿಸಿದ ಶ್ರೇಷ್ಠ ಸೇವೆಯನ್ನು ಗುರುತಿಸಿದ ಮಹಾರಾಜರು ರಾವ್ ಬಹದ್ದೂರ್ ಮುತ್ತಣ್ಣನವರಿಗೆ ಎರಡು ಸಲ ಪದಕ ತೊಡಿಸಿ ಅಲಂಕರಿಸಿದರು.

ರಾವ್ ಬಹದ್ದೂರ್ ಮುತ್ತಣ್ಣ ಅವರ ಹಿರಿಯ ಪುತ್ರ ಎಂ. ಮಾಚಯ್ಯನವರೂ ಅರಣ್ಯ ಇಲಾಖೆಗೆ 1911ರಲ್ಲಿ ಸೇರಿದರು. ಇವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಓದಿದ್ದರು. ಪರೀಕ್ಷೆಯಲ್ಲಿ ಮೊದಲ ದರ್ಜೆ ಗಳಿಸಿದ್ದರು. ಪರಿಶ್ರಮದಿಂದ ದುಡಿದು ತಮ್ಮ ವೃತ್ತಿಯಲ್ಲಿ ಮೇಲ್ದರ್ಜೆಗೆ ಏರಿದ್ದರು. ಚುರುಕು ಬುದ್ಧಿಯವರಾಗಿದ್ದು ತಮ್ಮ ವ್ಯವಹಾರಗಳಲ್ಲಿ ತಾತ್ವಿಕ ಮನೋಭಾವದವರಾಗಿದ್ದರು.

1935ರಲ್ಲಿ ಇಲಾಖೆಯ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡು ತಮ್ಮ ತಂದೆಯವರಂತೆಯೇ ಹಲವಾರು ಪ್ರಗತಿಪರ ಕಾರ್ಯಗಳನ್ನು ಅವರು ಕೈಗೊಂಡರು. ಸಮೀಕ್ಷಾ ವರದಿಗಳು ಮತ್ತು ಅರಣ್ಯಗಳ ನಕ್ಷೆಗಳನ್ನು ನವೀಕರಿಸಿದರು. ಪ್ರತಿ ವಲಯ ಮತ್ತು ಜಿಲ್ಲಾ ಪ್ರದೇಶಗಳ ಕಾರ್ಯಭಾರದ ಆಧಾರದ ಮೇಲೆ ಅವುಗಳ ಪ್ರದೇಶಗಳನ್ನು ಸ್ಪಷ್ಟವಾಗಿ ನಿಗದಿಗೊಳಿಸಿದರು.

ಕೆಲವು ವರ್ಷಗಳ ನಂತರ ರಾವ್ ಬಹದ್ದೂರ್ ಮುತ್ತಣ್ಣನವರ ಕಿರಿಯ ಪುತ್ರ ಎಂ. ಎ. ಮುತ್ತಣ್ಣ ಸಹ ಅರಣ್ಯ ಇಲಾಖೆಗೆ ಸೇರಿದರು. ಎಂ. ಮಾಚಯ್ಯನವರ ಕಿರಿಯ ಸಹೋದರರಾದ ಇವರು 1928ರಲ್ಲಿ ಡೆಹ್ರಾಡೂನಿನ ಅರಣ್ಯ ಕಾಲೇಜಿನಲ್ಲಿ ಶಿಕ್ಷಣವನ್ನು ಮುಗಿಸಿದರು. ಇವರು ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳಲ್ಲಿ ಮೊದಲ ಬಹುಮಾನ ಗಳಿಸಿದರು. ಇದಕ್ಕೆ ಮುಂಚೆ ಅವರು ಮುಂಬಯಿನಲ್ಲಿನ ಪ್ರಸಿದ್ಧ ಸೇಂಟ್ ಗ್ಸೇವಿಯರ್ ಕಾಲೇಜಿನಿಂದ ಪದವಿ ಗಳಿಸಿದ್ದರು. ಆ ಕಾಲೇಜಿನಲ್ಲಿ ಓದುತ್ತಿದ್ದಾಗ ತಮ್ಮ ವಿಷಯಾಭ್ಯಾಸದಲ್ಲಿ ಮತ್ತು ಕ್ರೀಡೆಗಳಲ್ಲಿ ಮುತ್ತಣ್ಣ ಮೇರು ಸಾಧನೆ ಮಾಡಿದ್ದರು. 1948ರಲ್ಲಿ ಮೈಸೂರು ಅರಣ್ಯ ಇಲಾಖೆಗೆ ಸೇರಿದ ಮೇಲೆ ಇವರು ತಮ್ಮ ತಂದೆ ಮತ್ತು ಅಣ್ಣನಂತೆ ತಾವೂ ಇಲಾಖೆಯ ಮುಖ್ಯಸ್ಥರಾದರು. ಸುಮಾರು ಹತ್ತು ವರ್ಷಗಳ ಕಾಲ 1958ರವರೆಗೆ ಈ ಸ್ಥಾನದಲ್ಲಿ ಮುಂದುವರಿದರು.

ತಮ್ಮ ಸೇವಾವಧಿಯಲ್ಲಿ ಇವರು ಮಾಡಿದ ಮಹಾ ಕಾರ್ಯಗಳೆಂದರೆ ಎರಡನೇ ವಿಶ್ವಯುದ್ಧದಲ್ಲಿ ಸೈನ್ಯಕ್ಕೆ ಇಂಧನದ ಅವಶ್ಯಕತೆಗಳಿಗಾಗಿ ಬೇಗ ಬೆಳೆಯುವಂತ ಮರಗಳನ್ನು ಬೆಳೆಸುವುದನ್ನು ಉತ್ತೇಜಿಸಿದರು. ಇದರಿಂದ ಇಂಧನಕ್ಕಾಗಿ ಉಪಯೋಗಿಸುವ ಕಾಡು ಮರಗಳ ಬದಲು ಬೆಲೆಬಾಳುವ ಮರಗಳನ್ನು ಬಳಸುವುದನ್ನು ತಪ್ಪಿಸಿದಂತಾಗಿ ಹೆಚ್ಚಿನ ಉಳಿತಾಯ ಸಾಧ್ಯವಾಯಿತು. ಇಂದು ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಸಾಮಾಜಿಕ ಅರಣ್ಯ ಪದ್ಧತಿಯನ್ನು ಮುತ್ತಣ್ಣ ಮೊದಲಿಗೆ ಪ್ರಾರಂಭಿಸಿ ಅರಣ್ಯ ಇಲಾಖೆಯಲ್ಲಿ ಈ ಯೋಜನೆಯ ಪ್ರವರ್ತಕರಾದರು. 1949ರಲ್ಲಿ ಪ್ರಧಾನಿ ಜವಾಹರಲಾಲ್ ನೆಹರು ಮೈಸೂರಿಗೆ ಬಂದಾಗ ಖೆಡ್ಡಾ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಿ ತಮ್ಮ ಇಲಾಖೆ ವಿಶಿಷ್ಟವಾಗಿ ನಡೆಸುವ ಕಾಡಾನೆಗಳನ್ನು ಹಿಡಿಯುವ ಕಾರ್ಯವನ್ನು ತೋರಿಸಿದರು. ಅಂದು ಖೆಡ್ಡಾ ಕಾರ್ಯಾಚರಣೆಯಲ್ಲಿ ಹಿಡಿಯಲಾಗುತ್ತಿದ್ದ ಕಾಡಾನೆಗಳ ಪೈಕಿ ಹೆಚ್ಚಿನ ಸಂಖ್ಯೆಯ ಆನೆಗಳನ್ನು ರಾಜ್ಯದ ಅರಣ್ಯ ಇಲಾಖೆಗೆ ಹಾಗೂ ಬೇರೆ ರಾಜ್ಯಗಳಿಗೆ ಮಾರಲಾಗುತ್ತಿತ್ತು. ಅಲ್ಲಿ ಅವುಗಳನ್ನು ಅರಣ್ಯ ಇಲಾಖೆಯ ಕೆಲಸ ಕಾರ್ಯಗಳಿಗೆ ಅಥವಾ ಕಾಡಿನಿಂದ ಮರದ ದಿಮ್ಮಿಗಳನ್ನು ಸಾಗಿಸುವುದಕ್ಕೆ ಬಳಸಲಾಗುತ್ತಿತ್ತು.

1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಮಹತ್ವದ ಅವಧಿಯಲ್ಲಿ ಮುತ್ತಣ್ಣನವರು ಇಲಾಖೆಯ ಮುಖ್ಯಸ್ಥರಾಗಿದ್ದರು. ಈ ವೇಳೆ ಅರಣ್ಯ ಇಲಾಖೆಯನ್ನೂ ಪುನರ್ವಿಂಗಡಿಸಬೇಕಾಯಿತು. ಈ ಕೆಲಸವನ್ನು ಅವರು ಸಮರ್ಥವಾಗಿ ನಿರ್ವಹಿಸಿದರು. ಮುಂಬಯಿ, ಮದ್ರಾಸ್, ಕೊಡಗು ಮತ್ತು ಹೈದರಾಬಾದಿನ ಅರಣ್ಯ ಇಲಾಖೆಗಳಲ್ಲಿನ ಅತ್ಯುತ್ತಮ ಆಡಳಿತ ಕ್ರಮಗಳು ಹಾಗೂ ಕಾರ್ಯ ವಿಧಾನಗಳನ್ನು ರಾಜ್ಯದಲ್ಲೂ ಬಳಕೆಗೆ ತಂದರು. ಎಲ್ಲಕ್ಕಿಂತ ಮುಖ್ಯವಾಗಿ ಆ ರಾಜ್ಯಗಳ ಅಧಿಕಾರಿಗಳು ಮೈಸೂರು ರಾಜ್ಯದ ಆಡಳಿತಕ್ಕೆ ಒಳಪಟ್ಟಾಗ ಅವರುಗಳನ್ನು ಪುನರ್ವಿಂಗಡಿತವಾಗಿದ್ದ ಕರ್ನಾಟಕದ ಐಕ್ಯತೆಗೆ ಹೆಚ್ಚು ನೆರವಾಗುವಂತಹ ಸ್ಥಳಗಳಲ್ಲಿ ನಿಯುಕ್ತಿಗೊಳಿಸಿದರು. ಪುನರ್ವಿಂಗಡಣೆಯಿಂದ ಉದ್ಭವವಾಗಿದ್ದ ಹೊಸ ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸಿ ಸಮನ್ವಯ ಸಾಧಿಸಲು ನೆರವಾಗುವಂತಹ ಸ್ಥಾನಗಳಿಗೆ ಆ ಅಧಿಕಾರಿಗಳನ್ನು ನೇಮಿಸಿ ಅದಕ್ಕಾಗಿ ಆಡಳಿತದಲ್ಲಿ ಅಗತ್ಯ ಬದಲಾವಣೆಗಳನ್ನು ತಂದರು.

ಈ ರೀತಿಯಲ್ಲಿ ತಂದೆ ಮಕ್ಕಳಿಬ್ಬರೂ ಸೇರಿ ಏಳು ದಶಕಗಳ ದೀರ್ಘ ಅವಧಿಗೆ ರಾಜ್ಯದ ಅರಣ್ಯ ಇಲಾಖೆಯಲ್ಲಿ, ಅದರ ಅತ್ಯುತ್ತಮ ಸಂಪ್ರದಾಯ ಹಾಗೂ ಮೌಲ್ಯಗಳನ್ನು ಎತ್ತಿ ಹಿಡಿದು, ವಿಶಿಷ್ಟ ಸೇವೆ ಸಲ್ಲಿಸಿದ ಅಪರೂಪದ ಜೊತೆಗಾರರಾದರು.

ಸುತ್ತೂರಲ್ಲಿ 42ನೇ ರಾಷ್ಟ್ರಮಟ್ಟದ ನಾಡಕುಸ್ತಿ ಪಂದ್ಯಾವಳಿ

ಹರಿಯಾಣದ ಪೈ.ಸುಮೀತ್ ಗುಜ್ಜರ್‌ಗೆ ಸುತ್ತೂರು ಕೇಸರಿ ಪ್ರಶಸ್ತಿ



ನಂಜನಗೂಡು, ಫೆ.10–ಸುತ್ತೂರು ಜಾತ್ರಾ ಮಹೋತ್ಸವ ಅಂಗವಾಗಿ ನಡೆದ 42ನೇ ರಾಷ್ಟ್ರ ಮಟ್ಟದ ನಾಡಕುಸ್ತಿ ಪಂದ್ಯಾವಳಿಯಲ್ಲಿ ಹರಿಯಾಣದ ಪೈಸುಮೀತ್ ಗುಜ್ಜರ್ ತಮ್ಮ ಎದುರಾಳಿ ಮಹಾರಾಷ್ಟ್ರದ ಪೈಸಾಗರ್ ಠಾಮಡೆಯನ್ನು ಮಣಿಸಿ ಸುತ್ತೂರು ಕೇಸರಿ ಪ್ರಶಸ್ತಿ ತನ್ನದಾಗಿಸಿಕೊಂಡರು.

ಶನಿವಾರ ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ರಾಷ್ಟ್ರ ಮಟ್ಟದ 65 ಜೊತೆ ಕಾಟಾ ಕುಸ್ತಿ ಪಂದ್ಯಾವಳಿ ಏರ್ಪಡಿಸಲಾಗಿತ್ತು. ಸುತ್ತೂರು ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮ್ಮುಖದಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿದರು.

ಸುತ್ತೂರು ಕುಮಾರ ಪ್ರಶಸ್ತಿಗಾಗಿ ನಡೆದ ಸೆಣಸಾಟದಲ್ಲಿ ಮೈಸೂರು ಚಾಮುಂಡಿ ಕ್ರೀಡಾಂಗಣದ ಪೈ.ನಿತಿನ್, ಮತ್ತೋರ್ವ ಕುಸ್ತಿಪಟು ಮೈಸೂರಿನ ಭೂತಪ್ಪ ಗರಡಿ ಪೈ.ದೀಕ್ಷಿತ್‌ರನ್ನು ಮಣಿಸಿ ಸುತ್ತೂರು ಕುಮಾರ ಪ್ರಶಸ್ತಿ ಜಯಿಸಿದರು. ಉಳಿದಂತೆ ಮೈಸೂರು, ಚಾಮರಾಜನಗರ, ಹಾಸನ ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 65 ಜೊತೆ ಕುಸ್ತಿ ಪಟುಗಳು ಪಂದ್ಯಾವಳಿಯಲ್ಲಿ ಸೆಣಸಾಡಿದರು. ಎಲ್ಲರಿಗೂ ತಲಾ 5 ನಿಮಿಷ ಕಾಲ ನಿಗದಿ ಮಾಡಿ ಕಣಕ್ಕಿಳಿಸಲಾಗಿತ್ತು. ಭಾಗವಹಿಸಿದವರಿಗೆ ಪ್ರಮಾಣ ಪತ್ರ ಹಾಗೂ ಪಾರಿತೋಷಕ ನೀಡಿ ಗೌರವಿಸಲಾಯಿತು.

ಕುಸ್ತಿ ಕಣ್ತುಂಬಿಕೊಳ್ಳಲು ನೆರೆದಿದ್ದ ಸಾವಿರಾರು ಜನರು ಶಿಳ್ಳೆ, ಚಪ್ಪಾಳೆ ಮೂಲಕ ಪೈಲ್ವಾನರನ್ನು ಹುರಿದುಂಬಿಸಿದರು. ಪೈಲ್ವಾನರ ಸೆಣಸಾಟದಲ್ಲಿ ಪಟ್ಟುಗಳನ್ನು ಹಾಕಿ ಗೆಲುವಿಗಾಗಿ ಹೋರಾಡಿದ್ದನ್ನು ಕಂಡು ಪ್ರೇಕ್ಷಕರು ಖುಷಿಪಟ್ಟರು.

ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಬದಲಾದ ಪರಿಸ್ಥಿತಿಯಲ್ಲಿ ಜನರ ಜೀವನ ಶೈಲಿ ಹಾಗೂ ಆಹಾರ ಸೇವನೆ ಕ್ರಮ ಬದಲಾಗಿದ್ದು, ಜೊತೆಗೆ ದೈಹಿಕ ಕಸರತ್ತಿನ ಆಟೋಟಗಳಿಂದಲೂ ದೂರಾಗಿರುವುದರಿಂದ ಜನರು ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಹೀಗಾಗಿ ನಮ್ಮ ಜೀವನ ಶೈಲಿ ಬದಲಾಯಿಸಿಕೊಂಡು ಆರೋಗ್ಯ ಪೂರ್ಣ ಜೀವನಕ್ಕೆ ಮುಂದಾಗಬೇಕು ಎಂದರು. ಈ ವೇಳೆ ಮೈಸೂರಿನ ಉರಿಲಿಂಗಪೆದ್ದಿ ಮಠದ ಶ್ರೀಜ್ಞಾನ ಪ್ರಕಾಶ್ ಸ್ವಾಮೀಜಿ, ಶಾಸಕರಾದ ಗಣೇಶ್‌ಪ್ರಸಾದ್, ದೇವೇಂದ್ರಪ್ಪ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ಧರಾಮಯ್ಯ, ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ, ವಿಶ್ರಾಂತ ಕುಲಪತಿ ಹೇಮಂತ್ ಕುಮಾರ್ ಮತ್ತಿತರರಿದ್ದರು.



ಮೈಸೂರು ತಾಲೂಕು ನಾಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಂಘದ ನೂತನ ಅಧ್ಯಕ್ಷರಾಗಿ ಡಿ. ರಾಮಚಂದ್ರ ಅವಿರೋಧವಾಗಿ ಆಯ್ಕೆಯಾದರು. ಅವರನ್ನು ಗ್ರಾಮದ ಮುಖಂಡರಾದ ಕುಮಾರ್ (ರುಚಿ ಚಿಕನ್, ಹೆಬ್ಬಾಳ್) ಇತರರು ಅಭಿನಂದಿಸಿದರು.

ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ



ಮಲ್ಕುಂಡಿ, ಫೆ10– ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಇಲ್ಲಿಗೆ ಸಮೀಪದ ದೇವರಾಯಶೆಟ್ಟಿಪುರದಲ್ಲಿ 30 ಲಕ್ಷ ರೂ. ವೆಚ್ಚದ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಶಾಲೆಗಳಲ್ಲಿ ಬಡಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿ ಕೊಠಡಿ ಕೊರತೆ ಗಮನಿಸಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಆದ್ದರಿಂದ ಪೋಷಕರು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದ ಅವರು, ಮುಂದಿನ ದಿನಗಳಲ್ಲಿ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕೆ.ಜಿ.ಮಹೇಶ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಗ್ರಾಪಂ ಅಧ್ಯಕ್ಷೆ ಶಿಲ್ಪ, ಉಪಾಧ್ಯಕ್ಷ ಬಿ.ಟಿ.ಕುಮಾರ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಬಿಇಓ ಶಿವಲಿಂಗಯ್ಯ, ವೆಂಕಟೇಶ್, ಮಹದೇವು, ಗ್ರಾಪಂ ಸದಸ್ಯರಾದ ಸಿದ್ದರಾಜು, ಚನ್ನಕೇಶವ, ಮುಖಂಡ ಪರಮೇಶ್ ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಲಂಡನ್‌ನ 'ಟೊಕಾಟಾ'; ನೆದರ್ಲ್ಯಾಂಡ್ಸ್‌ನ 'ದಿ ಡಚ್ ನೈಟಿಂಗೇಲ್ಸ್' ಸಂಗೀತ ಗೋಷ್ಠಿ



ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಲಂಡನ್‌ನ 'ಟೊಕಾಟಾ', ನೆದರ್ಲ್ಯಾಂಡ್ಸ್‌ನ 'ದಿ ಡಚ್ ನೈಟಿಂಗೇಲ್ಸ್' ಸಮೂಹದ ಭವ್ಯ ಸಂಗೀತ ಸಂಭ್ರಮಕ್ಕೆ ಖ್ಯಾತ ವಯೋಲಿನ್ ವಾದಕ ಮೈಸೂರು ಮಂಜುನಾಥ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಚಾಲನೆ ನೀಡಿ, ಮಾತನಾಡಿದರು. ಮೈಸೂರು ಮ್ಯೂಸಿಕ್ ಅಸೋಸಿಯೇಷನ್‌ನ ಅಧ್ಯಕ್ಷ ಎಂ.ಲಕ್ಷ್ಮಿನಾರಾಯಣ್, ಕಾರ್ಯದರ್ಶಿ ನರಸಿಂಹನ್. ಡಾ.ಸುನೀಲ್ ಪಾಲ್‌ರಾಜ್ ಮತ್ತಿತರರಿದ್ದರು.



ಲಂಡನ್‌ನ ಟೊಕಾಟಾ, ನೆದರ್ಲ್ಯಾಂಡ್ಸ್ 'ದಿ ಡಚ್ ನೈಟಿಂಗೇಲ್ಸ್' ಕಲಾವಿದರ ಸುಶ್ರಾವ್ಯ ಸಮೂಹ ಗಾಯನ

ಮೈಸೂರು, ಫೆ.10(ಎಂಕೆ)– ಅರಮನೆ ನಗರಿಯಲ್ಲಿ ಲಂಡನ್‌ನ 'ಟೊಕಾಟಾ', ನೆದರ್ಲ್ಯಾಂಡ್ಸ್‌ನ 'ದಿ ಡಚ್ ನೈಟಿಂಗೇಲ್ಸ್' ಸಮೂಹದ ಭವ್ಯ ಸಂಗೀತ ಸಂಭ್ರಮ...!

ಮೈಸೂರು ಮ್ಯೂಸಿಕ್ ಅಸೋಸಿಯೇಷನ್ ವತಿಯಿಂದ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಲಂಡನ್‌ನ ಟೊಕಾಟಾ ಮ್ಯೂಸಿಕಲ್ ಪ್ರೊಡಕ್ಷನ್ಸ್ ಹಾಗೂ ನೆದರ್ಲ್ಯಾಂಡ್ಸ್ 'ದಿ ಡಚ್ ನೈಟಿಂಗೇಲ್ಸ್' ಕಲಾವಿದರ ಸುಶ್ರಾವ್ಯ ಸಮೂಹ ಗಾಯನ ಕಲಾಭಿಮಾನಿಗಳಿಗೆ ರಸದೌತಣ ನೀಡಿತು.

ಮೈಸೂರಿನ ಖ್ಯಾತ ವಯೋಲಿನ್ ವಾದಕ ಮೈಸೂರು ಮಂಜುನಾಥ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಂದ ಚಾಲನೆ ಪಡೆದ ಭವ್ಯ ಸಂಗೀತ ಸಂಭ್ರಮದಲ್ಲಿ ಇಂಗ್ಲಿಷ್ ಹಾಡುಗಳೊಂದಿಗೆ ರೊಮ್ಯಾಂಟಿಕ್ ನೃತ್ಯ ಪ್ರದರ್ಶನ ನೀಡಿದ ಕಲಾವಿದರು ನೆರೆದಿದ್ದ ಕಲಾಪ್ರೇಕ್ಷಕರ ಹೃದಯ ಗೆದ್ದರು.

ಡಾ.ಸುನೀಲ್ ಪಾಲ್‌ರಾಜ್ ನೇತೃತ್ವದಲ್ಲಿ 'ಸಮ್ ಲವಿಂಗ್', 'ಅಪಲ್ ಜಾಕ್' ಹಾಡಿನೊಂದಿಗೆ ಸೃಷ್ಟಿಯಾದ ಸಂಗೀತ ಲೋಕದಲ್ಲಿ ಗಾಯಕಿ ಫಿಂಯೋನಾ, ಗಾಯಕ ಜೇವ್ಸ್ 'ಕೊಲ್ ಮಿನೆರ್ಸ್ ಡಾಟರ್' ಹಾಡನ್ನು ಹಾಡಿದರೆ, ಗಾಯಕ ಮಾರ್ಕ್ 'ಬ್ಲೆಸ್ ದ ಬ್ರೊಕನ್ ರೋಡ್' ಹಾಡನ್ನು ಹಾಡಿ ಗಮನ ಸೆಳೆದರು. ಹಾಗೆಯೇ ಗಾಯಕಿ ಐದೀನ್ ಮತ್ತು ಗಾಯಕ ಜೇಮ್ಸ್ 'ವೆನ್ ಯು ಬಿಲೀವ್' ಹಾಡನ್ನು ಹಾಡಿದರೆ, ಗಾಯಕಿಯರಾದ ಎಮ್ಮಾ ಮತ್ತು ಜೇನ್ 'ಹಲ್ಲೆಲುಜಾ', ಹಾಡು ಹಾಡಿ ರಂಜಿಸಿದರು.

'ಲೆಟ್ ಮಿ ದೇರ್', 'ಹೆಲ್ಪ್ ಫ್ರಾಮ್ ಮೈ ಫ್ರೆಂಡ್ಸ್', 'ಅಬ್ಬಾ ಮೆಡ್ಲಿ', 'ಐ ಡ್ರೀಮಡ್ ಎ ಡ್ರೀಂ', 'ಶಲೋ', 'ಕಿಲ್ಲರ್ ಕ್ವೀನ್', 'ಡೋಂಟ್ ಸ್ಟಾಪ್ ಮಿ ನೌ ಬ್ರೇಕ್', 'ಶೇಕ್ ಎ ಟೈಲ್ ಫಿದರ್', 'ರೊಲಿಂಗ್ ದ ಡೀಪ್', 'ದಿ ಪ್ರೇಯರ್', ಶ್ಯಾಡೊ ಲ್ಯಾಂಡ್ಸ್', 'ಬಾರ್ಡರ್ ಸಾಂಗ್', 'ಥಿಂಕ್', 'ನವೆಂಬರ್ ರೈನ್', 'ಟ್ರೀಸ್ ಆಫ್ ಲಂಡನ್', 'ಟೈಂ ಟು ಸೇ ಗುಡ್‌ಬಾಯ್' ಸೇರಿದಂತೆ 16 ಸುಪ್ರಸಿದ್ಧ ಹಾಡುಗಳನ್ನು ಹಾಡಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಮೈಸೂರಿಗರ ಮನಗೆದ್ದರು.

ವಿಶ್ವದಲ್ಲೇ ಪ್ರಸಿದ್ಧ: ಭವ್ಯ ಸಂಗೀತ ಸಂಭ್ರಮ ಆರಂಭಕ್ಕೂ ಮುನ್ನ ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಮಾತನಾಡಿದ ಮೈಸೂರು ಮ್ಯೂಸಿಕ್ ಅಸೋಸಿಯೇಷನ್ ಅಧ್ಯಕ್ಷ ಎಂ.ಲಕ್ಷ್ಮಿನಾರಾಯಣ್, ಲಂಡನ್‌ನ 'ಟೊಕಾಟಾ', ನೆದರ್ಲ್ಯಾಂಡ್ಸ್‌ನ 'ದಿ ಡಚ್ ನೈಟಿಂಗೇಲ್ಸ್' ಕಲಾವಿದರ ತಂಡ ವಿಶ್ವದಲ್ಲೇ ಪ್ರಸಿದ್ಧ ಪಡೆದಿದೆ. ಈ ತಂಡವನ್ನು ಮುನ್ನಡೆಸುವ ಮೂಲಕ ಡಾ.ಸುನೀಲ್ ಪಾಲ್‌ರಾಜ್ ಮಹತ್ವದ ಸಂಗೀತ ಸೇವೆ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನೆದರ್ಲ್ಯಾಂಡ್ಸ್‌ನ 'ದಿ ಡಚ್ ನೈಟಿಂಗೇಲ್ಸ್' ತಂಡದಲ್ಲಿ 7ರಿಂದ 20 ವರ್ಷದೊಳಗಿನ ಕಲಾವಿದರು ತಮ್ಮ ಗಾಯನದಿಂದಲೇ ಪ್ರಸಿದ್ಧಿ ಪಡೆದಿದ್ದಾರೆ. ಅವರ ತಂಡವೇ ಡಚ್ ದೇಶದ ಸೌಂದರ್ಯವನ್ನು ತಿಳಿಸುತ್ತದೆ. ಮೈಸೂರಿನ ಸಂಗೀತ ಪ್ರಿಯರಿಗೆ ಇದೊಂದು ಅದ್ಭುತ ಅವಕಾಶ ಎಂದು ತಿಳಿಸಿದರು.

ಅಭಿನಂದನೆಗಳು: ಸಂಗೀತ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಖ್ಯಾತ ವಯೋಲಿನ್ ವಾದಕ ಮೈಸೂರು ಮಂಜುನಾಥ್ ಮಾತನಾಡಿ, ಮೊದಲು ಮೈಸೂರು ಮ್ಯೂಸಿಕ್ ಅಸೋಸಿಯೇಷನ್‌ಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶ್ವದಲ್ಲಿ ಅತ್ಯುತ್ತಮ ಸಮಕಾಲೀಕ ಪಾಶ್ಚಾತ್ಯ ಸಂಗೀತ ಕಲಾವಿದರ ತಂಡದಿಂದ ಸಂಗೀತ ಕಾರ್ಯಕ್ರಮ ಆಯೋಜಿಸಿರುವುದು ವಿಶೇಷವಾಗಿದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಏಷ್ಯಾ ಮತ್ತು ಯೂರೋಪ್ ಖಂಡಗಳ ಸಂಗೀತ ಸಮ್ಮಿಲನವೆಂಬಂತೆ ಭಾಸವಾಗುತ್ತಿದೆ ಎಂದು ಹರ್ಷವ್ಯಕ್ತಪಡಿಸಿದರು.

ಬಳಿಕ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, 'ದಿ ಡಚ್ ನೈಟಿಂಗೇಲ್ಸ್' ಮತ್ತು ಲಂಡನ್‌ನ 'ಟೊಕಾಟಾ' ತಂಡ ವಿಶ್ವದಲ್ಲೆ ಖ್ಯಾತಿ ಪಡೆದಿದೆ. ಇಂತಹ ಸಂಗೀತ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದು ಶ್ಲಾಘನೀಯ. ಮೈಸೂರಿನಲ್ಲಿರುವ ಮ್ಯೂಸಿಕ್ ಅಸೋಸಿಯೇಷನ್‌ಗಳಲ್ಲಿಯೇ ಪಾಶ್ಚಿಮಾತ್ಯ ಸಂಗೀತ ಕಾರ್ಯಕ್ರಮವನ್ನು ಆಯೋಜಿಸುವ ಒಂದೇ ಒಂದು ಸಂಘವೆಂದರೆ ಅದು ಮೈಸೂರು ಮ್ಯೂಸಿಕ್ ಅಸೋಸಿಯೇಷನ್ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮೈಸೂರು ಮ್ಯೂಸಿಕ್ ಅಸೋಸಿಯೇಷನ್ ಕಾರ್ಯದರ್ಶಿ ನರಸಿಂಹನ್, ಡಾ.ಸುನೀಲ್ ಪಾಲ್‌ರಾಜ್ ಮತ್ತಿತರರು ಉಪಸ್ಥಿತರಿದ್ದರು.

EPFO ಬಡ್ಡಿ ದರ ಶೇ.8.25ಕ್ಕೆ ಏರಿಕೆ

ನವದೆಹಲಿ: ನಿವೃತ್ತಿ ನಿಧಿ ಸಂಸ್ಥೆ ಇಪಿಎಫ್‌ಒ ನೌಕರರಿಗೆ ಸಿಹಿಸುದ್ದಿ ನೀಡಿದ್ದು, 2023–24ರ ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇ.8.25ಕ್ಕೆ ಹೆಚ್ಚಿಸಿದ್ದು, ಇದು 3 ವರ್ಷಗಳ ಗರಿಷ್ಠ ಮಟ್ಟವಾಗಿದೆ.

ಶನಿವಾರ ನಡೆದ ಇಪಿಎಫ್‌ಒನ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಾದ ಸೆಂಟ್ರಲ್ ಬೋರ್ಡ್ ಆಫ್ ಟ್ರಸ್ಟಿಗಳ (ಸಿಬಿಟಿ) ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, EPF ಮೇಲಿನ ಬಡ್ಡಿದರವನ್ನು 2021–22ರಲ್ಲಿದ್ದ 8.10%ರಿಂದ 2022–23ರ ಆರ್ಥಿಕ ವರ್ಷಕ್ಕೆ 8.15%ಗೆ ಇಪಿಎಫ್‌ಒ ಏರಿಸಿತ್ತು. ಮಾರ್ಚ್ 2023ರಲ್ಲಿ ಆ ಹೆಚ್ಚಳ ಮಾಡಿದ ನಂತರ ಈ ಕ್ರಮ ಬಂದಿದೆ.

EPF ಮೇಲಿನ ಬಡ್ಡಿ ದರವನ್ನು 2020–21ರಲ್ಲಿದ್ದ 8.5%ರಿಂದ 2021–22ರ ಹಣಕಾಸು ವರ್ಷಕ್ಕೆ 8.1%ಕ್ಕೆ ಇಳಿಸಲಾಗಿತ್ತು. ಇದು EPFOದ ನಾಲ್ಕು ದಶಕಗಳ ಅತಿ ಕಡಿಮೆ ಬಡ್ಡಿದರವಾಗಿತ್ತು. ಇದೀಗ ತದ್ವಿರುದ್ಧ ಎಂಬಂತೆ ಬಡ್ಡಿದರ ಏರಿಕೆ ಮಾಡಲಾಗಿದ್ದು, 2023–24ರ 8.25% ಬಡ್ಡಿ ದರವು EPFOನ ಆರು ಕೋಟಿಗೂ ಹೆಚ್ಚು ಸದಸ್ಯರ ಪಾಲಿಗೆ ಧನಾತ್ಮಕ ಬೆಳವಣಿಗೆಯಾಗಿದೆ. 2020–21ರ EPF ಮೇಲಿನ ಬಡ್ಡಿದರವನ್ನು ಮಾರ್ಚ್ 2021ರಲ್ಲಿ 8.5%ಗೆ ನಿಗದಿಪಡಿಸಲಾಗಿತ್ತು. CBTಯ ನಿರ್ಧಾರದ ನಂತರ, ಮುಂಬರುವ ಆರ್ಥಿಕ ವರ್ಷಕ್ಕೆ EPF ಠೇವಣಿಗಳ ಮೇಲಿನ ಬಡ್ಡಿ ದರವನ್ನು ಒಪ್ಪಿಗೆಗಾಗಿ ಹಣಕಾಸು ಸಚಿವಾಲಯಕ್ಕೆ ರವಾನಿಸಲಾಗುತ್ತದೆ.

ಐತಿಹಾಸಿಕ ಬೆಳವಣಿಗೆ: ಮಾರ್ಚ್ 2020 ರಲ್ಲಿ, ಇಪಿಎಫ್‌ಒ ಭವಿಷ್ಯ ನಿಧಿ ಠೇವಣಿಗಳ ಮೇಲಿನ ಬಡ್ಡಿ ದರವನ್ನು 2019–20ಕ್ಕೆ ಏಳು ವರ್ಷಗಳ ಕನಿಷ್ಠ 8.5 ಪ್ರತಿಶತಕ್ಕೆ ಇಳಿಸಿತ್ತು. ಇದು 2018–19 ರಲ್ಲಿ ಶೇಕಡಾ 8.65 ಕ್ಕಿಂತ ಕಡಿಮೆಯಾಗಿದೆ. ಕಳೆದ ವರ್ಷಗಳಲ್ಲಿ, EPFO ಬಡ್ಡಿದರಗಳು 2016–17 ರಲ್ಲಿ ಶೇ.8.65, 2017–18ರಲ್ಲಿ ಶೇ.8.55, ಮತ್ತು 2015–16 ರಲ್ಲಿ ಶೇ.8.8 ಸ್ವಲ್ಪ ಹೆಚ್ಚಿನ ದರಗಳೊಂದಿಗೆ ವ್ಯತ್ಯಾಸಗಳನ್ನು ಕಂಡಿವೆ. ನಿವೃತ್ತಿ ನಿಧಿ ಸಂಸ್ಥೆಯು 2013–14 ಮತ್ತು 2014–15 ರಲ್ಲಿ ಶೇಕಡಾ 8.75 ರಷ್ಟು ಹೆಚ್ಚಿನ ಬಡ್ಡಿದರವನ್ನು ಒದಗಿಸಿತ್ತು. 2012–13ಕ್ಕೆ ಹೋಲಿಸಿದರೆ ಶೇ.8.5, ಆದರೆ ಬಡ್ಡಿದರವು 2011–12 ರಲ್ಲಿ ಶೇ.8.25 ರಷ್ಟಿತ್ತು.

ಕರ್ನಾಟಕದ ಗ್ಯಾರಂಟಿ ಯೋಜನೆ ದೇಶಕ್ಕೇ ಮಾದರಿ

ಗ್ಯಾರಂಟಿ ಫಲಾನುಭವಿಗಳ ಸಭೆಯಲ್ಲಿ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಶ್ಲಾಘನೆ

ಕೆಆರ್.ಪೇಟೆ, ಫೆ10– ದೇಶದ ಯಾವ್ರದೇ ರಾಜ್ಯದಲ್ಲೂ ಕರ್ನಾಟಕ ರೀತಿಯಲ್ಲಿ ಗ್ಯಾರಂಟಿ ಯೋಜನೆಗಳು ಅನುಷ್ಠಾನವಾಗಿಲ್ಲ. ಈ ನಿಟ್ಟಿನಲ್ಲಿ ಗ್ಯಾರಂಟಿ ಯೋಜನೆಯಲ್ಲಿ ಕರ್ನಾಟಕ ದೇಶಕ್ಕೆ ಮಾದರಿಯಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಮ್ಮ ಸರ್ಕಾರವನ್ನು ಶ್ಲಾಘಿಸಿಕೊಂಡರು.

ಶನಿವಾರ ಪಟ್ಟಣದ ಖಾಸಗಿ ಸಮುದಾಯ ಭವನದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಮತ್ತು ವಿವಿಧ ಸರ್ಕಾರಿ ಸೌಲಭ್ಯಗಳ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ವಿಧಾನ ಸಭಾ ಚುನಾವಣೆ ಸಂದರ್ಭದಲ್ಲಿ ನಮ್ಮ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಪ್ರಣಾಳಿಕೆ ಮೂಲಕ ರಾಜ್ಯದ ಮನೆ ಮನೆಗೆ ತಲುಪಿಸಿದ ಫಲವಾಗಿ ರಾಜ್ಯದಲ್ಲಿ ಸಂಪೂರ್ಣ ಬೆಂಬಲದೊಂದಿಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ ಎಂದು ಹೇಳಿದರು.

ಸರ್ಕಾರದ ವತಿಯಿಂದ ನೀಡಲಾಗಿರುವ 5 ಗ್ಯಾರಂಟಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ತಲುಪಬೇಕು. ಬ್ಯಾಂಕ್ ಖಾತೆ ಆಧಾರ್ ಲಿಂಕ್ ಸೇರಿದಂತೆ ಗ್ಯಾರಂಟಿ ಯೋಜನೆಗಳು ಪಡೆಯಲು ತೊಂದರೆಯಿದ್ದಲ್ಲಿ ಸರಿಪಡಿಸಿಕೊಡಲು ಎಲ್ಲಾ ತಾಲೂಕುಗಳಲ್ಲಿ ಸರ್ಕಾರದ ವತಿಯಿಂದ ಗ್ಯಾರಂಟಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 4,36000 ಕುಟುಂಬಗಳಿಗೆ 5 ಕೆ.ಜಿ. ಅಕ್ಕಿ ಹಾಗೂ 5 ಕೆ.ಜಿ ಅಕ್ಕಿಗೆ ರೂ.170ರಂತೆ ಒಟ್ಟು137 ಕೋಟಿ ರೂ. ಹಣ ಡಿಬಿಟಿ ಮೂಲಕ ಪಾವತಿಸಲಾಗಿದೆ. ಕೆ.ಆರ್.ಪೇಟೆಯಲ್ಲಿ 64,422 ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆ, ಗೃಹಲಕ್ಷ್ಮಿ ಯೋಜನೆಯಡಿ 65,000 ಮಹಿಳೆಯರಿಗೆ ರೂ.2000 ನೀಡಲಾಗುತ್ತಿದೆ ಗೃಹ ಜ್ಯೋತಿ ಯೋಜನೆಯನ್ನು 65000 ಕುಟುಂಬಗಳು ಪಡೆಯುತ್ತಿದ್ದಾರೆ ಎಂದು ವಿವರಿಸಿದರು.

ಯುವ ನಿಧಿ ಯೋಜನೆಯಡಿ ನೋಂದಣಿಯನ್ನು ಚುರುಕುಗೊಳಿಸಿ ಎಲ್ಲಾ ಅರ್ಹಫಲಾನುಭವಿಗಳು ಹೆಸರು ನೋಂದಾಯಿಸಿಕೊಳ್ಳಬೇಕು. ಮಾರ್ಚ್ ಅಂತ್ಯದವರೆಗೆ 5 ಗ್ಯಾರಂಟಿಗಳಿಗೆ 56 ಸಾವಿರ ಕೋಟಿ ರೂ. ಅನುದಾನ ಬೇಕಾಗುತ್ತದೆ. ಈ ಐದು ಯೋಜನೆಗಳ ಮೂಲಕ ಒಂದು ಕುಟುಂಬಕ್ಕೆ ಕನಿಷ್ಠ 5000 ರೂ. ದೊರಕುತ್ತದೆ ಎಂದು ಅಂದಾಜಿಸಲಾಗಿದೆ.ಮುಂದಿನ ಸಾಲಿನಲ್ಲಿ 69 ಸಾವಿರ ಕೋಟಿ ರೂ. ಐದು ಗ್ಯಾರಂಟಿಗಳಿಗೆ ಬೇಜಾಗುತ್ತದೆ. ಗ್ಯಾರಂಟಿಗಳಿಗೆ ಮೀಸಲಾಗಿರುವ ಅನುದಾನ ನೇರವಾಗಿ ಯಾವ್ರದೇ ಮಧ್ಯವರ್ತಿಗಳಿಲ್ಲದೇ, ಸಾರ್ವಜನಿಕರು ಯಾವುದೇ ಕಚೇರಿಗೆ ಅಲೆದಾಟ ನಡೆಸದೇ ನೇರವಾಗಿ ಸಾರ್ವಜನಿಕರಿಗೆ ಅವರ ಖಾತೆಗೆ ತಲುಪುವಂತೆ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಟಿ.ಮಂಜು ಮಾತನಾಡಿ, ರಾಜ್ಯ ಹಾಗೂ ಕೇಂದ್ರ ಸರ್ಕಾರವನ್ನು ಟೀಕೆ ಮಾಡುವಂತಹ ಶಾಸಕ ನಾನಲ್ಲ, ನಾನು ಶಾಸಕನಾಗಿ 11 ತಿಂಗಳು ಆಗಿದೆ. ಕೇವಲ ಎರಡು ಕೋಟಿ ಅನುದಾನ ನೀಡಿದ್ದು ಇದರಿಂದ ಅಭಿವೃದ್ಧಿ ಕುಂಠಿತವಾಗಿರುವ ನಮ್ಮ ತಾಲೂಕಿಗೆ ಇಷ್ಟು ಅನುದಾನ ಸಾಕಾಗುವುದಿಲ್ಲ. ಮುಂದಿನ ದಿನಗಳಲ್ಲಿ ಹೆಚ್ಚು ಅನುದಾನ ನೀಡಬೇಕು, ನಮ್ಮ ನಾಯಕರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಈ ಇಳಿಯ ವಯಸ್ಸಿನಲ್ಲೂ ರಾಜ್ಯ ರೈತರ ಪರ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದಾರೆ ಎಂದರು.

ನಮ್ಮ ತಾಲೂಕಿಗೆ ವಿದ್ಯುತ್ ಉಪ ಕೇಂದ್ರಗಳು, ಇಂಜಿನಿಯರಿಂಗ್ ಕಾಲೇಜು ನೀಡುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಸಹಕಾರಿಯಾಗಿದ್ದಾರೆ. ಯಾವ್ರದೇ ಸರ್ಕಾರಿ ಕಾರ್ಯಕ್ರಮಗಳು ಯಶಸ್ವಿ ಆಗಲು ಅಂಗನವಾಡಿ ಆಶಾ ಕಾರ್ಯಕರ್ತರೇ ಕಾರಣ ಇಂತಹ ಶ್ರಮ ಜೀವಿಗಳಿಗೆ ಸರ್ಕಾರ ಸೇವಾ ಭದ್ರತೆ ಒದಗಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಹತ್ತು ವರ್ಷಗಳ ಕಾಲ ದೇಶದ ಪ್ರಧಾನಮಂತ್ರಿಯಾಗಿ ಕೆಲಸ ಮಾಡಿದ ನರೇಂದ್ರ ಮೋದಿಯವರು ದೇಶದಲ್ಲಿ ಒಂದೇ ಒಂದು ಅಣೆಕಟ್ಟೆಯನ್ನು ನಿರ್ಮಾಣ ಮಾಡಲಿಲ್ಲ. ಸುಳ್ಳಿನ ಮೇಲೆ ಸುಳ್ಳನ್ನು ಹೇಳಿ ಆಶಾ ಗೋಪುರವನ್ನು ಕಟ್ಟಿ ಜನತೆಯನ್ನು ವಂಚಿಸುತ್ತಿರುವ ನರೇಂದ್ರ ಮೋದಿಯವರು ಕಾಂಗ್ರೆಸ್ ಪಕ್ಷದ ಬಗ್ಗೆ ನಿಂದಿಸಿ ಮಾತನಾಡದಿದ್ದರೆ ಅವರಿಗೆ ನಿದ್ರೆಯೇ ಬರುವುದಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಬಳಿಕ ಸರ್ಕಾರದ 5 ಗ್ಯಾರಂಟಿ ಮತ್ತು ವಿವಿಧ ಇಲಾಖೆಯ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಸಂಕೇತಿಕವಾಗಿ ವಿವರಿಸಲಾಯಿತು. ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸಿಫ್, ಉಪ ವಿಭಾಗಾಧಿಕಾರಿ ನಂದೀಶ್, ತಹಶೀಲ್ದಾರ್ ನಿಸರ್ಗಪ್ರಿಯ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಮನ್‌ಮುಲ್ ನಿರ್ದೇಶಕ ನಿರ್ದೇಶಕ ಡಾಲು ರವಿ, ಡಿವೈಎಸ್‌ಪಿ ಡಾ.ಎ.ಆರ್. ಸುಮಿತ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜಮೂರ್ತಿ, ತಾ.ಪಂ ಇಓ ಸತೀಶ್, ಪುರಸಭಾ ಮುಖ್ಯ ಅಧಿಕಾರಿ ಸತೀಶ್ ಉಪಸ್ಥಿತರಿದ್ದರು.



ಕೆ.ಆರ್. ಪೇಟೆಯಲ್ಲಿ ನಡೆದ ಗ್ಯಾರಂಟಿ ಫಲಾನುಭವಿಗಳ ಸಮಾವೇಶವನ್ನು ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಸಂವಿಧಾನ ಜಾಗೃತಿ ಅಭಿಯಾನ ರಥಕ್ಕೆ ಸ್ವಾಗತ

ಪಾಂಡವಪುರ, ಫೆ.10– ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿರುವ ಸಂವಿಧಾನ ಜಾಗೃತಿ ಅಭಿಯಾನ ರಥವು ಮೂರನೇ ದಿನವಾದ ಶನಿವಾರ ತಾಲೂಕಿನ ಕಸಬ ಹೋಬಳಿಯ ಹಲವು ಗ್ರಾಪಂಗಳಲ್ಲಿ ಸಂಚರಿಸಿತು.

ಪಟ್ಟಣದ ಬನ್ನಾರಿ ಮಾರಮ್ಮ ದೇವಸ್ಥಾನದಿಂದ ಹೊರಟ ಸಂವಿಧಾನ ಜಾಗೃತಿ ಅಭಿಯಾನ ರಥಕ್ಕೆ ತಹಶೀಲ್ದಾರ್ ಶ್ರೇಯಸ್, ಇಓ ಲೋಕೇಶ್‌ಮೂರ್ತಿ ಚಾಲನೆ ನೀಡಿದರು. ಅಲ್ಲಿಂದ ಹೊರಟ ರಥವು ಚಿಕ್ಕಾಡೆ, ಕನಗನಮರಡಿ, ದೊಡ್ಡಬ್ಯಾಡರಹಳ್ಳಿ, ಕೆ.ಬೆಟ್ಟಹಳ್ಳಿ, ಹರವು, ಕ್ಯಾತನಹಳ್ಳಿ, ಕೆನ್ನಾಳು ಗ್ರಾಪಂಗಳಲ್ಲಿ ಸಂಚರಿಸಿತು. ಸಂವಿಧಾನದ ಜಾಗೃತಿ ಅಭಿಯಾನ ರಥವು ಹೋದ ಕಡೆಯಲ್ಲ ಪಂಚಾಯಿತಿಯ ವ್ಯಾಪ್ತಿಯ ಮುಖಂಡರು, ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.

ಕನಗನಮರಡಿ ಗ್ರಾಮಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಅಭಿಯಾನ ರಥವನ್ನು ಅದ್ದೂರಿಯಾಗಿ ಸ್ವಾಗತಿಸಿದರು. ಗ್ರಾಮಸ್ಥರು, ಪಂಚಾಯಿತಿ ಅಧಿಕಾರಿ, ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು, ಸಿಬ್ಬಂದಿಗಳು ಪೂರ್ಣಕುಂಭ, ವಿವಿಧ ಕಲಾತಂಡಗಳ ಮೂಲಕ ಸ್ವಾಗತಿಸಿ, ಗ್ರಾಮದಲ್ಲಿ ಮೆರವಣಿಗೆ ನಡೆಸಿದರು. ಸಂವಿಧಾನ ರಥಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಸಂವಿಧಾನದ ಪುಸ್ತಕ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಪಿಡಿಓ ಪುರುಷೋತ್ತಮ, ಕನಗನಮರಡಿ ಗ್ರಾಪಂ ಅಧ್ಯಕ್ಷೆ ಭಾಗ್ಯ, ಉಪಾಧ್ಯಕ್ಷ ರಂಗಸ್ವಾಮಿ(ಕೃಷ್ಣ), ಸದಸ್ಯರಾದ ಮಂಜುನಾಥ್, ಪ್ರಮಿಳ, ಅಭಿ, ಸ್ವಾಮೀಗೌಡ, ಸಿ.ಬಿ. ತಮ್ಮಣ್ಣ, ಈರಾಚಾರಿ, ನೀಲಮ್ಮ, ಜಯಲಕ್ಷ್ಮಮ್ಮ, ಎನ್.ಪಿ.ಸುದರ್ಶನ್, ವಸಂತ, ಎಚ್.ಜೆ.ರಾಮಕೃಷ್ಣ, ಚಂದ್ರಕುಮಾರಿ, ಸೋಮಣ್ಣ ಪಿಡಿಓ ಪುರುಷೋತ್ತಮ್, ಕಾರ್ಯದರ್ಶಿ ಜಯರಾಮು, ದಸಂಸ ಮುಖಂಡ ಬೊಮ್ಮರಾಜು, ರೈತ ಮುಖಂಡ ಬಲರಾಮು, ಕಣಿವೆ ರಾಮು, ಟೌನ್ ಚಂದ್ರು, ದೇವರಾಜು, ಬನ್ನಂಗಾಡಿ ಯೋಗೇಶ್, ವಿಜಿಕುಮಾರ್, ಸಮಾಜ ಕಲ್ಯಾಣಾಧಿಕಾರಿ ಮಲ್ಲೇಶ್, ಸಿಬ್ಬಂದಿಗಳಾದ ಕೋಮಲ, ಲೋಕೇಶ್, ನವೀನ್‌ಕುಮಾರ್, ಜಯರಾಮು, ಅರುಣ್, ದವಂತಕುಮಾರ್, ಶಶಿಕುಮಾರ್, ರೂಪಾ, ಹಂಸವೇಣಿ ಸೇರಿದಂತೆ ಹಲವರು ಹಾಜರಿದ್ದರು.



ಪಾಂಡವಪುರ ತಾಲೂಕಿನ ಕನಗನಮರಡಿ ಗ್ರಾಮಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಅಭಿಯಾನ ರಥವನ್ನು ಗ್ರಾಮಸ್ಥರು, ಮುಖಂಡರು ಸ್ವಾಗತಿಸಿದರು.

ಇಂದು ಏತ ನೀರಾವರಿ ಯೋಜನೆ ಉದ್ಘಾಟನೆ

ಮಂಡ್ಯ: ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಕೆ.ಆರ್. ಪೇಟೆ ತಾಲೂಕಿನ ಐಚನಹಳ್ಳಿ ಹಾಗೂ ಇತರೆ 50 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಯ ಹಂತ 1ರ ಉದ್ಘಾಟನೆ ಹಾಗೂ ಲೋಕಾರ್ಪಣೆ ಕಾರ್ಯಕ್ರಮವನ್ನು ಫೆ.11ರಂದು ಕಟ್ಟಹಳ್ಳಿ ಗ್ರಾಮದಲ್ಲಿ ಮಧ್ಯಾಹ್ನ 2.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಕೃಷಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿಯವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮದ ಅಧ್ಯಕ್ಷರು ಮತ್ತು ಶಾಸಕರಾದ ಎ.ಬಿ.ರಮೇಶ್ ಬಂಡಿಸಿದ್ದೇಗೌಡರ ಉಪಸ್ಥಿತಿ ಇರಲಿದ್ದು, ಶಾಸಕ ಎಚ್.ಟಿ. ಮಂಜು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ವಿಧಾನಪರಿಷತ್ ಶಾಸಕರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ವಿಧಾನಸಭಾ ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ಪಿ.ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ ಉದಯ್ ರವರು ಭಾಗವಹಿಸಲಿದ್ದಾರೆ.

ಸೀನಪ್ಪನದೊಡ್ಡಿ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟನೆ



ಸೀನಪ್ಪನದೊಡ್ಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವನ್ನು ಮನ್‌ಮುಲ್ ನಾಮ ನಿರ್ದೇಶಿತ ನಿರ್ದೇಶಕ ಕದಲೂರು ರಾಮಕೃಷ್ಣ ಉದ್ಘಾಟಿಸಿದರು. ಕೆ.ಎಂ. ರವಿ, ಪಿ.ಸಂದರ್ಶ, ಡಾ.ಜೀವನ್, ರತ್ನಮ್ಮ, ವಿನಯ ಎಸ್.ಶಿವಕುಮಾರ್, ಶ್ರುತಿ ಇದ್ದರು.

ಮದ್ದೂರು, ಫೆ10– ಹಾಲು ಉತ್ಪಾದಕರು ಗುಣಮಟ್ಟದ ಹಾಲನ್ನು ಪೂರೈಕೆ ಮಾಡುವ ಮೂಲಕ ಸಹಕಾರ ಸಂಘ ಹಾಗೂ ಜಿಲ್ಲಾ ಹಾಲು ಒಕ್ಕೂಟದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನ್‌ಮುಲ್ ನಾಮ ನಿರ್ದೇಶಿತ ನಿರ್ದೇಶಕ ಕದಲೂರು ರಾಮಕೃಷ್ಣ ಕರೆ ನೀಡಿದರು.

ತಾಲೂಕಿನ ಸೀನಪ್ಪನದೊಡ್ಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವನ್ನು ಇತ್ತೀಚೆಗೆ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಮಹಿಳೆಯರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡಿದ್ದು, ಆರ್ಥಿಕ ಪ್ರಗತಿಗೆ ಕಾರಣವಾಗಿದೆ. ಸೀನಪ್ಪನದೊಡ್ಡಿ ಗ್ರಾಮದಲ್ಲಿ ನೂತನವಾಗಿ ಹಾಲು ಉತ್ಪಾದಕರ ಸಹಕಾರ ಸಂಘ ಪ್ರಾರಂಭವಾಗುತ್ತಿರುವುದರಿಂದ ಈ ಭಾಗದ ರೈತರಿಗೆ ಮತ್ತು ಹೈನುಗಾರರಿಗೆ ಹೆಚ್ಚಿನ ಲಾಭವಾಗಲಿದೆ. ಸಹಕಾರ ಸಂಘ ಮುಂದಿನ ದಿನಗಳಲ್ಲಿ ಪ್ರಗತಿಯಾಗಿ ಸಾಗಲು ನಮ್ಮ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ವ್ಯಕ್ತಪಡಿಸಿದರು.

ಕದಲೂರು ಉದಯ್ ಚಾರಿಟೆಬಲ್ ಟ್ರಸ್ಟ್‌ನ ಟ್ರಸ್ಟಿ ಹಾಗೂ ಸಮಾಜ ಸೇವಕ ಕದಲೂರು ಕೆ.ಎಂ.ರವಿ ಮಾತನಾಡಿದರು.


ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿಸಂದರ್ಶ, ಮನ್‌ಮುಲ್ ಉಪ ವ್ಯವಸ್ಥಾಪಕ ಡಾ.ಜೀವನ್ ಕುಮಾರ್, ವಿಸ್ತರಣಾಧಿಕಾರಿ ಕೆ.ರತ್ನಮ್ಮ, ಕಾಂಗ್ರೆಸ್ ಮುಖಂಡರಾದ ಅಡ್ಡಸ್ತೆ ಗೋಪಿ, ನಿಲುವಾಗಿಲು ಗೋವಿಂದು, ಗ್ರಾಪಂ. ಸದಸ್ಯ ಪ್ರದೀಪ್, ಸಹನ ಮಲ್ಲೇಶ್, ಪಿಎಸಿಎಸ್ ಅಧ್ಯಕ್ಷ ಮಲ್ಲೇಶ, ಸೀನಪ್ಪನದೊಡ್ಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷೆ ಬಿ.ಇ. ವಿನಯ ಎಸ್.ಶಿವಕುಮಾರ್, ಉಪಾಧ್ಯಕ್ಷೆ ಕೆ.ಆರ್.ಶ್ರುತಿ ಚಿಕ್ಕಮಲ್ಲಯ್ಯ, ನಿರ್ದೇಶಕರಾದ ಯು.ಎಂ.ಶೋಭಾ ರಮೇಶ್, ಎಸ್.ಸುಮಿತ್ರ ರಾಜೇಶ್, ತಾಯಮ್ಮ ರಾಜಣ್ಣ, ಶ್ವೇತಾ ಶಿವಮಲ್ಲ, ಎಚ್.ಎ.ಅಕ್ಷತಾ ಮಂಜು, ಪಿ.ಮಂಜುಳಾ ಬಸವಯ್ಯ, ರತ್ನಮ್ಮ ಶಿವನಂಜೇಗೌಡ, ನಾಗಮ್ಮ ವೆಂಕಟೇಶ, ರೈತ ಸಂಘದ ಮುಖಂಡ ಕೀಳಘಟ್ಟ ನಂಜುಂಡಯ್ಯ, ಗ್ರಾ.ಪಂ ಮಾಜಿ ಸದಸ್ಯ ಎಸ್.ಎಂ. ಕೃಷ್ಣ, ಪರಮೇಶ್, ಸಿಇಒ ಸೌಂದರ್ಯ ರಾಜು, ಹಾಲು ಪರೀಕ್ಷಕಿ ಸವಿತಾ ಮರಿಸ್ವಾಮಿ ಇದ್ದರು.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ

ಪ್ರಧಾನಿ ಮೋದಿ ಅಭಿನಂದಿಸಿದ ಮಾಜಿ ಪ್ರಧಾನಿ ದೇವೇಗೌಡರು

ನವದೆಹಲಿ, ಫೆ.10– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅಯೋಧ್ಯೆ ರಾಮಮಂದಿರದ ಬಗ್ಗೆ ರಾಜ್ಯಸಭೆಯಲ್ಲಿ ಕೊಂಡಾಡಿದ್ದಲ್ಲದೆ, ಪ್ರಧಾನಿ ಮೋದಿ ಅವರಿಗೆ ಧನ್ಯವಾದ ತಿಳಿಸಿದ್ದಾರೆ.

ಈ ದೇಶವನ್ನು ಒಗ್ಗೂಡಿಸುವಿಕೆಯಲ್ಲಿ ಶ್ರೀ ರಾಮ ದೇವರ ದೈವಿಕ ಆಶೀರ್ವಾದವಿದೆ. ರಾಮಮಂದಿರ ನಿರ್ಮಾಣದಿಂದ ಕೋಟ್ಯಾಂತರ ಭಾರತೀಯರ ಕನಸು ಸಾಕಾರವಾಗಿದೆ. ಉದ್ಘಾಟನೆ ದಿನ ನಾನು ಮತ್ತು ನನ್ನ ಪತ್ನಿ ಅಯೋಧ್ಯೆಗೆ ಹೋಗಿದ್ದೆವು. ಆ ಒಂದು ಅಭೂತಪೂರ್ವವಾದ ಕ್ಷಣಕ್ಕೆ ನಾನು ಸಾಕ್ಷಿಯಾಗಿದ್ದೇನೆ. ಅದು ನನ್ನ ಪಾಲಿಗೆ ಭಕ್ತಿ ಪರವಶತೆಯ ಕ್ಷಣವಾಗಿತ್ತು ಎಂದರು.



ಶ್ರೀ ರಾಮ ದೇವರು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿ ಇರುವವನು ಎನ್ನುವುದಕ್ಕೆ ಅದುವೇ ಸಾಕ್ಷಿ. ಶ್ರೀ ರಾಮರು ಸದ್ವಿಚಾರಗಳು ಮತ್ತು ದಯೆ, ಪ್ರೀತಿಯ ಪ್ರತೀಕ. ಹೀಗಾಗಿ ಪ್ರತಿಯೊಬ್ಬರಿಗೂ ಆ ರಾಮನು ಆರಾಧ್ಯ ದೈವ. ಶ್ರೀ ರಾಮ ದೇವರ ತತ್ವಾದರ್ಶಗಳಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಪ್ರಭಾವಿತರಾಗಿದ್ದರು. ಅಲ್ಲದೆ, ಶ್ರೀ ರಾಮರನ್ನು ಬಾಪೂ ಅವರು ನಮ್ಮ ದೇಶದ ಸದ್ಗುಣಗಳ ಪ್ರತೀಕವನ್ನಾಗಿಸಿದರು. ಆ ರಾಮರ ಆಶೀರ್ವಾದ, ಕರುಣೆಯಿಂದಲೇ ಅವರು ಭಾರತವನ್ನು ಒಗ್ಗೂಡಿಸಿದರು ಎಂದು ಅವರು ಪ್ರತಿಪಾದಿಸಿದರು.

ರಾಮ ಮಂದಿರ ಅಯೋಧ್ಯೆಯಲ್ಲಿ ನಿರ್ಮಾಣ ಆಗಿರುವುದು ಹೆಮ್ಮೆಯ ಸಂಗತಿ. ಮಂದಿರ ನಿರ್ಮಾಣ ಆಗಿ ಬಾಲ ರಾಮನ ಮೂರ್ತಿ ಸಹ ಪ್ರತಿಷ್ಠಾಪನೆ ಮಾಡಲಾಗಿದೆ. ರಾಮ ಮಂದಿರದ ಬಗ್ಗೆ ನನಗೆ ಬಹಳ ಸಂತಸ ಇದೆ. ಇದು ದೇಶಕ್ಕೆ ಹೆಮ್ಮೆಯ ವಿಚಾರವಾಗಿದೆ. ಆ ಭವ್ಯ ಮಂದಿರ ಮುಂದಿನ ಪೀಳಿಗೆಗೂ ಸಾಕ್ಷಿಯಾಗಲಿದೆ. ಮಂದಿರ ನಿರ್ಮಾಣಕ್ಕೆ ಪ್ರಾಮಾಣಿಕವಾಗಿ ಶ್ರಮಿಸಿದ ನರೇಂದ್ರ ಮೋದಿ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ಆಯ್ಕೆಯನ್ನು ಟೀಕಿಸಬಾರದು: ಮಾಜಿ ಪ್ರಧಾನಿಗಳಾದ ಚೌಧರಿ ಚರಣ್ ಸಿಂಗ್, ಪಿ.ವಿ.ನರಸಿಂಹರಾವ್ ಹಾಗೂ ಕೃಷಿ ವಿಜ್ಞಾನಿ ಡಾ.ಎಂ.ಎಸ್.ಸ್ವಾಮಿನಾಥನ್ ಅವರಿಗೆ ಕೇಂದ್ರ ಸರ್ಕಾರ 'ಭಾರತರತ್ನ' ಪುರಸ್ಕಾರ ಘೋಷಣೆ ಮಾಡಿದ್ದರ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರವು ಈ ಗೌರವಕ್ಕೆ ಅರ್ಹರು, ಮಹಾನ್ ಸಾಧಕರನ್ನೇ ಆಯ್ಕೆ ಮಾಡಿದೆ. ಈ ಬಗ್ಗೆ ಅನಗತ್ಯವಾಗಿ ಚರ್ಚೆ ಮಾಡುವುದು ಅಥವಾ ಟೀಕಿಸುವುದು ಸರಿಯಲ್ಲ ಎಂದರು.

ಆಂಧ್ರದ ನೆಲ್ಲೂರು ಬಳಿ ಭೀಕರ ಅಪಘಾತ: 7 ಮಂದಿ ದುರ್ಮರಣ

ನೆಲ್ಲೂರು (ಆಂಧ್ರ ಪ್ರದೇಶ): ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಮುಸನೂರು ಟೋಲ್ ಪ್ಲಾಜಾ ಬಳಿ ಶನಿವಾರ ಬೆಳಗಿನ ಜಾವ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಅಪಘಾತದಲ್ಲಿ 7 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಟೂರಿಸ್ಟ್ ಬಸ್ ಹಾಗೂ ಲಾರಿ ನಡುವೆ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ 15 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆಂದು ತಿಳಿದುಬಂದಿದೆ.

ಪ್ರತ್ಯಕ್ಷದರ್ಶಿಗಳ ಮಾಹಿತಿಗಳ ಪ್ರಕಾರ ಖಾಸಗಿ ಬಸ್ ಚೆನ್ನೈನಿಂದ ಹೈದರಾಬಾದ್‌ಗೆ ಬರುತ್ತಿತ್ತು ನೆಲ್ಲೂರು ಬಳಿ ಮೊದಲು ಟ್ರಕ್ ನಿಂತಿದ್ದವರಿಗೆ ಡಿಕ್ಕಿ ಹೊಡೆದಿದೆ ಈ ವೇಳೆ ಎದುರಿನಿಂದ ಬರುತ್ತಿದ್ದ ಬಸ್ ಮಧ್ಯೆ ಅಪಘಾತ ಸಂಭವಿಸಿತ್ತು. ಡಿಕ್ಕಿ ರಭಸಕ್ಕೆ ಬಸ್‌ನಲ್ಲಿದ್ದ ಚಾಲಕ ಸಮೇತ ಏಳು ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದರು. ಘಟನೆಯಲ್ಲಿ ಸುಮಾರು 15ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆಂದು ತಿಳಿಸಿದ್ದಾರೆ. ಇನ್ನು ಅಪಘಾತ ಸಂಭವಿಸಿದ ಕೂಡಲೇ ಸ್ಥಳೀಯರು ರಕ್ಷಣಾ ಕಾರ್ಯ ಕೈಗೊಂಡು ಪೊಲೀಸರಿಗೆ ಮಾಹಿತಿ ರವಾನಿಸಿದರು. ಸುದ್ದಿ ತಿಳಿಯುತ್ತಿದ್ದಂತೆ ಹೈವೇ ಪೊಲೀಸರು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯ ಕೈಗೊಂಡರು. ಗಾಯಾಳುಗಳನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ದಾಖಲಿಸಿದರು.

ಮೃತದೇಹಗಳನ್ನು ವಶಕ್ಕೆ ಪಡೆದ ಪೊಲೀಸರು, ಮರಣೋತ್ತರ ಪರೀಕ್ಷೆಗಾಗಿ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ಇನ್ನು ಮೃತರ ಪತ್ತೆ ಕಾರ್ಯ ಬಳಿಕ ಆಯಾ ಕುಟುಂಬಸ್ಥರಿಗೆ ಮಾಹಿತಿ ರವಾನಿಸುವ ಕಾರ್ಯ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸದ್ಯ ಅಪಘಾತದ ಸ್ಥಳದಲ್ಲಿ ಅಪಘಾತಕ್ಕೀಡಾದ ವಾಹನಗಳನ್ನು ಕ್ರೇನ್ ಮೂಲಕ ತೆರವು ಮಾಡುವ ಕಾರ್ಯಾಚರಣೆಯನ್ನು ಪೊಲೀಸರು ಕೈಗೊಂಡಿದ್ದಾರೆ. ಈ ಮೂಲಕ ಸಾರಿಗೆ ಸಂಚಾರ ಸುಗಮಗೊಳಿಸುತ್ತಿದ್ದಾರೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಬ್ರಿಟಿಷರ ಕಾಲದಲ್ಲಿ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ದೀರ್ಘಾವಧಿ ಗುತ್ತಿಗೆ ನೀಡಿರುವ

7,500 ಎಕರೆ ಅರಣ್ಯ ಭೂಮಿ ಅರಣ್ಯ ಇಲಾಖೆ ವಶಕ್ಕೆ

ಭೂಮಿ ವಾಪಸ್ಸು ಪಡೆಯುವ ಪ್ರಕ್ರಿಯೆ ಆರಂಭ ; ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ

ಮೈಸೂರು,ಫೆ.10(ಪಿಎಂ)– ಬ್ರಿಟಿಷರ ಕಾಲದಲ್ಲಿ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಒಟ್ಟು 7,500 ಎಕರೆ ಅರಣ್ಯ ಭೂಮಿಯನ್ನು ದೀರ್ಘಾವಧಿಗೆ ಗುತ್ತಿಗೆ ನೀಡಿದ್ದು, ಈ ಎಲ್ಲಾ ಜಮೀನು ವಶಕ್ಕೆ ಪಡೆಯಲು ಅರಣ್ಯ ಇಲಾಖೆ ಕಾನೂನು ಪ್ರಕ್ರಿಯೆ ಕೈಗೆತ್ತಿಕೊಂಡಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಮೈಸೂರಿನ ಅರಣ್ಯ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯಪೂರ್ವದಿಂದ ಕೆಲ ಕಾಫಿ ಬೆಳೆಗಾರರು, ರಬ್ಬರ್ ಬೆಳೆಗಾರರಿಗೆ ಸಾವಿರಾರು ಎಕರೆ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ. ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಇಂತಹ 7,500 ಎಕರೆ ಅರಣ್ಯ ಭೂಮಿ ಮರಳಿ ಪಡೆಯಬೇಕಿದೆ. ಈ ಜಮೀನುಗಳ ಗುತ್ತಿಗೆ ಅವಧಿ ಪೂರ್ಣಗೊಂಡಿದೆ. ಜೊತೆಗೆ ನೂರಾರು ಕೋಟಿ ರೂ. ಸರ್ಕಾರಕ್ಕೆ ಬಾಕಿಯೂ ಬರಬೇಕಿದೆ ಎಂದರು.

ಬ್ರಿಟಿಷರ ಕಾಲದಲ್ಲಿ ನೀಡಿದ ಸಾವಿರಾರು ಎಕರೆ ಅರಣ್ಯ ಭೂಮಿ ಗುತ್ತಿಗೆಯಿಂದ ವನ್ಯಮೃಗಗಳ ಸಂಚಾರಕ್ಕೆ ಅಡ್ಡಿ ಉಂಟಾಗಿದೆ. ಈ ನಿಟ್ಟಿನಲ್ಲಿ ಸದರಿ ಜಮೀನುಗಳ ಸಂಬಂಧ ಇರುವ ಕಾನೂನಾತ್ಮಕ ತೊಡಕುಗಳನ್ನು ನಿವಾರಿಸಿಕೊಂಡು ಮರು ವಶಕ್ಕೆ ಪಡೆದು ವನ್ಯ ಜೀವಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಿದೆ. ಈ ವಿಚಾರವನ್ನು ನಮ್ಮ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕಾಡು ಪ್ರಾಣಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ನಮ್ಮಲ್ಲಿ 6,395 ಆನೆಗಳಿದ್ದು, ಇಡೀ ದೇಶದಲ್ಲೇ ಹೆಚ್ಚು ಆನೆಗಳಿವೆ. ಹುಲಿಗಳ ಸಂಖ್ಯೆಯಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ. ಅನೇಕ ಕಾರಣಗಳಿಂದ ಕಾಡು ಪ್ರಾಣಿಗಳು ನಾಡಿನತ್ತ ಬರುವಂತಾಗಿದೆ ಎಂದು ತಿಳಿಸಿದರು.

ಈ ಎಲ್ಲಾ 7,500 ಎಕರೆಯನ್ನು ಅರಣ್ಯ ಇಲಾಖೆ ವಶಕ್ಕೆ ಪಡೆಯುವುದಕ್ಕೆ ಕೋರ್ಟ್‌ನಲ್ಲಿ ತಡೆಯಾಜ್ಞೆ ತೆಗೆದುಕೊಂಡಿದ್ದಾರೆ. ಒಂದು ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ತ್ವರಿತಗತಿಯಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕಿದೆ. ನನಗೆ ಈ ಮಾಹಿತಿ ಸಿಕ್ಕ ಬಳಿಕ ಉನ್ನತ ಮಟ್ಟದ ಸಭೆ ಮಾಡಿದ್ದೇನೆ. ಸಮಿತಿ ಸಹ ರಚನೆ ಮಾಡಿದ್ದು, ಕಾನೂನುಬದ್ಧವಾಗಿ ಅರಣ್ಯ ಇಲಾಖೆಗೆ ಭೂಮಿ ವಾಪಸ್ಸು ಪಡೆಯುವ ವಿಶ್ವಾಸವಿದೆ ಎಂದು ಹೇಳಿದರು.

ಸ್ವಾತಂತ್ರ್ಯ ಪೂರ್ವದಲ್ಲಿ 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದು, ಈಗಾಗಲೇ ಅವಧಿ ಪೂರ್ಣಗೊಂಡಿದೆ. ವಾಪಸ್ಸು ಪಡೆಯಲು ಮುಂದಾದಾಗ ಕೋರ್ಟ್ ಮೊರೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಆದರೆ ಈ ಎಲ್ಲಾ ಜಮೀನು ಅರಣ್ಯ ಇಲಾಖೆಗೆ ಸೇರಬೇಕೆಂಬುದಕ್ಕೆ ನಮ್ಮಲ್ಲಿ ಎಲ್ಲಾ ಪೂರಕ ದಾಖಲೆಗಳೂ ಇವೆ. ಈ ಜಮೀನುಗಳ ವಿಚಾರದಲ್ಲಿ ಯಾವುದೇ ರೀತಿಯಲ್ಲಿಯೂ ಕಂದಾಯ ಇಲಾಖೆಯ ಪಾತ್ರ ಬರುವುದಿಲ್ಲ. ನಿಖರವಾಗಿ ಈ ಎಲ್ಲವೂ ಗುತ್ತಿಗೆಗೆ ಕೊಟ್ಟಿದ್ದ ಅರಣ್ಯ ಭೂಮಿಯೇ ಆಗಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹೀಗೆ ಗುತ್ತಿಗೆ ನೀಡಿರುವುದು ಶೇ.95ರಷ್ಟು ಈ ಮೂರು ಜಿಲ್ಲೆಗಳಲ್ಲೇ ಆಗಿದೆ. ರಾಜ್ಯದ ಉಳಿದೆಡೆ ಕೇವಲ ಶೇ.5ರಷ್ಟು ಮಾತ್ರ ಇದೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಕಂದಾಯ–ಅರಣ್ಯ ಇಲಾಖೆಗಳ ಜಂಟಿ ಸರ್ವೇ: ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆ ವತಿಯಿಂದ ಜಂಟಿ ಸಮೀಕ್ಷೆ ಮಾಡಿ ಗಡಿ ಗುರುತಿಸಿ ನಮ್ಮ ಅರಣ್ಯ ಇಲಾಖೆಗೆ ಸೇರಿದ ಭೂಮಿಯನ್ನು ವಶಕ್ಕೆ ಪಡೆಯಲಿದ್ದೇವೆ. ನಮ್ಮ ಇಲಾಖೆ ಭೂಮಿ ಒತ್ತುವರಿ ಆಗಿದ್ದರೆ ನಿರ್ದಾಕ್ಷಿಣ್ಯವಾಗಿ ತೆರವು ಮಾಡಿ ವಶಕ್ಕೆ ಪಡೆಯುತ್ತೇವೆ. 6 ತಿಂಗಳಲ್ಲಿ ಈ ಕಾರ್ಯ ಮುಗಿಸಬೇಕೆಂಬ ಉದ್ದೇಶ ಹೊಂದಲಾಗಿದೆ ಎಂದರು.

ಹೀಗಾಗಿ ಕಂದಾಯ ಇಲಾಖೆ ಸಚಿವರೊಂದಿಗೆ ಸಭೆ ಮಾಡಿದ್ದು, ನಾನು ಮತ್ತು ಕಂದಾಯ ಸಚಿವರು ಇಬ್ಬರು ಸೇರಿ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿಗೆ ಜಂಟಿ ಸಮೀಕ್ಷೆ ನಡೆಸಲು ಸುತ್ತೋಲೆ ಕಳುಹಿಸುತ್ತಿದ್ದೇವೆ. ಈಗಾಗಲೇ ಒಂದೆರಡು ಕಡೆಗಳಲ್ಲಿ ಈ ಪ್ರಕ್ರಿಯೆ ಶುರು ಮಾಡಿದ್ದೇವೆ ಎಂದು ತಿಳಿಸಿದರು.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಗೀತಾಂಜಲಿ, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಲಿಂಗರಾಜು, ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯ, ಮೈಸೂರು ವಿಭಾಗದ ಡಿಸಿಎಫ್ ಡಾ.ಬಸವರಾಜು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ) ರವಿಶಂಕರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಅರಣ್ಯ ಭವನದ ಸಭಾಂಗಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಮಾತನಾಡಿದರು.

ಲೋಕಸಭೆಗೆ ಸ್ಪರ್ಧಿಸಲ್ಲ ; ವರಿಷ್ಠರ ತೀರ್ಮಾನವೇ ಅಂತಿಮ

ಮೈಸೂರು, ಫೆ.10(ಪಿಎಂ)– ಲೋಕಸಭಾ ಚುನಾವಣೆಯಲ್ಲಿ ನಾನು ಸ್ಪರ್ಧೆ ಮಾಡುತ್ತಿಲ್ಲವೆಂದು ಸಚಿವ ಈಶ್ವರ ಬಿ.ಖಂಡ್ರೆ ಪ್ರತಿಕ್ರಿಯಿಸಿದರು. ಕೆಲ ಸಚಿವರನ್ನು ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿಸಲಾಗುತ್ತದೆ ಎನ್ನಲಾಗುತ್ತಿದೆ. ಸ್ಪರ್ಧೆ ಮಾಡುತ್ತೀರಾ? ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಲೋಕಸಭಾ ಚುನಾವಣೆಗೆ ನಾನು ಸ್ಪರ್ಧೆ ಮಾಡುತ್ತಿಲ್ಲ. ಆದರೆ ಈ ಬಗ್ಗೆ ವರಿಷ್ಠರು ತೀರ್ಮಾನ ಮಾಡುತ್ತಾರೆ. ಫೆ.16ರಂದು ನಮ್ಮ ಪಕ್ಷದ ಚುನಾವಣಾ ಸಮಿತಿ ಸಭೆ ಇದ್ದು, ಸಭೆಯಲ್ಲಿ ವರಿಷ್ಠರು ತೀರ್ಮಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಬಂಡೀಪುರದಲ್ಲಿ ರೈಲ್ವೆ ಮಾರ್ಗ, ಮೇಲ್ಸೇತುವೆ ಪ್ರಸ್ತಾಪವೇ ಇಲ್ಲ

ಮೈಸೂರು,ಫೆ.10(ಪಿಎಂ)– ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ರೈಲ್ವೆ ಮಾರ್ಗಕ್ಕೆ ಸರ್ವೇ ನಡೆದಿದೆಯೇ? ಎಂಬುದಕ್ಕೆ ಉತ್ತರಿಸಿದ ಸಚಿವ ಈಶ್ವರ ಖಂಡ್ರೆ ರೈಲ್ವೆ ಮಾರ್ಗಕ್ಕೂ ಇಲ್ಲ, ಮೇಲ್ಸೇತುವೆ ಮಾರ್ಗಕ್ಕೂ ನಡೆದಿಲ್ಲ ಎಂದು ಹೇಳಿದರು.

ರಾತ್ರಿ ವಾಹನ ಸಂಚಾರದಿಂದ ಪ್ರಾಣಿಗಳಿಗೆ ಕಿರಿಕಿರಿಯಾಗುತ್ತದೆ. ಹೀಗಾಗಿ ಈಗಾಗಲೇ ಕಾಡಿನೊಳಗೆ ರಸ್ತೆಯಲ್ಲಿ ರಾತ್ರಿ ಸಂಚಾರಕ್ಕೆ ನಿರ್ಬಂಧ ಮುಂದುವರೆದಿದೆ. ಬೆಳಗ್ಗೆ 6ರಿಂದ ರಾತ್ರಿ 9ರವರೆಗೆ ವಾಹನ ಸಂಚಾರಕ್ಕೆ ಅನುಮತಿ ಇದೆ. ರಾತ್ರಿ 9ರಿಂದ ಬೆಳಗ್ಗೆ 6ರವರೆಗೆ ನಿರ್ಬಂಧವಿದೆ. ವೈದ್ಯಕೀಯ ತುರ್ತು ಇದ್ದರೆ ಅನುಮತಿ ನೀಡಲು ವ್ಯವಸ್ಥೆ ಈಗಾಗಲೇ ಇದೆ ಎಂದರು.

ನಾನು ಸಚಿವನಾದ ಬಳಿಕ ಅರಣ್ಯ ಭೂಮಿ ವ್ಯಾಪ್ತಿಯಲ್ಲಿ ರೇಸಾರ್ಟ್‌ಗಳು ಬರಲು ಅವಕಾಶ ನೀಡಿಲ್ಲ. ಹಿಂದಿನ ಪ್ರಕರಣಗಳ ಸಂಬಂಧ ತನಿಖೆ ನಡೆಯುತ್ತದೆ. ವನ್ಯಜೀವಿಗಳನ್ನು ಸಂರಕ್ಷಣೆ ಮಾಡಬೇಕು. ಜೊತೆಗೆ ಮಾನವನ ಜೀವಗಳನ್ನು ಉಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ವಹಿಸುತ್ತಿದ್ದು, ಒಂದೇ ವರ್ಷದಲ್ಲಿ 120 ಕೀ.ಮಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಅನುಮತಿ ಕೊಟ್ಟಿದ್ದೇವೆ. ಅದೀಗ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಕರ್ನಾಟಕದ ಅರಣ್ಯ ಇಲಾಖೆ ಸೆರೆಹಿಡಿದು ರೇಡಿಯೋ ಕಾಲರ್ ಅಳವಡಿಸಿದ್ದ ಆನೆಯೊಂದು ಕೇರಳದಲ್ಲಿ ದಾಳಿ ಮಾಡಿ ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದಾರೆ ಎನ್ನಲಾಗುತ್ತಿದ್ದು, ಇದು ಅತ್ಯಂತ ದುಃಖದ ಸಂಗತಿಯಾಗಿದೆ. ಆದರೆ ಕಾಡುಪ್ರಾಣಿಗಳಿಗೆ ಯಾವ್ರದೇ ಗಡಿ ಇರುವುದಿಲ್ಲ. ಅವು ಎಲ್ಲಾ ಅರಣ್ಯ ಪ್ರದೇಶದಲ್ಲಿ ಸಂಚರಿಸುತ್ತವೆ. ಕೇರಳದ ಅರಣ್ಯ ಇಲಾಖೆಯೊಂದಿಗೆ ಮಾತನಾಡಿ ಮುಂದಿನ ಕ್ರಮ ವಹಿಸುತ್ತೇವೆ ಎಂದರು.

ಅರಣ್ಯ ಭೂಮಿ ಎಷ್ಟು ಒತ್ತುವರಿಯಾಗಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ನಿಖರವಾಗಿ ಸರ್ವೇ ಮಾಡಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಸರ್ಕಾರದ ನೀತಿಯಂತೆ ಮೂರು ಎಕರೆಗೂ ಕಡಿಮೆ ಇದ್ದವರದ್ದನ್ನು ಹೊರತುಪಡಿಸಿ, ದೊಡ್ಡ ಪ್ರಮಾಣದಲ್ಲಿ ಒತ್ತುವರಿ ಮಾಡಿದ್ದನ್ನು ತೆರವು ಮಾಡುವುದು ಮುಂದುವರೆದಿದೆ ಎಂದರು.


ಮರಣೋತ್ತರ ಪರೀಕ್ಷೆ ವರದಿ ಬಂದಿದೆ: ಅರ್ಜುನ ಆನೆಯ ಮರಣೋತ್ತರ ಪರೀಕ್ಷೆಯ ವರದಿ ಬಂದಿದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಮೊನ್ನೆಯಷ್ಟೇ ವರದಿ ಬಂದಿದ್ದು, ಸೋಮವಾರ ಸದರಿ ವರದಿ ಅಧ್ಯಯನ ಮಾಡಲಿದ್ದೇನೆ ಎಂದರು.



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಸಲುವಾಗಿ ಶನಿವಾರ ಮೈಸೂರಿಗೆ ಆಗಮಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರನ್ನು ಮುಡಾ ನಿಕಟಪೂರ್ವ ಸದಸ್ಯೆ ಲಕ್ಷ್ಮೀದೇವಿ, ಜಿ.ಎಂ. ಪಂಚಾಕ್ಷರಿ, ಬಿದರಗೂಡು ಕುಮಾರ್, ಗೆಜ್ಜಗಳ್ಳಿ ಮಹೇಶ್, ಬಿಜೆಪಿ ಯುವ ಮೋರ್ಚಾ ನಗರ ಅಧ್ಯಕ್ಷ ಕಿರಣ್‌ಗೌಡ, ಮಧು, ಕೆಂಚ ಇನ್ನಿತರರು ಅಭಿನಂದಿಸಿ, ಸ್ವಾಗತಿಸಿದರು.

ಎನ್.ಆರ್.ಸತ್ಯನಾರಾಯಣ್ ನಿಧನ

ಶ್ರೀರಂಗಪಟ್ಟಣ, ಫೆ.10– ತಾಲೂಕಿನ ಕೊಡಿಯಾಲ ಗ್ರಾಮದ ನಿವಾಸಿ, ನಿವೃತ್ತ ಶಿಕ್ಷಕ ಪದ್ಮಶಾಲಿ ಕಮ್ಮಾ ಎನ್.ಆರ್.ಸತ್ಯನಾರಾಯಣ್(84) ಅವರು ಶನಿವಾರ ನಿಧನರಾದರು.



ಇವರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಹಾಗೂ ಶಿಷ್ಯವೃಂದವನ್ನು ಅಗಲಿದ್ದಾರೆ. ಭಾನುವಾರ ಬೆಳಗ್ಗೆ ಗ್ರಾಮದ ರುದ್ರಭೂಮಿಯಲ್ಲಿ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೇಂದ್ರದ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ: ರೈತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಬೆಂಗಳೂರು, ಫೆ.10(ಕೆಎಂಶಿ)–ರೈತರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರೈತ ವಿರೋಧಿ "ಭೂ ಸುಧಾರಣಾ ಕಾಯ್ದೆ–2020"ಕ್ಕೆ ತಿದ್ದುಪಡಿ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಭರವಸೆ ನೀಡಿದರು.

ಫ್ರೀಡಂಪಾರ್ಕ್‌ನಲ್ಲಿ ರೈತ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ರೈತ ನಾಯಕ ನಂಜುಂಡಸ್ವಾಮಿ ಸಂಘಟಿಸಿದ ಸ್ಟಡಿ ಸರ್ಕಲ್ ಮೂಲಕ ಸಮಾಜವಾದಿ ಆರ್ಥಿಕತೆ, ಸಮಾಜವಾದಿ ರಾಜಕಾರಣದ ಬಗ್ಗೆ ಸ್ಪಷ್ಟತೆ ಸಿಕ್ಕಿತು, ಎಲ್ಲ ಉಪನ್ಯಾಸಕರು, ಪ್ರೊಫೆಸರ್‌ಗಳು, ಸಾಹಿತಿಗಳ ಮಾರ್ಗದರ್ಶನ ಅನುಕೂಲವಾಯಿತು ಎಂದರು.

ನಂಜುಂಡಸ್ವಾಮಿ ಕಡೆಯವರೆಗೂ ರೈತರ ಪರವಾಗಿ ಕ್ರಿಯಾಶೀಲವಾಗಿದ್ದರು, ಸಮಾಜವಾದಿ ಆಶಯಗಳ ಪರವಾಗಿದ್ದ ಅವರ ಚಳವಳಿ ರೈತರ ಸಮಸ್ಯೆ ಪರಿಹಾರಕ್ಕೆ ಆಸರೆ ಆಯಿತು, ರೈತ ಹೋರಾಟ ಮತ್ತು ರೈತ ಸಮಾವೇಶಗಳಲ್ಲಿ ಭಾಗವಹಿಸುವುದು ನನಗೂ ಬಹಳ ಸಂತಸ ಮತ್ತು ಹೆಮ್ಮೆಯ ವಿಷಯ, ನಂಜುಂಡಸ್ವಾಮಿ ಮತ್ತು ರೈತ ಹೋರಾಟಗಳು ಸಮಾಜ ಮತ್ತು ಸರ್ಕಾರಗಳ ಮೇಲೆ ಪರಿಣಾಮ ಬೀರಿವೆ, ನಂಜುಂಡಸ್ವಾಮಿ ಅವರ ರೈತ ಹೋರಾಟ ತಮಗೆ ರಾಜಕೀಯ ಪ್ರೇರಣೆಯಾಗಿದೆ ಎಂದರು.

ರಾಜ್ಯದಲ್ಲಿ 6407 ಕೋಟಿ ಹೂಡಿಕೆ ಪ್ರಸ್ತಾವಕ್ಕೆ ಅನುಮೋದನೆ

ಬೆಂಗಳೂರು, ಫೆ.10(ಕೆಎಂಶಿ)– ರಾಜ್ಯದಾದ್ಯಂತ ಕೈಗಾರಿಕಾ ಬೆಳವಣಿಗೆ ಉತ್ತೇಜಿಸಲು ಮತ್ತು ಉದ್ಯೋಗ ಸೃಷ್ಟಿಸಲು ಶಿಕ್ಷಣ – ಸಂಶೋಧನಾ ಸಂಸ್ಥೆಗಳ ಸ್ಥಾಪನೆ, ಉಗ್ರಾಣ, ಶೈತ್ಯಾಗಾರಗಳ ನಿರ್ಮಾಣ, ವಾಹನ ಬಿಡಿಭಾಗ, ಪಿವಿಸಿ ಪೈಪ್ ಸೇರಿದಂತೆ ವಿವಿಧ ಉತ್ಪನ್ನ ತಯಾರಿಕಾ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಬಂಡವಾಳ ಹೂಡಿಕೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಒಟ್ಟು 6407 ಕೋಟಿ ರೂ ಬಂಡವಾಳ ಹೂಡಿಕೆಯ ವಿವಿಧ ಪ್ರಸ್ತಾವಗಳಿಗೆ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಒಪ್ಪಿಗೆ ನೀಡಿದೆ ಎಂದರು. ಇವುಗಳಲ್ಲಿ ಬೆಂಗಳೂರು ಗ್ರಾಮಾಂತರ, ಬೆಳಗಾವಿ, ರಾಮನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆಯ ವಿವಿಧ ಯೋಜನೆಗಳಿಗೆ ಒಪ್ಪಿಗೆ ಸೂಚಿಸಲಾಗಿದೆ, ತಲಾ 50 ಕೋಟಿ ರೂ.ಗಳಿಗೂ ಹೆಚ್ಚಿನ



ಬಂಡವಾಳದ 22 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರಾಜ್ಯದಲ್ಲಿ 4,230.64 ಕೋಟಿ ರೂ. ಬಂಡವಾಳ ಹೂಡಿಕೆಯೊಂದಿಗೆ ಒಟ್ಟು 24,846 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದರು.


ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ 484.33 ಕೋಟಿ ರೂ. ಮೊತ್ತದ ವಿಜ್ಞಾನ, ತಂತ್ರಜ್ಞಾನ ಸಂಶೋಧನೆ ಹಾಗೂ ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆ, ಮೈಸೂರು ಜಿಲ್ಲೆಯಲ್ಲಿ 415 ಕೋಟಿ ರೂ. ಮೊತ್ತದ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಶಿಕ್ಷಣ ವಿಶ್ವವಿದ್ಯಾಲಯ ಸ್ಥಾಪನೆ, ಬೆಳಗಾವಿ ಜಿಲ್ಲೆಯಲ್ಲಿ 485 ಕೋಟಿ ರೂ. ಬಂಡವಾಳದ ಯಾಂತ್ರಿಕೃತ ಎರಕಹೊಯ್ಯುವ ಘಟಕ ಸ್ಥಾಪನೆ ಸೇರಿವೆ ಎಂದರು.

ದಿಲ್ಲಿ ಹಾತ್ ಮಾದರಿಯಲ್ಲಿ ಮೈಸೂರಲ್ಲಿ 'ಯೂನಿಟಿ ಮಾಲ್'

ಪ್ರವಾಸಿ ತಾಣವೂ ಆದ ಸಾಂಸ್ಕೃತಿಕ ನಗರಿಯಲ್ಲಿ ಶಾಶ್ವತ ವಸ್ತುಪ್ರದರ್ಶನದ ಬಹು ವರ್ಷಗಳ ಯೋಜನೆ ಸಾಕಾರ

- ಕೇಂದ್ರ ಸರ್ಕಾರದಿಂದ 193 ಕೋಟಿ ಬಡ್ಡಿ ರಹಿತ ಸಾಲ
- ಒಂದೇ ಸೂರಿನಡಿ ಒಂದು ಜಿಲ್ಲೆ ಒಂದು ಉತ್ಪನ್ನ ಪರಿಕಲ್ಪನೆ
- ಮೈಸೂರಿನ ಜಿಐ ವಸ್ತುಗಳ ಮಾರಾಟಕ್ಕೆ ಆದ್ಯತೆ
- ರಾಜ್ಯದ 31 ಜಿಲ್ಲೆ, 28 ರಾಜ್ಯಗಳ ವಿಶೇಷ ಉತ್ಪನ್ನಗಳು ಲಭ್ಯ





(ಸಂಗ್ರಹ ಚಿತ್ರ)

ಬಾಪುಲಿಂಗರಾಜ್ ಅರಸ್

ಮೈಸೂರು, ಫೆ.10–ರಾಷ್ಟ್ರ ರಾಜಧಾನಿ ದೆಹಲಿಯ ದಿಲ್ಲಿ ಹಾತ್ ಮಾದರಿಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 193 ಕೋಟಿ ವೆಚ್ಚದಲ್ಲಿ ಯೂನಿಟಿ ಮಾಲ್ ನಿರ್ಮಾಣ ಮಾಡಲು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ. ಈ ಮೂಲಕ ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿ ಶಾಶ್ವತ ವಸ್ತು ಪ್ರದರ್ಶನ ಸ್ಥಾಪನೆಯ ಬಹು ವರ್ಷಗಳ ಮೈಸೂರಿಗರ ಕನಸು ನನಸಾಗುತ್ತಿದೆ.

ಮೈಸೂರಿನ ದಸರಾ ವಸ್ತು ಪ್ರದರ್ಶನದ ಆರೂವರೆ ಎಕರೆ ಪ್ರದೇಶದಲ್ಲಿ 193 ಕೋಟಿ ರೂಪಾಯಿ ವೆಚ್ಚದಲ್ಲಿ ಯೂನಿಟಿ ಮಾಲ್ ತಲೆ ಎತ್ತಲಿದ್ದು, ಒಂದು ಜಿಲ್ಲೆ, ಒಂದು ಉತ್ಪನ್ನ ಪರಿಕಲ್ಪನೆಯ ಕೇಂದ್ರ ಸರ್ಕಾರದ ಯೋಜನೆ ಈ ಮೂಲಕ ಸಾಕಾರಗೊಳ್ಳಲಿದೆ.

ದೇಶದ ಪ್ರತಿ ರಾಜ್ಯದಲ್ಲಿ ಯೂನಿಟಿ ಮಾಲ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಒಟ್ಟು 5000 ಕೋಟಿ ರೂಪಾಯಿ ನೀಡುತ್ತಿದೆ. ಯೂನಿಟಿ ಮಾಲ್ ನಿರ್ಮಾಣಕ್ಕೆ ಕರ್ನಾಟಕದ ಮೈಸೂರನ್ನು ಆಯ್ಕೆ ಮಾಡಲಾಗಿದ್ದು, ಕೇಂದ್ರ ಸರ್ಕಾರ ನೀಡುವ 193 ಕೋಟಿ ರೂಪಾಯಿ ಬಡ್ಡಿ ರಹಿತ ಸಾಲ ಬಳಸಿಕೊಂಡು ಮೈಸೂರಿನಲ್ಲಿ ಯೂನಿಟಿ ಮಾಲ್ ನಿರ್ಮಾಣ ಮಾಡಲಾಗುತ್ತಿದೆ. ಮೈಸೂರು ವಿಳ್ಯದೆಲೆ, ಮೈಸೂರು ಮಲ್ಲಿಗೆ, ಮೈಸೂರು ಪಾಕ್, ಮೈಸೂರು ರೇಷ್ಮೆ ಸೀರೆ, ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ ಮೈಸೂರಿನ ಜಿಐ (ಭೌಗೋಳಿಕ ಸೂಚಕ ಪ್ರಮಾಣೀಕರಣ) ಹೊಂದಿರುವ ವಸ್ತುಗಳನ್ನು ಒಂದೇ ಸೂರಿನಡಿ ಮಾರಾಟ ಮಾಡುವ ಪರಿಕಲ್ಪನೆಯೊಂದಿಗೆ ಯೂನಿಟಿ ಮಾಲ್ ನಿರ್ಮಿಸಲಾಗುತ್ತಿದೆ. ಮೈಸೂರಿಗೆ ದೇಶ–ವಿದೇಶದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಾರೆ. ಆದರೆ, ಮೈಸೂರಿನ ವಿಶೇಷ ಉತ್ಪನ್ನಗಳನ್ನು ಖರೀದಿಸಲು ಒಂದೊಂದಕ್ಕೂ ಒಂದೊಂದು ಕಡೆ ಸುತ್ತಬೇಕಿದೆ. ಆದರೆ, ಪ್ರವಾಸಿಗರಿಗೆ ಸಿಗುವ ವಸ್ತುಗಳು ನೈಜವಾಗಿರದೆ ಹಲವು ವೇಳೆ ಮೋಸ ಹೋಗುವ ಸಾಧ್ಯತೆಗಳಿವೆ. ಆದರೆ ಈಗ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಯೂನಿಟಿ ಮಾಲ್‌ನ ಒಂದೇ ಸೂರಿನಡಿ ಮೈಸೂರಿನ ಎಲ್ಲಾ ರೀತಿಯ ನೈಜ ವಸ್ತುಗಳು ಲಭ್ಯವಾಗುತ್ತವೆ. ಒಂದು ಜಿಲ್ಲೆ, ಒಂದು ಪರಿಕಲ್ಪನೆಯಡಿ ರೂಪುಗೊಳ್ಳುತ್ತಿರುವ ಯೂನಿಟಿ ಮಾಲ್‌ನಲ್ಲಿ ಮೈಸೂರಿನ ಅಪರೂಪದ ವಸ್ತುಗಳು ಮಾತ್ರವಲ್ಲದೆ ಕರ್ನಾಟಕದ 31 ಜಿಲ್ಲೆ, ದೇಶದ 28 ರಾಜ್ಯ ಹಾಗೂ 8 ಕೇಂದ್ರಾಡಳಿತ ಪ್ರದೇಶಗಳ ಪ್ರಖ್ಯಾತಿ ಹೊಂದಿರುವ ಜಿಐ ವಸ್ತುಗಳು ಒಂದೇ ಸೂರಿನಡಿ ದೊರೆಯಲಿವೆ. ಯೂನಿಟಿ ಮಾಲ್ ನಿರ್ಮಾಣದಿಂದ ಮೈಸೂರು ದಸರಾ ವಸ್ತು ಪ್ರದರ್ಶನವನ್ನು ವರ್ಷಪೂರ್ತಿ ನಡೆಸುವ ಬಹು ವರ್ಷಗಳ ಮೈಸೂರು ಜನರ ಕನಸು ನನಸಾಗುತ್ತಿದೆ. ಇದರಿಂದ ಮೈಸೂರಿಗೆ ಆಗಮಿಸುವ ದೇಶ–ವಿದೇಶಿ ಪ್ರವಾಸಿಗರ ಸಂಖ್ಯೆ ಕೂಡ ಮತ್ತಷ್ಟು ಹೆಚ್ಚಾಗಲಿದೆ. ಯೂನಿಟಿ ಮಾಲ್‌ನಿಂದ ಮೈಸೂರಿನ ಹೋಟೆಲ್, ತಿಂಡಿ, ತಿನಿಸು ಸೇರಿದಂತೆ ಇತರೆ ವ್ಯಾಪಾರ ವಹಿವಾಟು ವೃದ್ಧಿಗೊಳ್ಳಲಿದೆ.

ಯೂನಿಟಿ ಮಾಲ್ ಕಾರ್ಯಾಚರಣೆ, ನಿರ್ವಹಣೆ ನಮಗೆ ಕೊಡಿ

"ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ನಿರ್ಮಾಣ ಮಾಡಲುದ್ದೇಶಿಸಿರುವ ಯೂನಿಟಿ ಮಾಲ್‌ನ ಕಾರ್ಯಾಚರಣೆ ಮತ್ತು ನಿರ್ವಹಣೆ ಹೊಣೆಯನ್ನು ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ನೀಡುವಂತೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಹಣಕಾಸು ನೆರವಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಯೂನಿಟಿ ಮಾಲ್ ಅನ್ನು ದಸರಾ ವಸ್ತು ಪ್ರದರ್ಶನ ಆವರಣದ ಎಂ.ಜಿ.ರಸ್ತೆ ಭಾಗದಲ್ಲಿ ನಿರ್ಮಾಣ ಮಾಡಲು ಸ್ಥಳ ಸೂಚಿಸಲಾಗಿದೆ. ಈ ಸಂಬಂಧ ಈಗಾಗಲೇ ಸಚಿವರು ಹಾಗೂ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಯೂನಿಟಿ ಮಾಲ್ ನಿರ್ಮಾಣ ಮಾಡಲು ನೀಡುತ್ತಿರುವ ಸ್ಥಳದ ಬಗ್ಗೆ ಯಾವುದೇ ವಿವಾದವಿಲ್ಲ. ಈ ಸಂಬಂಧ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯವರು ಈಗಾಗಲೇ ಕಂದಾಯ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಯಿಂದ ವರದಿ ಪಡೆದಿದ್ದಾರೆ. ಯೂನಿಟಿ ಮಾಲ್‌ನಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆ, ದೇಶದ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ 85 ಮಳಿಗೆ ನಿರ್ಮಾಣವಾಗಲಿದೆ. ವರ್ಷದ 365 ದಿನವೂ ವಸ್ತು ಪ್ರದರ್ಶನವಿರುವ ಕಾರಣ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿ ವೇಗ ಪಡೆಯಲಿದೆ.

–ರಾಜೇಶ್ ಜಿ.ಗೌಡ,
ಕಾರ್ಯನಿರ್ವಾಹಕ ಅಧಿಕಾರಿ,
ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರ

ಮೈಸೂರಿಗರಿಗೆ ಉದ್ಯೋಗ ಭಾಗ್ಯ

ಭಾರತದ ಭೌಗೋಳಿಕ ಪ್ರಮಾಣೀಕೃತ ವಸ್ತುಗಳಿಗೆ ಸೂಕ್ತ ಮಾರಾಟ ವ್ಯವಸ್ಥೆ ಕಲ್ಪಿಸುವುದು, ಮೇಕ್ ಇನ್ ಇಂಡಿಯಾ ಪರಿಕಲ್ಪನೆಯನ್ನು ಉತ್ತೇಜಿಸು ವುದು, ರಾಷ್ಟ್ರೀಯ ಏಕೀಕರಣಕ್ಕೆ ಇಂಬು ನೀಡುವುದು, ಗುಣಮಟ್ಟದ ಸ್ವದೇಶಿ ವಸ್ತುಗಳಿಗೆ ಉತ್ತಮ ಮಾರುಕಟ್ಟೆ ಒದಗಿಸುವುದು, ಸ್ಥಳೀಯವಾಗಿ ಸಾವಿರಾರು ಜನರಿಗೆ ಉದ್ಯೋಗ ಸೃಷ್ಟಿಸುವುದು ಯೂನಿಟಿ ಮಾಲ್ ಯೋಜನೆಯ ಪರಿಕಲ್ಪನೆಯಾಗಿದೆ. ಮೈಸೂರು ಸೇರಿದಂತೆ ದೇಶದ ಭೌಗೋಳಿಕ ಪ್ರಮಾಣೀಕೃತ ತಿಂಡಿ ತಿನಿಸುಗಳನ್ನು ಮಾರಾಟ ಮಾಡುವ ಪ್ರತ್ಯೇಕ ಫುಡ್ ಕೋರ್ಟ್ ಅನ್ನು ಇದು ಒಳಗೊಂಡಿರಲಿದೆ. ಮನೋರಂಜನಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಲಾಗುತ್ತದೆ. ಜೊತೆಗೆ ಅಚ್ಚುಕಟ್ಟಾದ ಪಾರ್ಕಿಂಗ್ ವ್ಯವಸ್ಥೆ ಕೂಡ ಇರಲಿದೆ. ದೇಶೀಯವಾಗಿ ಕಾರ್ಯಕ್ರಮಗಳು ರೂಪುಗೊಳ್ಳುವ ಕಾನ್ಫರೆನ್ಸ್ ಹಾಲ್, ಗ್ಯಾಲರಿ ಸೇರಿದಂತೆ ಇತರೆ ಕ್ರಿಯಾತ್ಮಕ ಸ್ಥಳಗಳಿಗೆ ಕೂಡ ಅವಕಾಶ ಕಲ್ಪಿಸಲಾಗುತ್ತದೆ.

'ಈಡಿಗ ಜನಾಂಗದ ಮರೆಯಲಾಗದ ಮಹನೀಯರು' ಕೃತಿ ಬಿಡುಗಡೆ



ಲೇಖಕಿ ಶ್ರೀಮತಿ ಸುಜಯ ಸುರೇಶ್ ಸಂಪಾದಕತ್ವದ 'ಈಡಿಗ ಜನಾಂಗದ ಮರೆಯಲಾಗದ ಮಹನೀಯರು' ಕೃತಿಯನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಶನಿವಾರ ಬಿಡುಗಡೆಗೊಳಿಸಿದರು. ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮತ್ತಿತರರಿದ್ದರು.

ಮೈಸೂರು, ಫೆ.10(ಎಂಕೆ)– ಲೇಖಕಿ ಶ್ರೀಮತಿ ಸುಜಯ ಸುರೇಶ್ ಸಂಪಾದಕತ್ವದ 'ಈಡಿಗ ಜನಾಂಗದ ಮರೆಯಲಾಗದ ಮಹನೀಯರು' ಕೃತಿಯನ್ನು ಶನಿವಾರ ಲೋಕಾರ್ಪಣೆಗೊಳಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸ್ಪಂದನ ಸಾಂಸ್ಕೃತಿಕ ಪರಿಷತ್, ಕದಂಬ ಕಲಾ ಪೀಠ ಹಾಗೂ ಉದಯಗಿರಿ ಪ್ರಕಾಶನ ವತಿಯಿಂದ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಲೋಕಾರ್ಪಣೆಗೊಳಿಸಿದರು. ಬಳಿಕ ಮಾತನಾಡಿದ ಅವರು, ಈಡಿಗ ಸಮಾಜದಲ್ಲಿ ಮಹಾನ್ ವ್ಯಕ್ತಿಗಳು ಜನ್ಮ ತಾಳಿದ್ದಾರೆ. ಮಹಾನ್ ದಾರ್ಶನಿಕರಾದ ಬ್ರಹ್ಮಶ್ರೀ ನಾರಾಯಣ ಗುರುಗಳು ಬಸವಣ್ಣ ಅವರಂತೆ ಸಾಂಸ್ಕೃತಿಕ ನಾಯಕರಾಗಿದ್ದಾರೆ. ಚಲನಚಿತ್ರ ಕ್ಷೇತ್ರದಲ್ಲಿ ಡಾ.ರಾಜ್‌ಕುಮಾರ್, ರಾಜಕೀಯ ಕ್ಷೇತ್ರದಲ್ಲಿ ಬಂಗಾರಪ್ಪ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಈಡಿಗ ಜನಾಂಗದ ಮರೆಯಲಾಗದ ಮಹನೀಯರು ಕೃತಿಯು ಗಾತ್ರ–ಸೂತ್ರದಲ್ಲಿ, ರೂಪ–ಸ್ವರೂಪದಲ್ಲಿ ಮೇರು ಕೃತಿಯಾಗಿದೆ. ಮರೆಯಲಾರದ, ಮರೆಯಲುಬಾರದ ಮಹನೀಯರ ಮಾಹಿತಿ ಇದರಲ್ಲಿದೆ. ಇದೊಂದು ಸಾಂಸ್ಕೃತಿಕ ಸಂಕಥನ ಹಾಗೂ ಸಂಶೋಧನಾ ಗ್ರಂಥವೂ ಆಗಿದೆ. ಈಡಿಗ ಜನಾಂಗ ದೇಶದ ಎಲ್ಲೆಡೆ ಇದ್ದು, ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಜನಾಂಗದವರು ತಮ್ಮ ಹೆಸರಿನ ಮುಂದೆ ಗೌಡ ಎಂದು ಸೇರಿಸಿಕೊಳ್ಳುವುದೂ ಉಂಟು ಎಂದರು.

ಈ ಕೃತಿಯ ಹೃದಯ ಭಾಗದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಕಥಾನಕವೂ ಇದೆ. ನಾರಾಯಣ ಗುರುಗಳು ಬಹುಮುಖ ವ್ಯಕ್ತಿತ್ವವುಳ್ಳ ದಾರ್ಶನಿಕ ಕವಿ ಆಗಿದ್ದರು. ಬಸವಣ್ಣ, ಕುವೆಂಪು ಅವರಂತೆಯೇ ನಾರಾಯಣ ಗುರುಗಳು ಕೂಡ ಸಾಂಸ್ಕೃತಿಕ ನಾಯಕರಾಗಿದ್ದಾರೆ ಎಂದು ಹೇಳಿದರು.

ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಪುಸ್ತಕ ಕುರಿತು ಮಾತನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಡಿಡಿಪಿಐ ಎಚ್.ಕೆ. ಪಾಂಡು, ಲೇಖಕಿ ಸುಜಯ ಸುರೇಶ್, ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಕದಂಬ ಕಲಾಪೀಠದ ಸಂಸ್ಥಾಪಕ ಅಧ್ಯಕ್ಷ ಬಿ. ವಿದ್ಯಾಸಾಗರ ಕದಂಬ ಉಪಸ್ಥಿತರಿದ್ದರು.

ವೈದಿಕಶಾಸ್ತ್ರ ಮಾತನಾಡುವವರಿಗೆ ಕೋಮು ಬಣ್ಣ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ವಿಷಾದ





ಮೈಸೂರು ವೇದಶಾಸ್ತ್ರ ಪೋಷಿಣೀ ಸಭಾ ವತಿಯಿಂದ ಆಯೋಜಿಸಿದ್ದ ಶತೋತ್ತರ ಸಂಭ್ರಮದ ಅಂಗವಾಗಿ 50 ಮಂದಿ ವೈದಿಕರಿಗೆ ಗೌರವ ಸಮರ್ಪಣೆ ಸಲ್ಲಿಸುವ ಸಮಾರಂಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.10(ಎಸ್‌ಪಿಎನ್)– ವೈದಿಕ ಶಾಸ್ತ್ರವನ್ನು ಸಾರ್ವಜನಿಕವಾಗಿ ಮಾತನಾಡಿದರೆ, ರಾಜಕೀಯ, ಅಧಿಕಾರದ ಲಾಲಸೆಯಿಂದಾಗಿ ಕೆಲವರು ಕೋಮುವಾದದ ಬಣ್ಣ ಕಟ್ಟುತ್ತಿರುವ ಪ್ರಸಂಗಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಇದು ಹೀಗೆ ಮುಂದುವರೆದರೆ ಭಾರತೀಯ ಮೂಲ ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಆತಂಕ ವ್ಯಕ್ತಪಡಿಸಿದರು.

ಮೈಸೂರು ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಕಾಲೇಜು ಶತಮಾನೋತ್ಸವ ವೇದಶಾಸ್ತ್ರ ಪೋಷಿಣೀ ಸಭಾ ವತಿಯಿಂದ ಆಯೋಜಿಸಿದ್ದ ಶತೋತ್ತರ ಸಂಭ್ರಮದ ಅಂಗವಾಗಿ 50 ಮಂದಿ ವೈದಿಕರಿಗೆ ಗೌರವ ಸಮರ್ಪಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಅಲ್ಲಿನ ಮೂಲ ಸಂಸ್ಕೃತಿ, ಧರ್ಮಗಳ ಪಾಲನೆ ಮಾಡುವವರಿಲ್ಲದಂತಾಗಿ, ಧರ್ಮಗಳೇ ನಶಿಸುವ ಹಂತ ತಲುಪಿವೆ. ಆದರೆ, ಭಾರತದಲ್ಲಿ ನೂರಾರು ವರ್ಷಗಳಿಂದ ವಿದೇಶಿ ರಾಜರ ಆಕ್ರಮಣ, ರಾಜಕೀಯ ತಲ್ಲಣ, ಸಾಮಾಜಿಕ ಸ್ಥಿತಿ–ಗತಿಗಳು ಏರುಪೇರಾದರೂ ವೈದಿಕರ ತ್ಯಾಗದ ಫಲವಾಗಿ ಹಿಂದೂ ಧರ್ಮ ಉಳಿದಿದೆ. ಮುಂದೆಯೂ ಈ ಧರ್ಮ ಉಳಿಯಬೇಕಾದರೆ, ಯುವಕರಿಗೆ ವೇದಶಾಸ್ತ್ರ ಕಲಿಸುವ ಜವಾಬ್ದಾರಿ ಹಿರಿಯರ ಮೇಲಿದೆ ಎಂದರು.

ಎಲ್ಲಾ ಜಾತಿಗಳಲ್ಲಿ ಇರುವಂತೆ ಬ್ರಾಹ್ಮಣರಲ್ಲೂ ಅನೇಕ ಸಮಸ್ಯೆಗಳಿವೆ. ವೈದಿಕರಿಗೆ ಹೆಣ್ಣು ಕೊಡುತ್ತಿಲ್ಲ.

ಬ್ರಾಹ್ಮಣ ಯುವಕರಿಗೆ ಸರ್ಕಾರಿ ನೌಕರಿ ಸಿಗುತ್ತಿಲ್ಲ. ಆಧುನಿಕತೆಯ ಭರಾಟೆಯಲ್ಲಿ ವೈದಿಕ ಜೀವನ ಪದ್ಧತಿಯಲ್ಲಿ ಬದಲಾವಣೆ ಸೇರಿದಂತೆ ಸಾಲುಸಾಲು ಸಮಸ್ಯೆಗಳನ್ನು ಸ್ವರ್ಣವಲ್ಲಿ ಮಠದ ಶ್ರೀಗಳು ನನ್ನ ಗಮನಕ್ಕೆ ತಂದಿದ್ದಾರೆ. ಈ ಸಮಸ್ಯೆಗಳನ್ನು ಮುಂದಿನ ದಿನಗಳಲ್ಲಿ ಬಗೆಹರಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

50 ಮಂದಿ ವೈದಿಕರಿಗೆ ಸನ್ಮಾನ: ಹಿರಿಯ ವೈದಿಕರಾದ ಎ.ಎಸ್.ವಿಶ್ವೇಶ್ವರ ಜೋಯಿಸ್, ಕೆ.ಜಿ.ಶಂಕರನಾರಾಯಣ ಶಾಸ್ತ್ರೀ, ಬಿ.ಆರ್.ನರಸಿಂಹಸ್ವಾಮಿ, ಜಗನ್ನಾಥ ಸೀತರಾಮ ಜೋಶಿ, ಹಿ.ಕೃ.ಶ್ರೀನಿವಾಸ ಶರ್ಮಾ, ಸುಬ್ರಹ್ಮಣ್ಯ ಗಣಪತಿ ಭಟ್ಟ, ಕೃಷ್ಣಶಂಕರ ಭಟ್ಟ, ರಾಮಕೃಷ್ಣ ಭಟ್ಟ ಶಂಕರಲಿಂಗ, ಕೃಷ್ಣ ಮಂಜ ಭಟ್ಟ, ಹೆಚ್.ಬಾಲಚಂದ್ರ ಜೋಯಿಸ್, ತಿರುಮಲ್ಲೇಶ್ವರ ರಾಮ ಕೃಷ್ಣ ಭಟ್ಟ, ಮಹಾಬಲೇಶ್ವರ ನಾಗಭಟ್ಟ, ರಘುಪತಿ ನಾರಾಯಣ ಭಟ್ಟ, ರಮೇಶ ಗಂಗಾಧರ ಭಟ್ಟ ಜೋಶಿ, ತಿರುಮಲಾಚಾರ್, ನರಸಿಂಹ ಪರಮೇಶ್ವರ ಜೋಶಿ, ನಾರಾಯಣ ನಾಗಭಟ್ಟ, ಗಣಪತಿ ವೆಂಕಟರಮಣ ಭಟ್ಟ, ಎನ್.ಎ.ಚಂದ್ರಶೇಖರ ಶಾಸ್ತ್ರೀ, ವಿ.ಚಂದ್ರಶೇಖರ ಸಣ್ಣ ಭಟ್ಟ, ಅನಂತಾಚಾರ್ಯ ಜಹಾಗೀರದಾರ್, ಟಿ.ಎಂ.ಚಂದ್ರಶೇಖರ ಭಟ್ಟ, ಚಿದಂಬರ ಭಟ್ಟ, ರಾಮಶಾಸ್ತ್ರಿ ಜೋಶಿ, ವೆಂಕಟರಮಣ ಕೃಷ್ಣ ಜೋಶಿ, ಗಣಪತಿ ಗೋಪಾಲ ಭಟ್ಟ, ಟಿ.ಎ.ಶೇಷಾದ್ರಿ, ಗಣಪತಿ ಭಟ್ಟ ರಾಮಭಟ್ಟ ಜೋಶಿ, ಶಂಕರ ಭಟ್ಟ ನಾಗೇಶಭಟ್ಟ ಜೋಶಿ, ಟಿ.ಎಸ್.ಸುಬ್ರಹ್ಮಣ್ಯ, ಅನಂತ ಭಟ್ಟ ದೇವಧರ್, ಜಯತೀರ್ಥಾಚಾರ್ ಒಡೇರ್, ಕೃಷ್ಣಭಟ್ಟ ಅಪ್ಪಣ್ಣಭಟ್ಟ ಜೋಶಿ, ರಾಮಚಂದ್ರ ಶಂಭುಭಟ್ಟ, ಹೆಚ್.ಸಿ. ವಾಸುದೇವ, ಕೆ.ಎಸ್.ಅನಂತರಾಘವನ್, ಶಿವರಾಮ ತಿಮ್ಮಣ್ಣ ಭಟ್ಟ, ಕೃಷ್ಣಾನಂದ ಶಿವರಾಮಭಟ್ಟ, ನಾರಾಯಣ ಶಂಭು ಭಟ್ಟ, ಶಂಕರ ಭಟ್ಟ ಮಲ್ಹಾರ ಭಟ್ಟ ಅಗ್ನಿಹೋತ್ರಿ, ನಾಗನಂದ ಕುಮಾರ ಮಾರಿಗೋಳಿ, ಉಮೇಶ್ ಚಕ್ರವರ್ತಿ, ಗಣಪತಿ ಹೇರಂಬ ಭಟ್ಟ, ರಾಮಕೃಷ್ಣ ಸೀತಾರಾಮ ಭಟ್ಟ ಅಲೇಖ, ಎಂ.ಎಸ್. ಶಿವಕುಮಾರ ಅವಧಾನಿ, ಡಿ.ಸತ್ಯನಾರಾಯಣ ಆಚಾರ್ಯ ಸೇರಿದಂತೆ ಒಟ್ಟು 50 ಮಂದಿ ವೈದಿಕರನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ವೇದಶಾಸ್ತ್ರ ಪೋಷಿಣೀ ಸಭಾ ಅಧ್ಯಕ್ಷ ಪ್ರೊ.ಬಿ.ಎಸ್. ನಾಗರಾಜ ಭಟ್ಟ, ವಿದ್ವಾನ್ ಎ.ಎಂ. ಚಂದ್ರಶೇಖರ್, ವಿದ್ವಾನ್ ಡಾ.ಬಿ.ವಿ. ಸತ್ಯನಾರಾಯಣ ಉಪಸ್ಥಿತರಿದ್ದರು. ಹೇರಂಬ ಭಟ್ಟ ನಿರೂಪಿಸಿದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆ

ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಪರ ಬಿಜೆಪಿ ಮುಖಂಡರ ಮತಯಾಚನೆ



ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ ಉಪಚುನಾವಣೆಯ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಎ.ಪಿ.ರಂಗನಾಥ್ ಪರ ತಾವರೆಕೆರೆಯ ಹರ್ಷಗಾನವಿ ಪ್ಯಾಲೇಸ್‌ನಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ.ದೇವೇಗೌಡರು ಪಾಲ್ಗೊಂಡು ಮತಯಾಚಿಸಿದರು.

ಬೆಂಗಳೂರು, ಫೆ.10(ಕೆಎಂಶಿ)– ಬಿಜೆಪಿ–ಜೆಡಿಎಸ್ ಒಂದಾಗಿ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆಯಲ್ಲಿ ಒಗ್ಗಟ್ಟು ಪ್ರದರ್ಶನ ಮಾಡುವ ಮೂಲಕ ಮುಂಬರುವ ಲೋಕಸಭಾ ಚುನಾವಣೆಗೂ ಮೈತ್ರಿ ಮತ್ತಷ್ಟು ಗಟ್ಟಿ ಆಗಲಿದೆ ಎಂಬುದನ್ನು ಉಭಯ ಪಕ್ಷದ ನಾಯಕರು ಇಂದಿಲ್ಲಿ ಸಾಬೀತುಪಡಿಸಿದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಚಿವ ಡಾ. ಅಶ್ವಥ್‌ನಾರಾಯಣ, ಕೆ.ಗೋಪಾಲಯ್ಯ, ಮೈತ್ರಿಕೂಟದಿಂದ ಕಣಕ್ಕಿಳಿದಿರುವ ಜೆಡಿಎಸ್ ಅಭ್ಯರ್ಥಿ ಎ.ಪಿ. ರಂಗನಾಥ್ ಪರವಾಗಿ ಇಂದಿಲ್ಲಿ ಬಿರುಸಿನ ಮತಯಾಚನೆ ಮಾಡಿದರು. ನಗರ ಹಾಗೂ ಗ್ರಾಮಾಂತರ ಪ್ರದೇಶದ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳಿಗೆ ತೆರಳಿ ಎನ್‌ಡಿಎ ಅಭ್ಯರ್ಥಿ ರಂಗನಾಥ್ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿಜಯೇಂದ್ರ, ಉಪಚುನಾವಣೆಗೆ ಕಾರಣರಾದವರನ್ನು ಕೈಬಿಟ್ಟು ಮೈತ್ರಿಕೂಟದ ಅಭ್ಯರ್ಥಿ ರಂಗನಾಥ್ ಅವರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು. ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಶಿಕ್ಷಣ ಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ, ಇಂತಹ ಪವಿತ್ರ ಕ್ಷೇತ್ರಕ್ಕೆ ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಕರ್ತವ್ಯ ನಿಮ್ಮದು.

ನಾವು ಅಂತಹ ಯೋಗ್ಯ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ, ಅವರಿಗೆ ತಮ್ಮ ಅಮೂಲ್ಯ ಮತ ನೀಡಿ ಉಪಚುನಾವಣೆಗೆ ಕಾರಣರಾದವರನ್ನು ಸೋಲಿಸಿ ಎಂದರು.

ಚುನಾವಣೆಯಲ್ಲಿ ನಾವು ಯಾರನ್ನೂ ಸೋಲಿಸಲು ಹೋಗುತ್ತಿಲ್ಲ, ಕ್ರಿಯಾಶೀಲ ರಾಜಕಾರಣಿ, ಅದಕ್ಕೂ ಹೆಚ್ಚಾಗಿ ಸಮಾಜದಲ್ಲಿ ತಮ್ಮದೇ ಆದ ಸೇವೆ ಮಾಡುತ್ತಿರುವ ನ್ಯಾಯವಾದಿ ರಂಗನಾಥ್ ಅವರನ್ನು ಬೆಂಬಲಿಸಿ ಎಂದರು. ಉಪಚುನಾವಣೆಗೆ ಕಾರಣರಾದವರು ಎಷ್ಟು ಪಕ್ಷಗಳನ್ನು ಬದಲಿಸಿದ್ದಾರೆ, ಅವರು ವಿಧಾನಪರಿಷತ್ತಿನಲ್ಲಿ ನಿಮ್ಮ ಪ್ರತಿನಿಧಿಯಾಗಿದ್ದಾಗ ನೀಡಿದ್ದ ಕೊಡುಗೆ ಅಪಾರವಷ್ಟೆ, ನೀವು ಪ್ರಜ್ಞಾವಂತ ಮತದಾರರು, ನಾವು ನಿಮಗೆ ಹೆಚ್ಚು ಹೇಳುವಂತದ್ದೇನಿಲ್ಲ, ನಿಮ್ಮ ಜೊತೆ ಸದಾಕಾಲ ಇರುವ ರಂಗನಾಥ್ ಅವರಿಗೆ ಮತ ನೀಡಿ ಎಂದರು.

ಅಮಿತ್ ಷಾ ನೇತೃತ್ವದಲ್ಲಿ ರಾಜ್ಯ ಬಿಜೆಪಿ ಕೋರ್ ಕಮಿಟಿ

ಲೋಕಸಭಾ ಕ್ಷೇತ್ರದ ಮುಖಂಡರ ಸಭೆ; ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾಹಿತಿ



ಮೈಸೂರು ಬಿಜೆಪಿ ಕಚೇರಿಯಲ್ಲಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.10(ಎಸ್‌ಬಿಡಿ)– ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಷಾ ಅವರು ಮೈಸೂರಿನಲ್ಲಿ ಭಾನುವಾರ ಬಿಜೆಪಿ ರಾಜ್ಯ ಕೋರ್ ಕಮಿಟಿ ಹಾಗೂ ನಾಲ್ಕು ಲೋಕಸಭಾ ಕ್ಷೇತ್ರಗಳ ಪ್ರಮುಖರ ಸಭೆ ನಡೆಸಲಿದ್ದಾರೆ ಎಂದು ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಅಮಿತ್ ಶಾ ಪ್ರವಾಸದ ವಿವರ ನೀಡಿ, ಭಾನುವಾರ ಬೆಳಗ್ಗೆ 11ಕ್ಕೆ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿಯ ದರ್ಶನ ಪಡೆದ ನಂತರ ಮಧ್ಯಾಹ್ನ 12ಕ್ಕೆ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12.35ಕ್ಕೆ ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ಗೆ ವಾಪಸ್ಸಾಗಲಿದ್ದಾರೆ. ಮಧ್ಯಾಹ್ನ 2.30ಕ್ಕೆ ರಾಜ್ಯ ಕೋರ್ ಕಮಿಟಿ ಸಭೆ, ನಂತರ ಮೈಸೂರು ಕ್ಲಸ್ಟರ್ ವಿಭಾಗದ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಲೋಕಸಭಾ ಕ್ಷೇತ್ರಗಳ ಪ್ರಮುಖರೊಂದಿಗೆ ಸಭೆ ನಡೆಸಿ, ಸಂಜೆ 4.55ಕ್ಕೆ ಮೈಸೂರಿನಿಂದ ತೆರಳಲಿದ್ದಾರೆ ಎಂದರು. ಅಮಿತ್ ಶಾ ಅಧ್ಯಕ್ಷತೆಯಲ್ಲಿ ನಡೆಯುವ ಕೋರ್ ಕಮಿಟಿ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಮೇಲ್ಮನೆ ವಿಪಕ್ಷ ನಾಯಕ ಕೋಟಾ ಶ್ರೀನಿವಾಸ ಪೂಜಾರಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಚಾಮರಾಜನಗರ ಕ್ಷೇತ್ರ ಚುನಾವಣಾ ಉಸ್ತುವಾರಿ ಎನ್.ವಿ.ಫಣೀಶ್, ಮಾಜಿ ಮೇಯರ್ ಶಿವಕುಮಾರ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಕೇಬಲ್ ಮಹೇಶ್ ಹಾಗೂ ಗಿರಿಧರ್ ಹಾಜರಿದ್ದರು.

ಮೈಸೂರಲ್ಲಿ ವಾಸ್ತವ್ಯ: ಕೇಂದ್ರ ಸಚಿವ ಅಮಿತ್ ಶಾ ಶನಿವಾರ ತಡರಾತ್ರಿಗೆ ಮೈಸೂರಿಗೆ ಆಗಮಿಸಿದ್ದು, ಮಹಾತ್ಮ ಗಾಂಧಿ ರಸ್ತೆಯಲ್ಲಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಭಾನುವಾರ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನಂತರ ಸಂಜೆ ವಾಪಸ್ಸಾಗಲಿದ್ದಾರೆ.

ಅಗ್ಗದ ಪ್ರಚಾರಕ್ಕೆ ಮಾತನಾಡಬೇಡಿ...

ಮೈಸೂರು: ಅಗ್ಗದ ಪ್ರಚಾರಕ್ಕೆ ಮಾತನಾಡುವುದು ಹಿರಿತನಕ್ಕೆ ಗೌರವ ತರುವುದಿಲ್ಲ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರಿಗೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಟಾಂಗ್ ನೀಡಿದರು. ಹೆಚ್.ವಿಶ್ವನಾಥ್ ಸ್ವಪಕ್ಷದ ವಿರುದ್ಧವೇ ನಿರಂತರ ಆರೋಪ ಮಾಡುತ್ತಿರುವ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ವಿಶ್ವನಾಥ್ ಅವರು ಯಾವ ಪಕ್ಷದಲ್ಲಿದ್ದೇನೆ ಎಂಬುದನ್ನು ಅರಿತು ಮಾತನಾಡುವುದು ಸೂಕ್ತ. ಅಗ್ಗದ ಪ್ರಚಾರಕ್ಕಾಗಿ ಅವರು ಮಾತನಾಡುತ್ತಾರೆ. ರಾಜ್ಯ ಸರ್ಕಾರದ ಬಹುಮಾನ ಪಡೆಯಲು ಆಗಾಗ್ಗೆ ಈ ರೀತಿ ಬಿಜೆಪಿಯನ್ನು ದೂಷಿಸುತ್ತಿರುತ್ತಾರೆ. ಅವರ ಮಾತಿಗೆ ಹೆಚ್ಚು ಮಹತ್ವ ನೀಡುವ ಅವಶ್ಯಕತೆ ಇಲ್ಲ ಎಂದರು.

ಮಾತನಾಡುವ ಚಪಲ ಮುಂದುವರೆಸಬೇಕೆಂದರೆ ಕೂಡಲೇ ನಿಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ. ಬಿಜೆಪಿ ಋಣದಲ್ಲೇ ಇದ್ದು ಹೀಗೆ ಮಾತನಾಡುವುದು ನಿಮ್ಮ ಹಿರಿತನಕ್ಕೆ ಗೌರವ ತರುವುದಿಲ್ಲ. ಅವರ ವಿರುದ್ಧ ಕ್ರಮ ಕೈಗೊಳ್ಳುವುದು ದೊಡ್ಡ ವಿಚಾರವಲ್ಲ. ಆದರೆ ಹಿರಿಯ ರಾಜಕಾರಣಿ ಎಂದು ಬಿಜೆಪಿ ಗೌರವ ನೀಡುತ್ತಿದೆ. ಎಚ್ಚರದಿಂದ ಮಾತನಾಡಿ, ಘನತೆ ಉಳಿಸಿಕೊಳ್ಳಲಿ ಎಂದು ಹೇಳಿದರು.

ಮೈಸೂರು ಮಿತ್ರ

ಭಾನುವಾರ 11 ಫೆಬ್ರವರಿ 2024

ಕೊಡವ ಭಾಷಾ ಒಮ್ಮ ತೆಳ್ಚಿ ಬುಡಿ ಪುಸ್ತಕ ಲೋಕಾರ್ಪಣೆ

ಛಲ ಇದ್ದರೆ ಏನನ್ನು ಬೇಕಾದರೂ ಸಾಧಿಸಬಹುದು



'ಒಮ್ಮ ತೆಳ್ಚಿ ಬುಡಿ' ಕೊಡವ ಪುಸ್ತಕ ಲೋಕಾರ್ಪಣೆಗೊಳಿಸಿದ ಗಣ್ಯರು.

ಮಡಿಕೇರಿ, ಫೆ10– ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಛಲ ಇದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂದು ಸಾಹಿತಿ ಪಂದ್ಯಂಡ ರೇಣುಕಾ ಸೋಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ನಗರದ ಪತ್ರಿಕಾಭವನದಲ್ಲಿ ಕೊಡವ ಮಕ್ಕಡ ಕೂಟದ 83ನೇ ಪುಸ್ತಕವಾಗಿ ತಾವು ರಚಿಸಿದ 'ಒಮ್ಮ ತೆಳ್ಚಿ ಬುಡಿ' ಕೊಡವ ಪುಸ್ತಕ ಲೋಕಾರ್ಪಣೆಗೊಂಡ ಬಳಿಕ ಅವರು ಮಾತನಾಡಿದರು. ಕಲಿಕೆ ಎನ್ನುವುದು ನಿರಂತರವಾದದ್ದು. ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಕಲಿಯುತ್ತಲೇ ಇರುತ್ತಾನೆ. ಯಾರಲ್ಲಿ ಕಲಿಯುವ ಪ್ರಯತ್ನ, ಶ್ರಮ ಇರುತ್ತದೋ ಅವರು ಸಾಧನೆಯ ಹಾದಿ ಹಿಡಿದು ಮುನ್ನಡೆಯುವುದು ಅವಶ್ಯ. ಇದಕ್ಕೆ ಆತ್ಮವಿಶ್ವಾಸ ಅತ್ಯವಶ್ಯಕವೆಂದು ತಿಳಿಸಿದರು.

ಸಾಹಿತ್ಯ ಪ್ರಾಕಾರಗಳಲ್ಲಿ 'ಹಾಸ್ಯ'ವೂ ಒಂದಾಗಿದೆ. ಇಂದಿನ ಆಧುನಿಕ ಸಮಾಜದಲ್ಲಿ ಒತ್ತಡದ ಕಾರ್ಯನಿರ್ವಹಣೆಯಿಂದ ಬಹುತೇಕ ಮಂದಿ ಬಳಲುತ್ತಿದ್ದಾರೆ. ಇಂತಹ ಒತ್ತಡ, ಜಂಜಾಟಗಳಿಂದ ಮುಕ್ತವಾಗಿ, ಒಂದಷ್ಟು ಕಾಲ ಮನಸು ಹಗುರವಾಗಲು ಹಾಸ್ಯ ಸಹಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಸುತ್ತಮುತ್ತಲ ಸಮಾಜದಲ್ಲಿ ನಡೆಯುವ ವಿಚಾರಗಳನ್ನೆ ಆಧರಿಸಿ 'ಒಮ್ಮ ತೆಳ್ಚಿ ಬುಡಿ' ಹಾಸ್ಯಬರಹದ ಪುಸ್ತಕವನ್ನು ರಚಿಸಿರುವುದಾಗಿ ತಿಳಿಸಿದರು.

ಚೋಮ–ಚೋಂದ್ ಹೆಸರಿನ ದಂಪತಿಗಳ ನಡುವಿನ ತಮಾಷೆ, ಪ್ರೀತಿ, ಒಬ್ಬರಿಗೊಬ್ಬರಿಗೆ ನೀಡುವ ಬೆಂಬಲ, ಜಗಳ, ಬೈಗುಳ ಎಲ್ಲವನ್ನು ಬರಹದಲ್ಲಿ ತರುವ ಪ್ರಯತ್ನ ಮಾಡಿದ್ದೇನೆ. ಇದು ಹಾಸ್ಯವನ್ನು ಆಧರಿಸಿದ ಬರಹವಾಗಿದ್ದರು, ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಪ್ರಯತ್ನವನ್ನು ಮಾಡಿದ್ದೇನೆ. ಪುಸ್ತಕ ಬಿಡುಗಡೆಗೆ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ ಸಹಕಾರವನ್ನು ಅವರು ಇದೇ ಸಂದರ್ಭ ಸ್ಮರಿಸಿದರು. 'ಒಮ್ಮ ತೆಳ್ಚಿ ಬುಡಿ' ಪುಸ್ತಕವನ್ನು ಅನಾವರಣಗೊಳಿಸಿದ ಮಾಜಿ ಸೈನಿಕ, ನಟ, ನಿರ್ದೇಶಕ, ನಿರ್ಮಾಪಕ, ಸಾಹಿತಿ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ, ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಹೆಚ್ಚಳದಿಂದಾಗಿ ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗಿದೆ. ಬರೆದ ಪುಸ್ತಕ ಓದುಗರಿಗೆ ತಲುಪುವುದು ಅತ್ಯಂತ ಅವಶ್ಯಕ. ಇದಕ್ಕೆ ಪುಸ್ತಕ ಬಿಡುಗಡೆಯ ಜೊತೆಗೆ ಪ್ರಚಾರವು ಹೆಚ್ಚಾಗಬೇಕೆಂದು ಅನಿಸಿಕೆ ವ್ಯಕ್ತಪಡಿಸಿದರು.

ಈಗಾಗಲೇ ಕೊಡವ ಮಕ್ಕಡ ಕೂಟದ ಮೂಲಕ ಹಲವು ಬರಹಗಾರರಿಗೆ ಪ್ರೋತ್ಸಾಹ ನೀಡುವ ಮೂಲಕ ಕೊಡಗಿನ ಸಾಹಿತಿಗಳನ್ನು ಗುರುತಿಸುವ ಕೆಲಸವನ್ನು ಬೊಳ್ಳಜಿರ ಬಿ.ಅಯ್ಯಪ್ಪ ಮಾಡುತ್ತಿರುವ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದರು.

ಮಾಜಿ ಯೋಧ ಹಾಗೂ ಸಮಾಜ ಸೇವಕ ನಂದಿನೆರವಂಡ ಸಜನ್ ಪೂವಣ್ಣ ಮಾತನಾಡಿ, ಎಲ್ಲರನ್ನು ನಗಿಸುವ ಕಾರ್ಯ ಸುಲಭದ ಮಾತಲ್ಲ. ಅಂತಹ ಪ್ರಯತ್ನವನ್ನು ಲೇಖಕಿ ಪಂದ್ಯಂಡ ರೇಣುಕಾ ಸೋಮಯ್ಯ ಮಾಡಿದ್ದು, ಅವರ ಪುಸ್ತಕ ಬಿಡುಗಡೆಗೆ ತನ್ನ ತಾಯಿಯ ಹೆಸರಿನಲ್ಲಿ ಸಹಕಾರ ನೀಡಿರುವುದಾಗಿ ತಿಳಿಸಿ, ಮುಂದಿನ ದಿನಗಳಲ್ಲಿ ಕೊಡವ ಪುಸ್ತಕಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕುವಂತಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ, ಕೊಡವ ಮಕ್ಕಡ ಕೂಟದ ವತಿಯಿಂದ ಇಲ್ಲಿಯವರೆಗೆ ಜಿಲ್ಲೆಯ ಹಲವು ಬರಹಗಾರರು, ಸಾಹಿತಿಗಳು ಬರೆದ ಕೊಡವ, ಕನ್ನಡ, ಇಂಗ್ಲಿಷ್, ಹಿಂದಿ ಸೇರಿದಂತೆ ಒಟ್ಟು 82 ಕೃತಿಗಳನ್ನು ಬಿಡುಗಡೆ ಮಾಡಲಾಗಿದ್ದು, ಇದೀಗ 83ನೇ ಪುಸ್ತಕ ಹಾಗೂ ಲೇಖಕಿ ಪಂದ್ಯಂಡ ರೇಣುಕಾ ಸೋಮಯ್ಯ ಅವರ ಎರಡನೇ ಪುಸ್ತಕ "ಒಮ್ಮ ತೆಳ್ಚಿ ಬುಡಿ" ಕೊಡವ ಪುಸ್ತಕವನ್ನು ಲೋಕಾರ್ಪಣೆಗೊಳಿಸಲಾಗಿದೆ. ಮಾರ್ಚ್‌ನಲ್ಲಿ 17 ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತಿದ್ದು, ಆ ಮೂಲಕ ಕೂಟದಿಂದ ನೂರು ಪುಸ್ತಕಗಳನ್ನು ಪ್ರಕಟಿಸಿದಂತಾಗುತ್ತದೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ತೆನ್ನೀರ ಪೊನ್ನಮ್ಮ ಉತ್ತಪ್ಪ, ಪೊನ್ನಚೆಟ್ಟೀರ ಪ್ರದೀಪ್ ಉಪಸ್ಥಿತರಿದ್ದರು.

ನ್ಯಾಯಾಂಗ ಇಲಾಖಾ ನೌಕರರ ಕ್ರೀಡಾಕೂಟಕ್ಕೆ ಚಾಲನೆ

ಕ್ರೀಡೆಯಲ್ಲಿ ಸೋಲು-ಗೆಲುವು ಸಾಮಾನ್ಯ, ಸಮನಾಗಿ ಸ್ವೀಕರಿಸಿ



ಮಡಿಕೇರಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೆಚ್.ಸಿ.ಶಾಮ್‌ಪ್ರಸಾದ್ ಮಾತನಾಡುತ್ತಿರುವುದು.

ವಿರಾಜಪೇಟೆ, ಫೆ.10– ಪ್ರತಿಭೆ ಯಾರ ಸೊತ್ತು ಅಲ್ಲ. ಗುರುತಿಸಿ ಕೊಳ್ಳಲು ಕಾಲವಕಾಶ ಬೇಕು. ಕ್ರೀಡೆಯಲ್ಲಿ ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸುವಂತಾಗಬೇಕು ಎಂದು ಮಡಿಕೇರಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೆಚ್.ಸಿ.ಶಾಮ್‌ಪ್ರಸಾದ್ ತಿಳಿಸಿದರು.

ಕೊಡಗು ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಸಂಘ ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ, ಪೊನ್ನಂಪೇಟೆ ಹಾಗೂ ಕೊಡಗು ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ವತಿಯಿಂದ 'ಜಿಲ್ಲಾ ಸಮ್ಮೇಳನದ ಪ್ರಯುಕ್ತ ವಿರಾಜಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ಆಯೋಜಿಸಲಾಗಿದ್ದ 2024ರ ಕ್ರೀಡಾಕೂಟ' ಉದ್ಘಾಟಿಸಿ ಮಾತನಾಡಿದ ಅವರು, ನೌಕರರ ಸಂಘ ಉರಿ ಬಿಸಿಲಿನಲ್ಲೂ ಕ್ರೀಡಾಕೂಟ ಆಯೋಜಿಸಿದೆ. ಇನ್ನು ಮುಂದೆಯೂ ಪ್ರತಿ ವರ್ಷ ಕೊಡಗಿನ ಇತರ ತಾಲೂಕುಗಳಲ್ಲಿಯೂ ಈ ರೀತಿ ಕ್ರೀಡಾಕೂಟ ನಡೆಸುವುದು ಉತ್ತಮ ಎಂದರು.

ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಅಪ್ಪಣ್ಣ ಮುಖ್ಯ ಅತಿಥಿಯಾಗಿ ಮಾತನಾಡಿ, ಕ್ರೀಡೆಗೆ ಎಲ್ಲಾ ಜನರನ್ನು ಒಗ್ಗೂಡಿಸುವಂತ ಶಕ್ತಿ ಇದೆ. ಕ್ರೀಡೆಯಿಂದ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಕೆಲಸಗಳ ಒತ್ತಡದ ನಡುವೆಯು ನೌಕರರಿಗೆ ಮನೋರಂಜನೆಯ ಅಗತ್ಯವಿದೆ. ನ್ಯಾಯಾಂಗ ಇಲಾಖೆಯ ನೌಕರರ ಸಂಘ ಇದೇ ರೀತಿ ಪ್ರತಿವರ್ಷ ಕ್ರೀಡಾಕೂಟ ಏರ್ಪಡಿಸುವಂತಾಗಲಿ. ಇದಕ್ಕೆ ವಕೀಲರ ಸಂಘದ ಸಹಕಾರ ಸದಾ ಇರುವುದಾಗಿ ಹೇಳಿದರು.

ಪೊನ್ನಂಪೇಟೆ ವಕೀಲರ ಸಂಘದ ಅಧ್ಯಕ್ಷ ಕೆ.ಡಿ.ಮುತ್ತಪ್ಪ ಅವರು ಮಾತನಾಡಿ, ಕ್ರೀಡೆಯಿಂದ ಪ್ರತಿಯೊಬ್ಬರು ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಪುಟ್ಟ ಮಕ್ಕಳಿಗೂ ಕ್ರೀಡೆಯಲ್ಲಿ ಭಾಗವಹಿಸುವ ಅವಕಾಶಗಳಿಗಾಗಿ ಪ್ರತಿಶಾಲೆಯಲ್ಲಿಯು ಆಟದ ಮೈದಾನದ ಅವಶ್ಯವಿರುವುದಾಗಿ ಹೇಳಿದರು.

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಸ್.ಸುಜಾತ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನೌಕರರ ಪತ್ತಿನ ಸಹಕಾರ ಸಂಘ ಇದು ಮೊದಲ ಭಾರಿಗೆ ಕ್ರೀಡಾಕೂಟ ಏರ್ಪಡಿಸಿರುವುದು ಸಂತಸ ತಂದಿದೆ. ಕ್ರೀಡೆಯಲ್ಲಿ ಸೋಲು ಮತ್ತು ಗೆಲುವಿಗಿಂತ ಭಾಗವಹಿಸುವುದು ಮುಖ್ಯ ಎಂದರು. ನೌಕರರ ಪತ್ತಿನ ಸಂಘದ ಜಯಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ನ್ಯಾಯಾಧೀಶರುಗಳಾದ ಮಂಜುನಾಥ್, ನಾಗೇಶ್, ಕೆಂಪರಾಜು, ಶಮಿ, ಪ್ರಶಾಂತಿ, ಸಂತೋಷ್ ಕೊಠಾರಿ, ಪ್ರದೀಪ್ ಪೊತ್ತೆದಾರ್, ವಕೀಲರ ಸಂಘದ ಕಾರ್ಯದರ್ಶಿ ವಿ.ಜಿ.ರಾಕೇಶ್, ಪೊನ್ನಂಪೇಟೆ ನ್ಯಾಯಾಧೀಶರಾದ ಶಿವರಾಜ್ ಬಂದಿ ಮುಂತಾದವರು ಉಪಸ್ಥಿತರಿದ್ದರು. ನೌಕರರ ಸಂಘದ ಗೋವಿಂದರಾಜ್ ಸ್ವಾಗತಿಸಿದರು. ಮಂಜುನಾಥ್ ನಿರೂಪಿಸಿದರೆ, ಹೆಚ್.ಟಿ. ಲಕ್ಷ್ಮಣ ವಂದಿಸಿದರು. ಜಿಲ್ಲೆಯ ನ್ಯಾಯಾಂಗ ಇಲಾಖೆಯ ಎಲ್ಲಾ ತಾಲೂಕುಗಳ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು. ತೀರ್ಪುಗಾರರಾಗಿ ತಿಮ್ಮಯ್ಯ, ಪ್ರವೀಣ್, ತಮ್ಮಯ್ಯ ಅವರು ಭಾವಹಿಸಿದ್ದರು.

ಭರದಿಂದ ಸಾಗುತ್ತಿದೆ ಜನರಲ್ ತಿಮ್ಮಯ್ಯ ವೃತ್ತದ ಕಾಮಗಾರಿ



ಮಡಿಕೇರಿ, ಫೆ.10– ಬಸ್ ಡಿಕ್ಕಿಯಾಗಿ ಹಾನಿಗೊಳಗಾಗಿದ್ದ ಮಡಿಕೇರಿ ನಗರದ ಜನರಲ್ ತಿಮ್ಮಯ್ಯ ವೃತ್ತದ ಅಭಿವೃದ್ಧಿ ಕಾರ್ಯ ಭರದಿಂದ ಸಾಗಿದೆ. ಘಟನೆ ನಡೆದು ಆರು ತಿಂಗಳು ಕಳೆದರೂ ಕಾಮಗಾರಿ ಚುರುಕು ಪಡೆಯದ ಕಾರಣ ಸಾರ್ವಜನಿಕ ವಲಯದಲ್ಲಿ ಟೀಕೆಗಳು ಕೇಳಿ ಬಂದಿತ್ತು.

ಇದರಿಂದ ಎಚ್ಚೆತ್ತುಕೊಂಡ ನಗರಸಭೆ ಜನರಲ್ ತಿಮ್ಮಯ್ಯ ವೃತ್ತದ ಅಭಿವೃದ್ಧಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚನೆ ನೀಡಿತ್ತು. ಇದೀಗ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದ್ದು, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಅವರು ಇಂದು ಗುಣಮಟ್ಟ ಪರಿಶಿಲಿಸಿದರು. ಈ ಸಂದರ್ಭ ನಗರ ಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಮತ್ತಿತರರು ಹಾಜರಿದ್ದರು.

'ಕಾಲತ್ ರ ಕಳಿ' ಕೊಡವ ಚಲನಚಿತ್ರದ ಮೊದಲ ಪೋಸ್ಟರ್ ಬಿಡುಗಡೆ

ನಾಪೋಕ್ಲು, ಫೆ.10– 'ಕಾಲತ್ ರ ಕಳಿ' ಕೊಡವ ಚಲನಚಿತ್ರದ ಮೊದಲ ಪೋಸ್ಟರ್ ಅನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಎ.ಎಸ್. ಪೊನ್ನಣ್ಣ ಶನಿವಾರ ಬೆಂಗಳೂರಿನ ನ್ಯಾಷನಲ್ ಲಾ ಕಾಲೇಜ್‌ನಲ್ಲಿ ಬಿಡುಗಡೆಗೊಳಿಸಿ ಶುಭ ಹಾರೈಸಿದರು.

ಪಿ ಅಂಡ್ ಜಿ (P & G) ಕ್ರಿಯೇಶನ್ಸ್ ಅಡಿಯಲ್ಲಿ ಚಲನಚಿತ್ರದ ನಿರ್ದೇಶಕರಾಗಿ ಬಾಳಿಯಡ ಪ್ರತಿಷ ಪೂವಯ್ಯ ಹಾಗೂ ಆಚೆಯಡ ಗಗನ್ ಗಣಪತಿ ತೊಡಗಿಸಿಕೊಂಡಿದ್ದಾರೆ. ಪ್ರೊಡಕ್ಷನ್ ತಂಡದಲ್ಲಿ ಬಾಳೆಯಡ ಪ್ರಾತೀಶ್, ಆಚೆಯಡ ಗಗನ್ ಗಣಪತಿ ಹಾಗೂ ಸೋಮೆಂಡ ಬೋಸ್ ಬೆಳ್ಳಿಯಪ್ಪ ಡಿಒಪಿಯಾಗಿ ಪಾಪಣ್ಣ ಚಂದ್ರಶೇಖರ್ ನಿರ್ವಹಿಸುತ್ತಿದ್ದಾರೆ. ಚಲನಚಿತ್ರದ ಮಹೂರ್ತವನ್ನು ಫೆಬ್ರವರಿ 15 ರಂದು ಪಾಡಿ ಶ್ರೀ ಇಗ್ಗುತಪ್ಪ ದೇವಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನಿರ್ದೇಶಕರಾದ ಬಾಳೆಯಡ ಪ್ರತಿಷ್ ಪೂವಯ್ಯ, ಆಚೆಯಡ ಗಗನ್ ಗಣಪತಿ ತಿಳಿಸಿದರು.

ಅರಣ್ಯ ರಕ್ಷಕರನ್ನು ಬೆನ್ನಟ್ಟಿದ ಮದಗಜ, ಬೈಕ್ ಜಖಂ



ಮಡಿಕೇರಿ, ಫೆ.10– ಮದವೇರಿದ ಕಾಡಾನೆಯೊಂದು ಅರಣ್ಯ ರಕ್ಷಕರನ್ನು ಬೆನ್ನಟ್ಟಿ ಬೈಕ್‌ನ್ನು ಜಖಂಗೊಳಿಸಿದ ಘಟನೆ ಸೋಮವಾರಪೇಟೆಯ ಕೋವರ್ ಕೊಲ್ಲಿ ಕಾಜೂರು ಅರಣ್ಯ ಭಾಗದಲ್ಲಿ ನಡೆದಿದೆ.

ಕಾಫಿ ತೋಟದಲ್ಲಿ ಕಾಡಾನೆಗಳು ಬೀಡು ಬಿಟ್ಟಿರುವ ಬಗ್ಗೆ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಕಾಡಾನೆ ಏಕಾಏಕಿ ದಾಳಿ ಮಾಡಿದೆ. ಸಿಬ್ಬಂದಿಗಳಾದ ಹರ್ಷಿತ್, ಶ್ರೀಕಾಂತ್, ದರ್ಶನ್, ವಿನೋದ್ ಹಾಗೂ ಶ್ರೀಕಾಂತ್ ಅವರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ ಮದಗಜ ಬೈಕ್‌ವೊಂದನ್ನು ತುಳಿದು ಹಾನಿಗೊಳಿಸಿದೆ. ಅಲ್ಲದೆ ಟಾಟಾ ಎಸ್ಟೇಟ್‌ನ ಗೇಟ್‌ನ್ನು ಮುರಿದು ಹಾಕಿದೆ. ಗ್ರಾಮದಲ್ಲಿ ಆತಂಕದ ವಾತಾವರಣ ಮುಂದುವರೆದಿದೆ. ಸ್ಥಳದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಬೀಡು ಬಿಟ್ಟಿದ್ದಾರೆ.

ವಿಶು ಕ್ರಿಕೆಟ್ ಕಪ್‌ಗೆ ಆಟಗಾರರ ಆಯ್ಕೆ



ವಿಶು ಕ್ರಿಕೆಟ್ ಕಪ್ ಟೂರ್ನಿ ಲಾಂಛನ ಅನಾವರಣಗೊಳಿಸಲಾಯಿತು.

ಗೋಣಿಕೊಪ್ಪ: ಫೆಬ್ರವರಿ 29 ರಿಂದ ಆರಂಭಗೊಳ್ಳಲಿರುವ ಗೋಣಿಕೊಪ್ಪ ಕರ್ನಾಟಕ ನಾಯರ್ ಸರ್ವಿಸ್ ಸೊಸೈಟಿ, ಗೋಣಿಕೊಪ್ಪ ಕೊಡಗು ಹಿಂದೂ ಮಲಯಾಳಿ ಸಮಾಜ ಸಹಯೋಗದ ವಿಶು ಕ್ರಿಕೆಟ್ ಕಪ್–2024 ಟೂರ್ನಿಗೆ ಶನಿವಾರ ಕಕೂನ್ ಸಭಾಂಗಣದಲ್ಲಿ ಆಟಗಾರರ ಬಿಡ್ಡಿಂಗ್ ಪ್ರಕ್ರಿಯೆ ನಡೆಯಿತು.

ಗೋಣಿಕೊಪ್ಪ ಪೊಲೀಸ್ ಉಪ ನಿರೀಕ್ಷಕಿ ರೂಪಾ ಬಿರಾದರ್ ಕಾರ್ಯಕ್ರಮ ಉದ್ಘಾಟಿಸಿ ಶುಭ ಕೋರಿದರು. ಹಿರಿಯ ಕ್ರಿಕೆಟ್ ಆಟಗಾರ ಜಮ್ಮಡ ಡಿ.ನಂಜಪ್ಪ ಲಾಂಛನ ಅನಾವರಣಗೊಳಿಸಿ, ಕ್ರೀಡಾಕೂಟಗಳು ಹೆಚ್ಚಾಗಿ ನಡೆಯಬೇಕು ಎಂದರು. ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕುಟ್ಟಂಜೆಟ್ಟೀರ ಎಂ.ತಿಮ್ಮಯ್ಯ ಮಾಲೀಕರು ಹಾಗೂ ಐಕಾನ್ ಪ್ಲೇಯರ್ ಪಟ್ಟಿ ಬಿಡುಗಡೆಗೊಳಿಸಿದರು.

ಗೋಣಿಕೊಪ್ಪ ಕರ್ನಾಟಕ ನಾಯರ್ ಸರ್ವಿಸ್ ಸೊಸೈಟಿ ಅಧ್ಯಕ್ಷ ಪಿ.ಈ.ಪವಿತ್ರನ್ ಶುಭ ಕೋರಿದರು. ಗೋಣಿಕೊಪ್ಪ ಕೊಡಗು ಹಿಂದೂ ಮಲಯಾಳಿ ಸಮಾಜ ಅಧ್ಯಕ್ಷ ಅಮೃತ್ ರಾಜನ್ ಮಾತನಾಡಿ, ಸಂಘಟನೆಗಳು ಸೇರಿ ಸಾರ್ವಜನಿಕರಿಗೆ ಟೂರ್ನಿ ಆಯೋಜಿಸುತ್ತಿರುವುದು ಕ್ರೀಡೆಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಎಲ್ಲರಿಗೂ ಅವಕಾಶ ದೊರೆಯುತ್ತಿದೆ ಎಂದರು. ಒಟ್ಟು 16 ತಂಡಗಳಿಗೆ 208 ಆಟಗಾರರ ಆಯ್ಕೆ ನಡೆಯಿತು. ಲಿನಿಶಾ ಉನ್ನಿಕೃಷ್ಣ ಪ್ರಾರ್ಥಿಸಿದರು. ಸುಬ್ರಮಣಿ ಸ್ವಾಗತಿಸಿದರು. ಶಾಜಿ ಅಚ್ಚುತ್ತನ್ ವಂದಿಸಿದರು. ಪಾಲಿಬೆಟ್ಟ ಉಪ ಸಮಿತಿ ಅಧ್ಯಕ್ಷ ರಿನೀಶ್, ಯೂತ್ ವಿಂಗ್ ಅಧ್ಯಕ್ಷ ಅಖಿಲ್ ಇದ್ದರು.

ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಿ

ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಸೂಚನೆ



ಗುಂಡ್ಲುಪೇಟೆ ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಇಂಜಿನಿಯರ್ ಮಧುಸೂಧನ್ ಮಾಹಿತಿ ನೀಡಿದರು.

ಗುಂಡ್ಲುಪೇಟೆ, ಫೆ.10– ಮುಂಬರುವ ದಿನಗಳಲ್ಲಿ ಯಾವುದೇ ಗ್ರಾಮಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಕ್ರಮ ಕೈಗೊಳ್ಳಿ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶುಕ್ರವಾರ ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಆಯೋಜಿಸಿದ್ದ ಟಾಸ್ಕ್‌ಫೋರ್ಸ್ ಯೋಜನೆಗಳ ಕಾಮಗಾರಿಗಳ ಕ್ರಿಯಾ ಯೋಜನೆ ಸಭೆಯಲ್ಲಿ ಅವರು ಮಾತನಾಡಿದರು.

ಪಟ್ಟಣಕ್ಕೆ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಬಹುಗ್ರಾಮ ಯೋಜನೆಯಲ್ಲಿ ಕಬಿನಿಯಿಂದ ನೀರು ಪೂರೈಕೆ ಮಾಡಲಾಗುತ್ತಿದ್ದರೂ ಬೇಸಿಗೆಯ ಆರಂಭದಲ್ಲಿಯೇ ಕೆಲವು ಗ್ರಾಮಗಳಲ್ಲಿ ಸಮಸ್ಯೆಯಾಗಿರುವ ಬಗ್ಗೆ ಮಾಹಿತಿಯಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ಕೂಡಲೇ ಅಂತಹ ಗ್ರಾಮಗಳಿಗೆ ಸಮರ್ಪಕ ನೀರು ಪೂರೈಕೆಗೆ ಅನುಕೂಲವಾಗುವಂತೆ ಪೈಪ್‌ಲೈನ್ ನಿರ್ಮಾಣ ಹಾಗೂ ಕೊಳವೆಬಾವಿ ಕೊರೆಸಲು ಜನ ಜಾನುವಾರುಗಳಿಗೆ ನೀರು ಹಾಗೂ ಮೇವಿನ ಕೊರತೆಯಾಗದಂತೆ ಕ್ರಮಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ವಿ.ಮಧುಸೂಧನ್ ಮಾತನಾಡಿ, ಹಂಗಳ, ಹಂಗಳಪುರ, ಎಲ್ಚೆಟ್ಟಿ, ಕೆಲಸೂರು, ಶೀಲವಂತಪುರ, ಶಿವಪುರ, ಹೊನ್ನೇಗೌಡನಹಳ್ಳಿ, ಬೇರಂಬಾಡಿ ಕಾಲೋನಿ, ಕಣಿಯನಪುರ, ಮುಕ್ತಿ ಕಾಲೋನಿ ಹಾಗೂ ಶೆಟ್ಟಹಳ್ಳಿ ಗ್ರಾಮಗಳಲ್ಲಿ ತಲಾ 1.5 ಲಕ್ಷ ವೆಚ್ಚದಲ್ಲಿ ಕೊಳವೆ ಬಾವಿ ಕೊರೆಸಿ ಪೈಪ್‌ಲೈನ್ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಪಶುವೈದ್ಯ ಇಲಾಖೆಯ ಡಾ.ಮೋಹನ್ ಕುಮಾರ್ ಮಾತನಾಡಿ, ತಾಲೂಕಿನಲ್ಲಿ ಇನ್ನೂ ನಾಲ್ಕು ತಿಂಗಳಿಗೆ ಸಾಕಾಗುವಷ್ಟು ಮೇವಿನ ಸಂಗ್ರಹವಿರುವುದಾಗಿ ಮಾಹಿತಿ ನೀಡಿದರು.

ಸಭೆಯಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ರಾಮಲಿಂಗಯ್ಯ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಭಾಸ್ಕರ್ ಹಾಗೂ ಇತರರು ಇದ್ದರು.

ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಗಡಿನಾಡು ಕನ್ನಡ ಉತ್ಸವ

ಕನ್ನಡ ನಾಡು, ನುಡಿಗೆ ಸಂಬಂಧಿಸಿದ ಕಾರ್ಯಗಳಿಗೆ ಉತ್ತೇಜನ

ಚಾ.ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್



ಶ್ರೀ ಮಲೆ ಮಹದೇಶ್ವರ ಬೆಟ್ಟದ ಗಡಿನಾಡು ಕನ್ನಡ ಉತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಚಾಲನೆ ನೀಡಿದರು.

ಚಾಮರಾಜನಗರ, ಫೆ10– ಕನ್ನಡ ಭಾಷೆ, ಪರಂಪರೆ, ಸಂಸ್ಕೃತಿ ಚಟುವಟಿಕೆಗಳಿಗೆ ನಿರಂತರ ಉತ್ತೇಜನ ನೀಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಮಲೆ ಮಹದೇಶ್ವರ ಬೆಟ್ಟದ ಶ್ರೀ ಮಹದೇಶ್ವರ ಬಯಲು ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಗಳೂರು ಹಾಗೂ ಜಿಲ್ಲಾ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಡೆದ 'ಗಡಿನಾಡು ಕನ್ನಡ ಉತ್ಸವ' ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ನಾಡು–ನುಡಿಗೆ ಸದಾ ಪ್ರೋತ್ಸಾಹ ನೀಡಲಾಗುತ್ತಿದೆ. ಗಡಿಯಲ್ಲಿ ಕನ್ನಡ ಬೆಳೆಸುವ ಕಾರ್ಯಗಳಿಗೆ ಗಡಿನಾಡು ಕನ್ನಡ ಉತ್ಸವದಂತಹ ಕಾರ್ಯಕ್ರಮಗಳು ಪೂರಕವಾಗಿವೆ. ನಮ್ಮ ಜಿಲ್ಲೆಯ ಮಲೆ ಮಹದೇಶ್ವರನ ಸನ್ನಿಧಿಯಲ್ಲಿ ಇಂತಹ ಕಾರ್ಯಕ್ರಮ ಆಯೋಜನೆಯಾಗಿರುವುದು ಸಂತೋಷ ತಂದಿದೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘವು ಕನ್ನಡ ಉತ್ಸವದಂತಹ ಕಾರ್ಯಗಳಿಗೆ ನೆರವಾಗುತ್ತಿರುವುದು ಶ್ಲಾಘನೀಯ. ಜಿಲ್ಲೆಯ ಕಾಡಂಚಿನ ಪ್ರದೇಶದ ಇಂಡಿಗನತ್ತ ಶಾಲೆಯನ್ನು ದತ್ತು ಪಡೆದು ಹಲವು ಸಹಾಯಕ ಕೆಲಸಗಳನ್ನು ಮಾಡಿರುವುದು ಮಾದರಿಯಾಗಿದೆ. ಇಂತಹ ಸಮಾಜಮುಖಿ ಕೆಲಸಗಳಿಂದ ಒಳ್ಳೆಯದಾಗಲಿದೆ ಎಂದು ಸಚಿವರು ತಿಳಿಸಿದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಚಾಮರಾಜನಗರ ಜಿಲ್ಲೆ ಕಲೆಗಳ ತವರೂರು. ಜನಪದ ಕಲಾವಿದರು ಪ್ರತಿ ಊರಿನಲ್ಲೂ ಇದ್ದಾರೆ. ಮಲೆ ಮಹದೇಶ್ವರ, ಮಂಟೇಸ್ವಾಮಿ, ಸಿದ್ದಪ್ಪಾಜಿಯವರ ಸ್ಮರಣೆ ಹಾಡುಗಳನ್ನು ಹಾಡುವ ಕಲಾವಿದರು ಇಲ್ಲಿದ್ದಾರೆ. ನೆಲ, ಜಲ, ಭಾಷೆ ವಿಚಾರಕ್ಕೆ ಧಕ್ಕೆಯಾದಾಗ ಇಡೀ ರಾಜ್ಯದಲ್ಲೇ ನಮ್ಮ ಜಿಲ್ಲೆಯ ಕನ್ನಡಪರ ಸಂಘಟನೆಗಳು ಮೊದಲು ಧ್ವನಿ ಎತ್ತುವ ಮೂಲಕ ಅಭಿಮಾನ ಮೂಡಿಸುತ್ತಿದ್ದಾರೆ ಎಂದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ ಕನ್ನಡ ನಾಡು ನುಡಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಿಕೊಂಡು ಬರುತ್ತಿದ್ದೇವೆ. ಕರ್ನಾಟಕ ಸುವರ್ಣ ಸಂಭ್ರಮ, ಕನ್ನಡ ರಾಜ್ಯೋತ್ಸವದಂತಹ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿದೆ. ಗಡಿಭಾಗವಾದ ನಮ್ಮ ಜಿಲ್ಲೆಯಲ್ಲೂ ಗಡಿನಾಡು ಕನ್ನಡ ಉತ್ಸವ ಏರ್ಪಡಿಸಲು ಅವಕಾಶ ಕಲ್ಪಿಸಿರುವುದು ಹೆಮ್ಮೆಯ ವಿಚಾರವಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಸಂಘಟನೆ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದೆ. ಕನ್ನಡ ನಾಡು, ನುಡಿ, ಗಡಿ ವಿಚಾರದಲ್ಲಿಯೂ ಜಾಗೃತಿಗೊಳಿಸುವ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಗಡಿನಾಡು ಕನ್ನಡ ಉತ್ಸವದಂತಹ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿದ್ದೇವೆ. ಮಲೆ ಮಹದೇಶ್ವರಬೆಟ್ಟ ವ್ಯಾಪ್ತಿಯ ಇಂಡಿಗನತ್ತ ಶಾಲಾಭಿವೃದ್ಧಿಗೆ ಕೊಡುಗೆ ನೀಡಿದ್ದೇವೆ. ರಾಜ್ಯ ಸರ್ಕಾರಿ ನೌಕರರು ಸ್ಪಂದನಾಶೀಲರಾಗಿದ್ದಾರೆ ಎಂದರು.

ಸಾಲೂರು ಶ್ರೀಗಳಾದ ಶಾಂತಮಲ್ಲಿಕಾರ್ಜುನ ಸ್ವಾಮೀಜಿಯವರು ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಅವರು ಸ್ವಾಗತಿಸಿದರು. ಇದೇ ವೇಳೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಜಿಲ್ಲೆಯವರಾದ ಗೋಪಾಲ್ ಜಗದೀಶ್ ಅವರನ್ನು ಸನ್ಮಾನಿಸಲಾಯಿತು.

ಮಹದೇಶ್ವರ ಬೆಟ್ಟದ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಿ.ಅರ್ಚನಾ ಪ್ರಕಾಶ್, ಕನ್ನಡ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಕಾಶ್ ಮತ್ತೀಹಳ್ಳಿ, ತಹಶೀಲ್ದಾರ್ ಮಂಜುಳಾ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಹಾಗೂ ತಾಲೂಕು ಘಟಕಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಜಾನಪದ ಕಲಾತಂಡಗಳ ಮೆರವಣಿಗೆ ಹಾಗೂ ಸಾಂಸ್ಕೃತಿಕ ನಡಿಗೆ ಕಾರ್ಯಕ್ರಮ ನಡೆಯಿತು. ಬೆಳಿಗ್ಗೆ ಕನ್ನಡ ಜಾಗೃತಿ ಜಾಥಾಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಚಾಲನೆ ನೀಡಿದರು.

ಬಳಿಕ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಅರಣ್ಯದಂಚಿನ ಇಂಡಿಗನತ್ತ ಸರ್ಕಾರಿ ಪ್ರಾಥಮಿಕ ಶಾಲೆಗೆ ತೆರಳಿ ಶಾಲೆಯಲ್ಲಿ ಸ್ಮಾರ್ಟ್‌ಕ್ಲಾಸ್‌ಗೆ ಅಗತ್ಯವಿರುವ ಸಲಕರಣೆಗಳನ್ನು ನೀಡಿದರು.

ಶಾಲೆಯ ಪೋಷಣೆಗೆ ಎಲ್ಲಾ ನೆರವು ಕಲ್ಪಿಸುವ ಪ್ರಕ್ರಿಯೆಗೆ ಚಾಲನೆ ನೀಡಿದರು. ಹಲವಾರು ವರ್ಷಗಳಿಂದ ಇಂಡಿಗನತ್ತ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕ ರಾಘವೇಂದ್ರ ಅವರನ್ನು ಸನ್ಮಾನಿಸಲಾಯಿತು.

ಗಡಿನಾಡು ಕನ್ನಡ ಉತ್ಸವ ಅಂಗವಾಗಿ ಮಲೆ ಮಹದೇಶ್ವರ ಬೆಟ್ಟದ ಬಯಲು ರಂಗಮಂದಿರದಲ್ಲಿ ಸಂಜೆಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.



ಗಡಿನಾಡು ಕನ್ನಡ ಉತ್ಸವಕ್ಕೆ ಜಾನಪದ ಕಲಾತಂಡದ ಮೆರಗು.

ಸಾರಿಗೆ ಬಸ್ ಇಂಜಿನ್‌ನಲ್ಲಿ ಬೆಂಕಿ, ತಪ್ಪಿದ ಅನಾಹುತ



ಬೇಗೂರಿನ ಬಸ್ ನಿಲ್ದಾಣದಲ್ಲಿ ಸಾರಿಗೆ ಬಸ್ ಇಂಜಿನ್ ಭಾಗದಲ್ಲಿ ದಿಢೀರ್ ಕಾಣಿಸಿಕೊಂಡ ಬೆಂಕಿಯನ್ನು ನಂದಿಸುತ್ತಿರುವುದು.

ಬೇಗೂರು(ಗುಂಡ್ಲುಪೇಟೆ), ಫೆ.10– ಕೆಎಸ್‌ಆರ್‌ಟಿಸಿ ಬಸ್ ಇಂಜಿನ್ ಭಾಗದಲ್ಲಿ ಹಠಾತ್ತನೆ ಬೆಂಕಿ ಕಾಣಿಸಿಕೊಂಡಿದ್ದು, ಚಾಲಕನ ಸಮಯ ಪ್ರಜ್ಞೆಯಿಂದ ಹೆಚ್ಚಿನ ಅನಾಹುತ ತಪ್ಪಿದ ಘಟನೆ ಬೇಗೂರಿನಲ್ಲಿ ನಡೆದಿದೆ.

ಮೈಸೂರಿನಿಂದ ಗುಂಡ್ಲುಪೇಟೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಬೇಗೂರು ಸಮೀಪಿಸುತ್ತಿದ್ದಂತೆ ಆಕಸ್ಮಿಕವಾಗಿ ಬಸ್ ಮುಂಭಾಗದಲ್ಲಿನ ಇಂಜಿನ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ಪ್ರಯಾಣಿಕರು ಗಾಬರಿಯಿಂದ ಕೂಗಾಡಿದಾಗ ಕೂಡಲೆ ಎಚ್ಚೆತ್ತ ಚಾಲಕ ಜಾಗರೂಕತೆಯಿಂದ ಬಸ್ಸನ್ನು ನಿಲ್ದಾಣಕ್ಕೆ ತಂದು ನಿಲ್ಲಿಸಿ ಪ್ರಯಾಣಿಕರನ್ನು ತುರ್ತು ನಿರ್ಗಮನ ದ್ವಾರದ ಮೂಲಕ ಇಳಿಸಿ ನಂತರ ಪ್ರಯಾಣಿಕರ ಸಹಾಯದಿಂದ ಬೆಂಕಿಯನ್ನು ನಂದಿಸಿದ್ದಾನೆ.

ಸೋಲಾರ್ ಎನರ್ಜಿ ಮೂಲಕ ವಿದ್ಯುತ್ ಉತ್ಪಾದನೆಗೆ ಕ್ರಮ: ಸೆಸ್ಕ್ ಎಇಇ ದೃಪದ್



ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದೃಪದ್ ಮಾತನಾಡುತ್ತಿರುವುದು.

ಚಾಮರಾಜನಗರ: ಸೋಲಾರ್ ಮೂಲಕ ವಿದ್ಯುತ್ ಉತ್ಪಾದಿಸಲು ಉಡಿಗಾಲ ಸುತ್ತಮುತ್ತಲಿನಲ್ಲಿ 200 ಎಕರೆ ಸರ್ಕಾರಿ ಜಾಗವನ್ನು ಗುರುತಿಸಲಾಗಿದೆ ಎಂದು ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದೃಪದ್ ತಿಳಿಸಿದರು.

ಉಡೀಗಾಲ ಗ್ರಾಮದಲ್ಲಿ ಸೆಸ್ಕ್ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ವಿದ್ಯುತ್ ಸೇವೆಗಳ ಮತ್ತು ಸುರಕ್ಷತಾ ಅರಿವು ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಪಿಎಂ ಕುಸುಮ್ ಯೋಜನೆಯಡಿ ಸೌರ ಶಕ್ತಿ ಬಳಸಿಕೊಂಡು ಸೋಲಾರ್ ಮೂಲಕ ವಿದ್ಯುತ್ ಉತ್ಪಾದಿಸಿ ಸ್ಥಳೀಯ ರೈತರು ಹಾಗೂ ಗ್ರಾಹಕರಿಗೆ ನೀಡಲಾಗುವುದು. ಈ ಮೂಲಕ ಹಗಲಿನ ವೇಳೆಯಲ್ಲಿ ಸಮರ್ಪಕ ವಿದ್ಯುತ್ ಪೂರೈಸುವುದರಿಂದ ರಾತ್ರಿ ವೇಳೆ ಕಾಡು ಪ್ರಾಣಿಗಳಿಂದ ಆಗಬಹುದಾದ ಅನಾಹುತ ತಪ್ಪಲಿದೆ, ಬೆಳಕು ಯೋಜನೆಯಡಿ ಸೆಸ್ಕ್ ವತಿಯಿಂದ ಮೀಟರ್, ವೈರ್ ಅಳವಡಿಸಿ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಿರಿಯ ಇಂಜಿನಿಯರ್ ಪಿ. ಮಹದೇವಸ್ವಾಮಿ, ಗ್ರಾಪಂ ಅಧ್ಯಕ್ಷೆ ರೇಖಾ, ರೈತ ಮುಖಂಡರಾದ ಮಂಜು, ಸುಂದರಪ್ಪ ಸೇರಿದಂತೆ ಇತರರು ಇದ್ದರು.

ಮಂಗನ ಕಾಯಿಲೆಗೆ ಹೊಸ ವ್ಯಾಕ್ಸಿನ್ ತಯಾರಿಸಲು ICMR ಒಪ್ಪಿಗೆ



ಉಡುಪಿ: ಮಂಗನ ಕಾಯಿಲೆಗೆ ಹೊಸ ವ್ಯಾಕ್ಸಿನ್ ಕುರಿತು ಐಸಿಎಂಆರ್ ಜೊತೆ ಚರ್ಚೆ ನಡೆಸಲಾಗಿದ್ದು, ವ್ಯಾಕ್ಸಿನ್ ತಯಾರಿಕೆಗೆ ಐಸಿಎಂಆರ್ ಒಪ್ಪಿಗೆ ಸೂಚಿಸಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಶನಿವಾರ ಹೇಳಿದ್ದಾರೆ. ಇಂದು ಉಡುಪಿಯಲ್ಲಿ ಮಂಗನ ಕಾಯಿಲೆ ನಿಯಂತ್ರಣ ಕುರಿತಂತೆ ಆರೋಗ್ಯ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಿದ ಸಚಿವರು, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಮಳೆಗಾಲ ಆರಂಭ ಮತ್ತು ಅಂತ್ಯದಲ್ಲಿ ಮಂಗನ ಕಾಯಿಲೆ ಹೆಚ್ಚಳವಾಗುತ್ತದೆ. ಮಾರ್ಚ್ ವರೆಗೆ ಜನ ಬಹಳ ಎಚ್ಚರಿಕೆಯಿಂದ ಇರಬೇಕು. ಲಕ್ಷಣಗಳು ಬಂದ ಕೂಡಲೇ ಚಿಕಿತ್ಸೆ ಪಡೆದುಕೊಳ್ಳಲು ಮುಂದಾಗಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು. ಮಂಗನ ಕಾಯಿಲೆಗೆ ಎಬಿಎಆರ್‌ಕೆ ಫಂಡ್‌ನಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲು ಈಗಾಗಲೇ ಸೂಚಿಸಲಾಗಿದೆ. ಅಲ್ಲದೇ ಕೆ.ಎಫ್.ಡಿ ಪಾಸಿಟಿವ್ ಬಂದವರನ್ನ ಆಸ್ಪತ್ರೆಯಲ್ಲೇ ಚಿಕಿತ್ಸೆ ನೀಡಲು ಕಡ್ಡಾಯಗೊಳಿಸಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ರಾಜ್ಯದಲ್ಲಿ ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಗನ ಕಾಯಿಲೆ ಹೆಚ್ಚಾಗಿ ಕಾಣಿಸಿಕೊಂಡಿದ್ದು, ಒಟ್ಟು 70 ಕೆಎಫ್‌ಡಿ ಪ್ರಕರಣ ದಾಖಲಾಗಿವೆ.

ಮೂರನೇ ಪುಟದಿಂದ

ಬಜೆಟ್ ಅಧಿವೇಶನ

ಮೇವು ಹಾಗೂ ವಿದ್ಯುತ್ ಸಮಸ್ಯೆ ಜೊತೆಗೆ ಕೂಲಿ ಗಾಗಿ ಜನ ಗುಳೆ ಹೋಗುತ್ತಿರುವುದು ಪ್ರತಿಪಕ್ಷಗಳಿಗೆ ಅಸ್ತ್ರವಾಗಲಿದೆ.

ಸರ್ಕಾರಕ್ಕೆ ಗ್ಯಾರಂಟಿ ಬಲ: ಬರಗಾಲ ದಿಂದ ಜನತೆ ಸಂಕಷ್ಟಕ್ಕೆ ಸಿಲುಕಿದರೂ ಪರಿಹಾರ ನೀಡಿಲ್ಲ, ಗ್ಯಾರಂಟಿ ಜಪ ಮಾಡಿ ಕೊಂಡೇ ಸರ್ಕಾರ ಕುಳಿತಿದೆ ಎನ್ನುವುದು ಒಂದು ಕಡೆಯಾದರೆ, ಮತ್ತೊಂದೆಡೆ ಸರ್ಕಾರಿ ಕಾಮಗಾರಿಗಳಿಗೆ ಶೇಕಡ 40ರಷ್ಟು ಲಂಚ ನೀಡಬೇಕೆನ್ನುವುದು ಈ ಆಡಳಿತದಲ್ಲೂ ಮುಂದುವರೆದಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ನೀಡಿರುವ ಹೇಳಿಕೆ ಸರ್ಕಾರವನ್ನು ಕಟ್ಟಿಹಾಕಲಿದೆ.

ಗುತ್ತಿಗೆದಾರರ ಸಂಘ ಮಾಡಿದ ಆರೋಪವನ್ನೇ ಮುಂದಿಟ್ಟುಕೊಂಡು ಕಳೆದ ಚುನಾವಣೆಯಲ್ಲಿ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಹೋರಾಟ ನಡೆಸಿದ ಕಾಂಗ್ರೆಸ್‌ಗೆ ಈಗ ಅದೇ ಗುತ್ತಿಗೆದಾರರು ಮುಳುವಾಗಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಸಮರ್ಥನೆ ಮಾಡಿಕೊಂಡು ಬರವನ್ನು ಯಾವ ರೀತಿ ಎದುರಿಸಿದೆ ಎಂಬುದನ್ನು ಸರ್ಕಾರ ಸದನದ ಮುಂದೆ ಬಿಡಿಸಿಡಲಿದೆ. ನಮ್ಮ ತೆರಿಗೆ ಹಣವನ್ನು ಪಡೆದು ರಾಜ್ಯಕ್ಕೆ ಕೇಂದ್ರ ಅನುದಾನ ನೀಡದಿರುವುದನ್ನು ಪ್ರತಿಪಕ್ಷದ ಮೇಲೆ ಸರ್ಕಾರ ಅಸ್ತ್ರವಾಗಿ ಬಳಕೆ ಮಾಡಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಎದುರಿಸುತ್ತಿರುವ ತೀವ್ರ ಹಣಕಾಸಿನ ಸಂಕಷ್ಟವೇ ಪ್ರತಿಪಕ್ಷಗಳ ಪಾಲಿಗೆ ಪ್ರಮುಖ ಅಸ್ತ್ರವಾಗಲಿದ್ದು, ಇದರಿಂದ ಅಭಿವೃದ್ಧಿ ಹೇಗೆ ಕುಂಠಿತವಾಗಿದೆ ಎಂದು ವಿವರಿಸಲು ಅತ್ಯಾತುರದಿಂದ ಕಾದಿವೆ. ವಿಧಾನಸಭಾ ಕ್ಷೇತ್ರಗಳಿಗೆ ಸೂಕ್ತ ಅನುದಾನ ದೊರೆಯದೆ ಇರುವುದು, ಕೃಷಿ, ಕೈಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳು ಸಂಕಷ್ಟಕ್ಕೆ ಸಿಲುಕಿರುವುದು ಸೇರಿದಂತೆ ಹಲವು ವಿಷಯಗಳು ಪ್ರತಿಪಕ್ಷಗಳ ಪಾಲಿಗೆ ಪ್ರಮುಖ ಅಸ್ತ್ರವಾಗಿದ್ದು, ಈ ಅಸ್ತ್ರವನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಲು ಅವು ಸಜ್ಜಾಗಿವೆ.

ಇನ್ನು ವಿದ್ಯುತ್ ಪರಿಸ್ಥಿತಿಯೂ ದಿನದಿಂದ ದಿನಕ್ಕೆ ಹದಗೆಡುತ್ತಿದ್ದು, ರಾಜ್ಯದ ವಿದ್ಯುತ್ ಬೇಡಿಕೆ ಪ್ರಮಾಣ 16,000 ಮೆಗಾವ್ಯಾಟ್‌ಗಿಂತಲೂ ಹೆಚ್ಚಾಗಿದೆ.

ಉತ್ಪಾದನಾ ಪ್ರಮಾಣ ಗಣನೀಯವಾಗಿ ಕುಸಿದಿದ್ದು, ಸದ್ಯದ ಪರಿಸ್ಥಿತಿ ನೋಡಿದರೆ ಸಿದ್ದರಾಮಯ್ಯ ಅವರ ಸರ್ಕಾರ ಜನರಿಗೆ ಕತ್ತಲೆ ಭಾಗ್ಯ ಕರುಣಿಸುವುದು ಗ್ಯಾರಂಟಿ ಎಂಬುದು ಪ್ರತಿಪಕ್ಷಗಳ ಆರೋಪ. ಇನ್ನು ಜನರಿಗೆ ಅಗತ್ಯವಾದ ಜೀವನಾವಶ್ಯಕ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿದ್ದು ಇದಕ್ಕೆ ಕಡಿವಾಣ ಹಾಕುವ ಮಾರ್ಗೋಪಾಯಗಳೇ ಸರ್ಕಾರಕ್ಕೆ ಕಾಣಿಸದಂತಾಗಿದೆ. ಆ ಮೂಲಕ ಜನ ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರ ಜನರ ಪಾಲಿಗೆ ಹಿಂಸೆಯಾಗಿ ಪರಿಣಮಿಸಿದೆ ಎಂಬುದನ್ನು ಹೇಳಲಿರುವ ಪ್ರತಿಪಕ್ಷಗಳು ಈ ವಿಷಯದಲ್ಲಿ ದೊಡ್ಡ ರಾದ್ಧಾಂತ ಎಬ್ಬಿಸುವ ಸಾಧ್ಯತೆಗಳು ಸ್ಪಷ್ಟವಾಗಿವೆ.

ಒಟ್ಟಾರೆ ಬಜೆಟ್ ಅಧಿವೇಶನ ಚುನಾವಣಾ ಅಖಾಡವಾಗಿ ಪರಿವರ್ತನೆಗೊಳ್ಳಲಿದೆ, ಇದರ ನಡುವೆಯೇ ಮುಖ್ಯಮಂತ್ರಿ ಅವರು, 2024-25ನೇ ಸಾಲಿನ ಮುಂಗಡಪತ್ರವನ್ನು ಫೆಬ್ರವರಿ 16 ರಂದು ವಿಧಾನಸಭೆಯಲ್ಲಿ ಮಂಡಿಸಲಿದ್ದಾರೆ.

ಲೋಕಸಭೆ ಚುನಾವಣೆ ಮುನ್ನ ಸಿಎಎ ಜಾರಿ

ಕೇವಲ ಘೋಷಣೆಗಳನ್ನು ನೀಡುವವರ ನಡುವಿನ ಹಣಾಹಣಿಯಾಗಿರುತ್ತದೆ ಎಂದು ಅಮಿತ್ ಷಾ ವ್ಯಾಖ್ಯಾನಿಸಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆಯ ಕುರಿತು ಕೇಳಿದ ಪ್ರಶ್ನೆಗೆ, 1947ರಲ್ಲಿ ದೇಶ ವಿಭಜನೆಗೆ ಅವರ ಪಕ್ಷವೇ ಕಾರಣವಾದ ಕಾರಣ ನೆಹರು-ಗಾಂಧಿ ವಂಶಸ್ಥರಿಗೆ ಅಂತಹ ಮೆರವಣಿಗೆ ಯನ್ನು ಮುಂದುವರಿಸಲು ಯಾವುದೇ ಹಕ್ಕಿಲ್ಲ ಎಂದರು.

ಶ್ವೇತಪತ್ರಕ್ಕೆ ಇದು ಸರಿಯಾದ ಸಮಯ: ಸಂಸತ್ತಿನಲ್ಲಿ ಸರ್ಕಾರವು ಮಂಡಿಸಿದ ಶ್ವೇತಪತ್ರದ ಕುರಿತು ಮಾತನಾಡಿದ ಷಾ, 2014ರಲ್ಲಿ ಅಧಿಕಾರವನ್ನು ಕಳೆದುಕೊಂಡಾಗ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರೊಗ್ರೆಸ್ಸಿವ್ ಮೈತ್ರಿ (UPA) ಯಾವ ಗೊಂದಲವನ್ನು ಬಿಟ್ಟಿದೆ ಎಂಬುದನ್ನು ತಿಳಿದುಕೊಳ್ಳುವ ಸಂಪೂರ್ಣ ಹಕ್ಕು ದೇಶಕ್ಕೆ ಇದೆ ಎಂದು ಹೇಳಿದರು.

2014ರಲ್ಲಿ ದೇಶದ ಆರ್ಥಿಕತೆಯು ಕೆಟ್ಟ ಸ್ಥಿತಿಯಲ್ಲಿತ್ತು, ಎಲ್ಲೆಡೆ ಹಗರಣಗಳು ನಡೆಯುತ್ತಿದ್ದವು. ವಿದೇಶಿ ಹೂಡಿಕೆ ಬರುತ್ತಿರಲಿಲ್ಲ. ಆ ಸಮಯದಲ್ಲಿ ನಾವು ಶ್ವೇತಪತ್ರವನ್ನು ಹೊರತಂದಿದ್ದರೆ ಅದು ಜಗತ್ತಿಗೆ ತಪ್ಪು ಸಂದೇಶವನ್ನು ನೀಡುತ್ತಿತ್ತು. ಆದರೆ 10 ವರ್ಷಗಳ ನಂತರ ನಮ್ಮ ಸರ್ಕಾರ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸಿದೆ. ವಿದೇಶಿ ಹೂಡಿಕೆಯನ್ನು ತಂದಿದೆ, ಯಾವುದೇ ಭ್ರಷ್ಟಾಚಾರವಿಲ್ಲ, ಆದ್ದರಿಂದ ಶ್ವೇತಪತ್ರವನ್ನು ಪ್ರಕಟಿಸಲು ಇದು ಸರಿಯಾದ ಸಮಯ ಎಂದು ಅವರು ಹೇಳಿದರು.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣದ ಕುರಿತು ಮಾತನಾಡಿದ ಗೃಹ ಸಚಿವರು, ರಾಮನ ಜನ್ಮ ಸ್ಥಳದಲ್ಲಿಯೇ ಮಂದಿರ ನಿರ್ಮಾಣವಾಗಬೇಕು ಎಂದು ದೇಶದ ಜನತೆ 500 ವರ್ಷಗಳಿಂದ ಬಯಸಿದ್ದರು. ಆದರೆ, ತುಷ್ಟೀಕರಣ ರಾಜಕಾರಣ ಮತ್ತು ಕಾನೂನು ಸುವ್ಯವಸ್ಥೆಯನ್ನು ಮುಂದಿಟ್ಟುಕೊಂಡು ರಾಮಮಂದಿರ ನಿರ್ಮಾಣಕ್ಕೆ ಅವಕಾಶ ಸಿಕ್ಕಿರಲಿಲ್ಲ. ಇಂದು ಅದು ಈಡೇರಿದೆ ಎಂದರು.

ಲೋಕಸಭೆ ಚುನಾವಣೆ ಮುನ್ನ ಸಿಎಎ ಜಾರಿ: ಪೌರತ್ವ ತಿದ್ದುಪಡಿ ಕಾಯಿದೆ (CAA) ಕುರಿತು, 2019 ರಲ್ಲಿ ಜಾರಿಗೊಳಿಸಲಾದ ಕಾನೂನನ್ನು ನಿಯಮಗಳನ್ನು ಹೊರಡಿಸಿದ ನಂತರ ಲೋಕಸಭೆ ಚುನಾವಣೆಗೆ ಮೊದಲು ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದರು. ನಮ್ಮ ದೇಶದ ಮುಸಲ್ಮಾನ ಸಹೋದರರನ್ನು ಈ ವಿಷಯದಲ್ಲಿ ಪ್ರಚೋದಿಸಿ ದಾರಿತಪ್ಪಿಸಲಾಗುತ್ತಿದೆ. ಸಿಎಎ, ಪಾಕಿಸ್ತಾನ, ಅಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಕಿರುಕುಳವನ್ನು ಎದುರಿಸಿ ಭಾರತಕ್ಕೆ ಬಂದವರಿಗೆ ಪೌರತ್ವವನ್ನು ನೀಡಲು ಉದ್ದೇಶಿಸಲಾಗಿದೆ. ಇದು ಯಾರೊಬ್ಬರ ಭಾರತೀಯ ಪೌರತ್ವವನ್ನು ಕಸಿದುಕೊಳ್ಳಲು ಇರುವುದಲ್ಲ ಎಂದು ಸ್ಪಷ್ಟಪಡಿಸಿದರು. ಏಕರೂಪ ನಾಗರಿಕ ಸಂಹಿತೆಯ ಕುರಿತು, ಇದು ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಮತ್ತು ಇತರರು ಸಹಿ ಮಾಡಿದ ಸಾಂವಿಧಾನಿಕ ಕಾರ್ಯಸೂಚಿಯಾಗಿದೆ. ಆದರೆ ಕಾಂಗ್ರೆಸ್ ತುಷ್ಟೀಕರಣದ ಕಾರಣದಿಂದ ಅದನ್ನು ನಿರ್ಲಕ್ಷಿಸಿದೆ. ಉತ್ತರಾಖಂಡದಲ್ಲಿ ಯುಸಿಸಿ ಜಾರಿ ಸಾಮಾಜಿಕ ಬದಲಾವಣೆಯಾಗಿದೆ. ಇದನ್ನು ಎಲ್ಲಾ ವೇದಿಕೆಗಳಲ್ಲಿ ಚರ್ಚಿಸಲಾಗುವುದು ಮತ್ತು ಕಾನೂನು ಪರಿಶೀಲನೆ ಎದುರಿಸಬೇಕಾಗುತ್ತದೆ. ಜಾತ್ಯತೀತ ದೇಶವು ಧರ್ಮ ಆಧಾರಿತ ನಾಗರಿಕ ಸಂಹಿತೆಗಳನ್ನು ಹೊಂದಲು ಸಾಧ್ಯವಿಲ್ಲ ಎಂದರು.

ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ!

ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಮತ್ತು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ತಪ್ಪಿತಸ್ಥ ಅಧಿಕಾರಿಯನ್ನು ರಕ್ಷಿಸುವ ಸಲುವಾಗಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಒತ್ತಾಯಿಸಿದ್ದು, ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ವಿಶೇಷವೆಂದರೆ ಈ ರಾಜಕಾರಣಿಗಳ ಪತ್ರಗಳು ಬಂದ ನಂತರ ಜಿಲ್ಲಾಧಿಕಾರಿಗಳು ಪ್ರಕರಣವನ್ನು ಮರು ಪರಿಶೀಲಿಸುವಂತೆ ಉಪ ವಿಭಾಗಾಧಿಕಾರಿಗಳಿಗೆ ಆದೇಶಿಸಿದ್ದು, ನಂತರ ಉಪ ವಿಭಾಗಾಧಿಕಾರಿಗಳು ನೀಡಿದ ವರದಿಯನ್ನಾಧರಿಸಿ ತಹಸೀಲ್ದಾರ್ ಕುಂಞಿ ಅಹಮದ್ ವಿರುದ್ಧ ಸೂಕ್ತ ಕ್ರಮ ವಹಿಸುವ ಬಗ್ಗೆ ಜನವರಿ 10ರಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ದಾಖಲೆಗಳ ಸಮೇತ 58 ಪುಟಗಳ ವರದಿಯನ್ನು ಸಲ್ಲಿಸಿದ್ದಾರೆ ಎಂದು ರವೀಂದ್ರ ತಿಳಿಸಿದರು.

ಹಿಂದೂ ದೇವಾಲಯ ಉದ್ಘಾಟಿಸುವ ಪ್ರಧಾನಿ ಮೋದಿ

ಅಬುಧಾಬಿಯಲ್ಲಿ ನಿರ್ಮಾಣವಾಗಿರುವ ಮೊದಲ ಹಿಂದೂ ದೇವಾಲಯವನ್ನು ಉದ್ಘಾಟಿಸಲಿದ್ದಾರೆ. 2015 ರಿಂದ ಯುಎಇಗೆ ಪ್ರಧಾನಿ ಮೋದಿ ಅವರ ಏಳನೇ ಭೇಟಿ ಇದಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶನಿವಾರ ತಿಳಿಸಿದೆ. ಮೋದಿ ಮತ್ತು ಅಲ್ ನಹ್ಯಾನ್ ಅವರು ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಸಹಭಾಗಿತ್ವವನ್ನು ಇನ್ನಷ್ಟು ಗಟ್ಟಿಗೊಳಿಸುವ ಮತ್ತು ವಿಸ್ತರಿಸುವ ಮಾರ್ಗಗಳನ್ನು ಬಗ್ಗೆ ಚರ್ಚಿಸಲಿದ್ದಾರೆ ಮತ್ತು ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ. ಆಹ್ವಾನದ ಮೇರೆಗೆ, ಪ್ರಧಾನಿ ಮೋದಿ ಅವರು ದುಬೈನಲ್ಲಿ ನಡೆಯಲಿರುವ ವಿಶ್ವ ಸರ್ಕಾರದ ಶೃಂಗಸಭೆ 2024ರಲ್ಲಿ ಗೌರವ ಅತಿಥಿಯಾಗಿ ಭಾಗವಹಿಸುತ್ತಾರೆ ಮತ್ತು ಶೃಂಗಸಭೆಯಲ್ಲಿ ವಿಶೇಷ ಭಾಷಣವನ್ನು ಮಾಡುತ್ತಾರೆ ಎಂದು MEA ತಿಳಿಸಿದೆ. ಅಬುಧಾಬಿಯ ಮೊದಲ ಹಿಂದೂ ದೇವಾಲಯವಾದ BAPS ಮಂದಿರವನ್ನು ಪ್ರಧಾನಿ ಮೋದಿ ಉದ್ಘಾಟಿಸಲಿದ್ದಾರೆ ಎಂದು JAEJ ಹೇಳಿದೆ.

ಮೈಸೂರಲ್ಲಿ ಆರಂಭವಾಗಿದೆ ಗೆಡ್ಡೆ ಗೆಣಸು ಮೇಳ

ಗಮನ ಸೆಳೆದ ದೇಶೀ ಗೋಶಾಲೆಯ 136 ಕೆ.ಜಿ. ತೂಗುವ ಹುತ್ತರಿ ಗೆಣಸು



ಮೈಸೂರು, ಫೆ. 10 (ಆರ್‌ಕೆ)- ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಎರಡು ದಿನಗಳ ಗೆಡ್ಡೆ-ಗೆಣಸು ಮೇಳ ಇಂದಿನಿಂದ ಆರಂಭವಾಗಿದೆ.

ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ ಹಾಗೂ ರೋಟರಿ ಕ್ಲಬ್ ಮೈಸೂರು ಪಶ್ಚಿಮ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಮೇಳವನ್ನು ಒನಕೆಯಿಂದ ಭತ್ತ ಕುಟ್ಟುವ ಮೂಲಕ ವಯನಾಡಿನ ಗೆಡ್ಡೆ ಗೆಣಸುಗಳ ತಳಿ ಸಂರಕ್ಷಕರಾದ ರಾಷ್ಟ್ರ ಪ್ರಶಸ್ತಿ ವಿಜೇತ ಎನ್.ಎಂ. ಶಾಜಿ ಉದ್ಘಾಟಿಸಿದರು.

ಎರಡು ದಿನಗಳ ಈ ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ ರೈತರು ವಿವಿಧ ಬಗೆಯ ಗೆಡ್ಡೆ-ಗೆಣಸುಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ. ವಿವಿಧ ಪ್ರಭೇದದ ವೈವಿಧ್ಯಮಯ ಗಾತ್ರ ಹಾಗೂ ಆಕಾರದ ಗೆಡ್ಡೆ ಗೆಣಸುಗಳು ಗಮನ ಸೆಳೆದಿದ್ದು, ಕೇರಳದ ರೈತ ಶಾಜಿ, ಹುಣಸೂರಿನ ತಮ್ಮಯ್ಯ ಸೇರಿದಂತೆ ಹಲವು ರೈತರು ತಮ್ಮ ತೋಟ, ಜಮೀನುಗಳಲ್ಲಿ ಬೆಳೆದಿರುವ ಗೆಡ್ಡೆ-ಗೆಣಸು, ತರಕಾರಿ, ಸಿರಿಧಾನ್ಯ ಸಸಿಗಳು ಮೇಳದ ಪ್ರಮುಖ ಆಕರ್ಷಣೆಯಾಗಿವೆ.

ಬಿಳಿ, ಹಳದಿ, ಕೆಂಪು ಗೆಣಸು, ಪರ್ಪಲ್ ಯಾಮ್, ಬಳ್ಳಿ ಆಲೂಗೆಡ್ಡೆ, ಹಸಿರು ಮತ್ತು ಕಪ್ಪು ಅರಿಶಿನ, ಸುವರ್ಣಗೆಡ್ಡೆ, ಶುಂಠಿ, ಕೋವೆಗೆಡ್ಡೆ, ಚೌಡಿ ಕಟ್ಟೆಯ ದೇಶಿ ಗೋಶಾಲೆಯಲ್ಲಿ ಬೆಳೆದಿರುವ 136 ಕೆಜಿ, 400 ಗ್ರಾಂ ಹಾಗೂ 49 ಕೆಜಿಯ ಹುತ್ತರಿ ಗೆಣಸನ್ನು ಮೇಳದಲ್ಲಿ ಪ್ರದರ್ಶಿಸಲಾಗಿದೆ.

ಕಸುಗೆಡ್ಡೆ ಸಿದ್ದಿ ಗೆಣಸು, ಕುಂದುಗೋಳದ ತೀರ್ಥ ಗ್ರಾಮದ ಮಹಿಳಾ ಸಂಘದ ಕೋರಲೆ, ರಾಗಿ ಮತ್ತು ಜೋಳದ ರೊಟ್ಟಿ ಜೊತೆಗೆ ಗೆಡ್ಡೆ-ಗೆಣಸು ಪಲ್ಯ ಉಣಬಡಿಸಲಾಗುತ್ತಿದ್ದು, ಅಪರೂಪದ ಹಣ್ಣಿನ ಗಿಡಗಳು, ದೇಶಿ ಬೀಜ, ಸಾವಯವ ಕೃಷಿ ಉತ್ಪನ್ನಗಳು, ಸಿರಿಧಾನ್ಯ, ಮೌಲ್ಯವರ್ಧಿತ ಪದಾರ್ಥಗಳು, ಗಾಣದ ಎಣ್ಣೆ, ಎಳನೀರು ಮತ್ತು ಹಲಸಿನ ಹಣ್ಣಿನಿಂದ ತಯಾರಿಸಿದ ಹಾಗೂ ಗೆಣಸಿನ ಐಸ್‌ಕ್ರೀಂಗಳು, ಹುರುಳಿ, ರಾಗಿ, ಸಾಮೆ, ದಂಟು ಸೊಪ್ಪು, ನವಣೆ ಸಸಿಗಳನ್ನು ಮೇಳದಲ್ಲಿ ಪ್ರದರ್ಶಿಸಿ, ಮಾರಾಟ ಮಾಡಲಾಗುತ್ತಿದೆ.

ತೆಂಗು, ಹಲಸು, ಸೀಬೆ, ಸಪೋಟ, ಪರಂಗಿ ಸೇರಿದಂತೆ ಹಣ್ಣಿನ ಗಿಡಗಳು, ಅಲಂಕಾರಿಕ, ಸೌಂದರ್ಯ ಮರಗಳ ಗಿಡಗಳು, ತರಕಾರಿ, ಸಿರಿಧಾನ್ಯ, ಸೊಪ್ಪುಗಳು ಹಾಗೂ ಸಾವಯವ ಕೃಷಿಯಿಂದ ಬೆಳೆದ ಆಹಾರ ಪದಾರ್ಥಗಳನ್ನು ಗೆಡ್ಡೆ ಗೆಣಸು ಮೇಳದಲ್ಲಿ ಜನರು ಖರೀದಿಸುತ್ತಿದ್ದುದು ಕಂಡು ಬಂದಿತು.

ಮೇಳ ಉದ್ಘಾಟಿಸಿದ ಎನ್.ಎಂ. ಶಾಜಿ ಅವರು, ಉತ್ತರ ಕರ್ನಾಟಕದ ಒಣಭೂಮಿಯಲ್ಲೂ ಗೆಡ್ಡೆ ಗೆಣಸು ಕೃಷಿ ಮಾಡಿದ ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲೂಕಿನ ಮುಗಳಿ ಗ್ರಾಮದ ನಾಗರಾಜು ಹುಲಗೂರ ಮತ್ತು ಜೊಯಿಡಾದಲ್ಲಿ ಮೇಳ ಆಯೋಜಿಸಿ ಗೆಡ್ಡೆ-ಗೆಣಸುಗಳನ್ನು ಮುಖ್ಯ ವಾಹಿನಿಗೆ ತಂದಿರುವ ಶಿರಸಿಯ ಬಾಲಚಂದ್ರ ಹೆಗಡೆ ಸಾಯಿ ಮನೆ ಅವರನ್ನು ಇದೇ ವೇಳೆ ಸನ್ಮಾನಿಸಿದರು.

ರೋಟರಿ ಕ್ಲಬ್ ಮೈಸೂರು ಪಶ್ಚಿಮ ಅಧ್ಯಕ್ಷ ರೋ. ಜಿ.ಕೆ. ಸುಧೀಂದ್ರ, ಕಾರ್ಯದರ್ಶಿ ರೋ. ಎಂ.ಎಲ್. ನಾಗೇಶ್, ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಜಿ. ಕೃಷ್ಣಪ್ರಸಾದ್, ಪಾರ್ವತಿ, ಅನಿತಾ ರೆಡ್ಡಿ, ಅನಂದ ತೀರ್ಥ, ಸೀಮಾಪ್ರಸಾದ್, ನಿಶಾಂತ ಬಂಕಾಪುರ, ಕೆ.ಎಸ್. ಮಂಜು ಹಾಗೂ ಇತರರು ಉಪಸ್ಥಿತರಿದ್ದರು.

ನಾಳೆ (ಫೆ. 11) ಮಧ್ಯಾಹ್ನ ಗೆಡ್ಡೆ-ಗೆಣಸು ಬಳಸಿ ಆಹಾರ ತಯಾರಿಸುವ ಸ್ಪರ್ಧೆ ಏರ್ಪಡಿಸಿದ್ದು, ಉತ್ತಮ ಅಡುಗೆಗೆ ಬಹುಮಾನ ನೀಡಲಾಗುವುದು ಎಂದು ಸಹಜ ಸಮೃದ್ಧದ ಆಯೋಜಕರು ತಿಳಿಸಿದ್ದಾರೆ. ಗೆಡ್ಡೆ-ಗೆಣಸು ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು, ನಾಳೆ (ಭಾನುವಾರ) ಸಂಜೆ ಮೇಳ ಮುಕ್ತಾಯವಾಗಲಿದೆ.

ದೆಹಲಿ ಚಲೋನಲ್ಲಿ ಭಾಗಿಯಾಗಲು ರಾಷ್ಟ್ರ ರಾಜಧಾನಿಗೆ ತೆರಳಿದ ಮೈಸೂರು ರೈತರು



ರೈತರ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದೆಹಲಿಯಲ್ಲಿ ಫೆಬ್ರವರಿ 13 ರಂದು ನಡೆಯುವ ದೆಹಲಿ ಚಲೋನಲ್ಲಿ ಭಾಗವಹಿಸಲು ಮೈಸೂರು ಜಿಲ್ಲೆಯ ರೈತರು ಶನಿವಾರ ರಾಷ್ಟ್ರ ರಾಜಧಾನಿಗೆ ಪ್ರಯಾಣ ಬೆಳೆಸಿದರು.

ಮೈಸೂರು, ಫೆ.10(ಬಿಎಲ್‌ಯು)- ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ, ರೈತರ ಸಂಪೂರ್ಣ ಸಾಲ ಮನ್ನಾ, ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ದೆಹಲಿಯಲ್ಲಿ ಫೆಬ್ರವರಿ 13 ರಂದು ನಡೆಯುವ ದೆಹಲಿ ಚಲೋನಲ್ಲಿ ಭಾಗವಹಿ ಸಲು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ನೂರಾರು ರೈತರು ಮೈಸೂರಿನಿಂದ ದೆಹಲಿಗೆ ಪ್ರಯಾಣ ಬೆಳೆಸಿದರು.

60 ವರ್ಷ ತುಂಬಿದ ರೈತರಿಗೆ ಪಿಂಚಣಿ ಯೋಜನೆ ಜಾರಿ, ರೈತರ ಸಂಪೂರ್ಣ ಸಾಲ ಮನ್ನಾ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಕಾನೂನು ಜಾರಿ ಸೇರಿದಂತೆ ಹಲವು ಹಕ್ಕೊತ್ತಾಯಕ್ಕಾಗಿ ದೆಹಲಿಯಲ್ಲಿ ಫೆಬ್ರವರಿ 13 ರಂದು ಸಂಯುಕ್ತ ಕಿಸಾನ್ ಮೋರ್ಚಾ ದೆಹಲಿ ಚಲೋಗೆ ಕರೆ ನೀಡಿದೆ.

ಮೈಸೂರು ಮಾತ್ರವಲ್ಲದೆ ದೇಶದ ಹಲವು ರಾಜ್ಯಗಳ ಸಾವಿರಾರು ರೈತರು ದೆಹಲಿ ಚಲೋ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ನಮ್ಮ ಬೇಡಿಕೆ ಈಡೇರಿಸದಿದ್ದರೆ ಲೋಕಸಭಾ ಚುನಾವಣೆಯಲ್ಲಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಇದೇ ವೇಳೆ ಕುರುಬೂರು ಶಾಂತಕುಮಾರ್ ಎಚ್ಚರಿಸಿದರು.

ರೈತ ಮುಖಂಡರಾದ ಬರಡನಪುರ ನಾಗರಾಜ್, ಉಡಿಯಾಲ ರೇವಣ್ಣ, ಮೂಕಳ್ಳಿ ಮಹದೇವಸ್ವಾಮಿ, ಕುರೂಬೂರು ಸಿದ್ದೇಶ್, ಗೌರಿಶಂಕರ್, ಶಿವಮೂರ್ತಿ ಸೇರಿದಂತೆ ಹಲವು ನೂರಾರು ರೈತರು ದೆಹಲಿಗೆ ತೆರಳಿದರು.



ಶ್ರೀ ಮಂಜು ಬುದ್ಧಿ ಅವರ ಹುಟ್ಟುಹಬ್ಬವನ್ನು ಬೃಹತ್ ಗಾತ್ರದ ಹಾರ ಹಾಕಿ, ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಮಾಜಿ ಶಾಸಕರುಗಳಾದ ಕಳಲೆ ಕೇಶವ ಮೂರ್ತಿ, ಬಾಲರಾಜು, ಮಾಲಂಗಿ ಸುರೇಶ್, ಗೌರಿಶಂಕರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ನಗರ ಪಾಲಿಕೆ ಮಾಜಿ ಸದಸ್ಯರಾದ ಲೋಕೇಶ್ ಪಿಯಾ, ಸ್ಮರಣ್ ಗೌಡ ಇತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಐಓಬಿ ಸಿಬ್ಬಂದಿಯ ವಾಕಥಾನ್



ಮೈಸೂರು, ಫೆ. 10 (ಆರ್‌ಕೆ)- ಇಂಡಿಯನ್ ಓವರ್‌ಸೀಸ್ ಬ್ಯಾಂಕ್ (ಐಒಬಿ)ನ 88ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಬ್ಯಾಂಕಿನ ಸಿಬ್ಬಂದಿ ಇಂದು ಮೈಸೂರಿನಲ್ಲಿ ವಾಕಥಾನ್ ನಡೆಸಿದರು.

ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಬೆಳಿಗ್ಗೆ 7.30 ಗಂಟೆಗೆ ಆರಂಭವಾದ ನಡಿಗೆಯು ಹಾರ್ಡಿಂಜ್ ಸರ್ಕಲ್ ಮೂಲಕ ಸಾಗಿ ಗನ್‌ಹೌಸ್ ಸರ್ಕಲ್‌ನಲ್ಲಿ ಅಂತ್ಯಗೊಂಡಿತು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ವಿದ್ಯಾ ವಿ. ನಾಯರ್, ಸುಪಾಲ್, ಪ್ರಧಾನ ಸೇರಿದಂತೆ 60ಕ್ಕೂ ಹೆಚ್ಚು ಅಧಿಕಾರಿಗಳು ಹಾಗೂ ಸಿಬ್ಬಂದಿ ವಾಕಥಾನ್‌ನಲ್ಲಿ ಭಾಗವಹಿಸಿದ್ದರು.

ಬ್ಯಾಂಕಿನ ಸಂಸ್ಥಾಪನಾ ದಿನದ ಅಂಗವಾಗಿ ಲಿಟಲ್ ಸಿಸ್ಟರ್ ಹೋಂ ಫಾರ್ ಪೂರ್‌ನಲ್ಲಿ ಉಪಹಾರ ವಿತರಿಸಲಾಯಿತಲ್ಲದೆ, ಬ್ಯಾಂಕಿನ ಆವರಣದಲ್ಲಿ ಗಿಡ ನೆಟ್ಟು ಪರಿಸರ ಸಂರಕ್ಷಿಸುವ ಬಗ್ಗೆ ಅರಿವು ಮೂಡಿಸಲಾಯಿತು. ಬ್ಯಾಂಕಿನ ಸಾಮಾಜಿಕ ಚಟುವಟಿಕೆ, ಗ್ರಾಹಕ ಸ್ನೇಹಿ ಸೇವೆಗಳ ಬಗ್ಗೆ ಅಧಿಕಾರಿಗಳು ಜನಜಾಗೃತಿ ಮೂಡಿಸಿದರು.

ಬೆಳ್ಳಿ ಸುತ್ತಿಗೆ, ಚಿನ್ನದ ಉಳಿ ಬಳಸಿ ಬಾಲರಾಮನ ದೈವಿಕ ಕಣ್ಣು ಕೆತ್ತನೆ

ಮೈಸೂರು ಶಿಲ್ಪಿ ಅರುಣ್ ಯೋಗಿರಾಜ್ 'ಎಕ್ಸ್'ನಲ್ಲಿ ಮಾಹಿತಿ



ಮೈಸೂರು, ಫೆ.10(ಬಿಎಲ್‌ಯು)- ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಾಲರಾಮನ ದೈವಿಕ ಕಣ್ಣುಗಳನ್ನು ಬೆಳ್ಳಿಯ ಸುತ್ತಿಗೆ ಹಾಗೂ ಚಿನ್ನದ ಉಳಿ ಬಳಸಿ ಕೆತ್ತನೆ ಮಾಡಿರುವುದಾಗಿ ಮೈಸೂರಿನ ಶಿಲ್ಪಿ ಅರುಣ್ ಯೋಗಿ ರಾಜ್ ತಿಳಿಸಿದ್ದಾರೆ.

ತಮ್ಮ 'ಎಕ್ಸ್' ('ಟ್ವಿಟರ್') ಖಾತೆಯಲ್ಲಿ ಫೋಟೋ ಸಹಿತ ಈ ವಿಚಾರ ಹಂಚಿಕೊಂಡಿರುವ ಅರುಣ್ ಯೋಗಿರಾಜ್, ಅತ್ಯಾಕರ್ಷಕವಾಗಿ ದೈವಿಕ ಕಣ್ಣುಗಳನ್ನು ಕೆತ್ತಿರುವ ರಹಸ್ಯವನ್ನು ವಿವರಿಸಿದ್ದಾರೆ.

ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಿರುವ ಬಾಲರಾಮನನ್ನು ಕೆತ್ತನೆ ಮಾಡಿರುವ ಅರುಣ್ ಯೋಗಿರಾಜ್, ಬೆಳ್ಳಿ ಸುತ್ತಿಗೆ ಹಾಗೂ ಚಿನ್ನದ ಉಳಿ ಅಥವಾ ಚಾಣ ಬಳಸಿ ಬಾಲರಾಮನ ಮೂರ್ತಿಯ ದೈವಿಕ ಕಣ್ಣು(ನೇತ್ರೋನ್ಮಿಲನ) ಕೆತ್ತನೆ ಮಾಡಿರುವುದಾಗಿ ತಿಳಿಸಿದ್ದಾರೆ.

ಬೆಳ್ಳಿ ಸುತ್ತಿಗೆ ಹಾಗೂ ಚಿನ್ನದ ಉಳಿಯನ್ನು ದೇವರ ಭಾವಚಿತ್ರದ ಮುಂದಿಟ್ಟು ಆ ಫೋಟೋವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಅರುಣ್ ಯೋಗಿರಾಜ್ ಹಂಚಿಕೊಂಡಿದ್ದಾರೆ.

ಹಂಪಿ ಛಾಯಾಚಿತ್ರ ಪ್ರದರ್ಶನ ಉದ್ಘಾಟನೆ



ಮೈಸೂರು, ಫೆ. 10(ಆರ್‌ಕೆ)- ಮೈಸೂರಿನ ವಿಜಯನಗರ ವಾಟರ್ ಟ್ಯಾಂಕ್ ಬಳಿಯ ನೆರಳು ಬೆಳಕು ಗ್ಯಾಲರಿ ಕಾಫಿ ಸಿಟಿಯಲ್ಲಿ ಆರಂಭವಾದ ಮುಂಜಾನೆ ಮತ್ತು ಮುಸ್ಸಂಜೆ ಬೆಳಕಿನಲ್ಲಿ ಹಂಪಿ ಛಾಯಾಚಿತ್ರ ಪ್ರದರ್ಶನವನ್ನು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಉದ್ಘಾಟಿಸಿದರು.

ಫೆಬ್ರವರಿ 29ರವರೆಗೆ ಬೆಳಿಗ್ಗೆ 9ರಿಂದ ರಾತ್ರಿ 9 ಗಂಟೆವರೆಗೆ ಛಾಯಾಚಿತ್ರ ವೀಕ್ಷಿಸಬಹುದಾಗಿದ್ದು, ಹಂಪಿಯ ವಿವಿಧ ವಿನ್ಯಾಸದ ಚಿತ್ರಗಳು ಗಮನ ಸೆಳೆಯಲಿವೆ. ಛಾಯಾಗ್ರಾಹಕ ಶಿವಶಂಕರ ಬಣಗಾರ ಸೆರೆಹಿಡಿದಿರುವ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಇದೇ ವೇಳೆ ಬಣಗಾರ ಛಾಯಾಚಿತ್ರಗಳ ಕ್ಯಾಲೆಂಡರ್ ಅನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದರು. ಈ ವೇಳೆ ಗೌರೀಶ ಕಂಪನಿ, ಜಿ.ಕೆ. ಕುಲಕರ್ಣಿ, ರಾಜಶೇಖರ ಜಮದಂಡಿ, ಮಧು ಬಳ್ಳಾಕಿ ಉಪಸ್ಥಿತರಿದ್ದರು.



ಕೃಷ್ಣರಾಜ ಕ್ಷೇತ್ರದಲ್ಲಿ ಶಾಸಕ ಶ್ರೀವತ್ಸ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಕರ ಪತ್ರವನ್ನು ಹಂಚುವ ಮೂಲಕ ಬೂತ್ ಚಲೋ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ನೈಋತ್ಯ ರೈಲ್ವೇ ಸದಸ್ಯ ಶಿವರಾಜ್, ವಾರ್ಡ್ ಅಧ್ಯಕ್ಷ ಮಂಜುನಾಥ್, ಸತೀಶ್, ಕೆ.ಆರ್ ಕ್ಷೇತ್ರದ ಮುಖಂಡರಾದ ಮನೋಜ್, ರೇಖಾ, ಮಮತಾ, ಜ್ಯೋತಿ, ಸರ್ವ ಮಂಗಳ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ ಸಂಚಲನ ಮಕ್ಕಳ ನಾಟಕೋತ್ಸವ

ಮೈಸೂರು,ಫೆ.10(ಎಂಟಿವೈ)- ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಫೆ.12ರಿಂದ 16ರವರೆಗೆ ಸಂಚಲನ ಮಕ್ಕಳ ನಾಟಕೋತ್ಸವ ಹಾಗೂ ಜಾನಪದ ಉತ್ಸವ ಆಯೋಜಿಸಲಾಗಿದೆ ಎಂದು ಸಂಚಲನ ಸಂಸ್ಥೆಯ ಅಧ್ಯಕ್ಷ ದೀಪಕ್ ಮೈಸೂರು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಸಂಚಲನ ಮೈಸೂರು, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಸಂಚಲನ ಮಕ್ಕಳ ನಾಟಕೋತ್ಸವ ಹಾಗೂ ಜಾನಪದ ಉತ್ಸವ ನಡೆಸಲಾಗುತ್ತಿದ್ದು, ಫೆ. 12 ರಿಂದ 16 ರವರೆಗೆ ಮೈಸೂರಿನ ಜನರಿಗೆ ನಾಟಕ ಹಾಗೂ ಜಾನಪದ ವೈವಿಧ್ಯತೆಯ ರಸದೌತಣ ಉಣ ಬಡಿಸಲಾಗುತ್ತದೆ ಎಂದರು.

ಕಾರ್ಯಕ್ರಮವನ್ನು ಫೆ. 12 ರ ಸಂಜೆ 6.30ಕ್ಕೆ ಶಾಸಕ ಕೆ. ಹರೀಶ್‌ಗೌಡ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾನಸ ಗಂಗೋತ್ರಿಯ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್. ಸಪ್ನ, ರಂಗಕರ್ಮಿ ಮಂಡ್ಯ ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣದ ಉಪ ನಿರ್ದೇಶಕಿ ನಿರ್ಮಲ ಮಠಪತಿ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಸಂಚಲನ ಮಕ್ಕಳ ನಾಟಕೋತ್ಸವ ಹಾಗೂ ಜಾನಪದ ಉತ್ಸವ'ದ ಪೋಸ್ಟರ್ ಅನ್ನು ಸಂಚಲನ ಸಂಸ್ಥೆಯ ಅಧ್ಯಕ್ಷ ದೀಪಕ್ ಮೈಸೂರು ಬಿಡುಗಡೆ ಮಾಡಿದರು.

ಸಭಾ ಕಾರ್ಯಕ್ರಮದ ಬಳಿಕ ಮಕ್ಕಳಿಂದ ಜಾನಪದ ಸಿರಿ ವೈಭವ ಕಾರ್ಯಕ್ರಮ ಜರುಗಲಿದೆ. ಬಳಿಕ ನಟನ ರಂಗ ಶಾಲೆಯ ಮಕ್ಕಳಿಂದ ಜಯತೀರ್ಥ ರಚನೆಯ, ಮಂಡ್ಯ ರಮೇಶ್ ನಿರ್ದೇಶನದ 'ಹೆಬ್ಬಾಲ' ನಾಟಕ ಪ್ರದರ್ಶನ ಜರುಗಲಿದೆ.


ಫೆ. 13 ರಂದು ಸಂಜೆ 6.30ಕ್ಕೆ ಸಂಚಲನ ಮಕ್ಕಳ ರಂಗ ತಂಡದಿಂದ ಲೀಲಾ ಗರಡಿ ರಚನೆಯ, ಅಶೋಕ್ ನೀನಾಸಂ ನಿರ್ದೇಶನದ 'ಲಂಬ ಕರ್ಣನ ಉಷ್ಣೀಷ' ನಾಟಕ, ನಂತರ ಚಾಮರಾಜನಗರದ ಅಭ್ಯಾಸಿ ಟ್ರಸ್ಟ್ ಮಕ್ಕಳಿಂದ ಕುವೆಂಪು ರಚನೆಯ ಕಿರಣ್ ಗಿರ್ಗಿ ನಿರ್ದೇಶನದ 'ನನ್ನ ಗೋಪಾಲ' ನಾಟಕ ಪ್ರದರ್ಶನಗೊಳ್ಳಲಿದೆ ಎಂದು ತಿಳಿಸಿದರು.

ಫೆ.14 ರಂದು ಸಂಜೆ 6.30ಕ್ಕೆ ಸ್ಯಾಂಡಲ್ ರೋಸ್ ಶಾಲೆಯ ಮಕ್ಕಳಿಂದ ತ್ಯಾಗರಾಜು ದೇವರಹಳ್ಳಿ ನಿರ್ದೇಶನದ ಪುಣ್ಯಕೋಟಿ ನೃತ್ಯ ರೂಪಕ, ಬಳಿಕ ಅದೇ ಶಾಲೆ ಮಕ್ಕಳಿಂದ ವೈದೇಹಿ ರಚನೆಯ 'ಅಣಿಲು ರಾಮಾಯಣ' ನಾಟಕ ಪ್ರದರ್ಶನವಿರುತ್ತದೆ.

ಫೆ.15 ರಂದು ಸಂಜೆ 6.30ಕ್ಕೆ ಅಪೂರ್ವ ಮತ್ತು ತನಿಸ್ವರ ಅವರಿಂದ ಎಲ್ಲೆಡೆ ಸದಾ ವಸಂತಕಾಲ ನಳನಳಿಸಲಿ' ನೃತ್ಯ ಪ್ರದರ್ಶನ ನಡೆಯಲಿದೆ. ಬಳಿಕ ನಟರಾಜ್ ಹೊನ್ನವಳ್ಳಿ ಕನ್ನಡಕ್ಕೆ ರೂಪಾಂತರಿಸಿರುವ ಸಪ್ದರ್ ಹಶ್ಮಿ ರಚನೆಯ ಎಂ.ಹೆಚ್. ಭಾವನ ನಿರ್ದೇಶನದ 'ಕೆಂಪು ಹೂ' ನಾಟಕವನ್ನು ಸಂಚಲನ ಮಕ್ಕಳ ರಂಗ ತಂಡ ಪ್ರಸ್ತುತ ಪಡಿಸಲಿದ್ದಾರೆ. ಬಳಿಕ ಹುಣಸೂರಿನ ರಂಗ ಗರಡಿ ತಂಡದಿಂದ ಬೊಳುವಾರ ಮಹಮ್ಮದ್ ಕುಂಯಿ ರಚನೆಯ ಡಾ. ಶ್ರೀಪಾದ ಭಟ್ ನಿರ್ದೇಶನ 'ಪಾಪು ಬಾಪು' ನಾಟಕ ಪ್ರದರ್ಶನ ನಡೆಯಲಿದೆ ಎಂದರು

ಫೆ. 16 ರ ಸಂಜೆ 6.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ರಂಗಕರ್ಮಿ ರಾಜಶೇಖರ ಕದಂಬ, ನಿವೃತ್ತ ಡಿಡಿಪಿಐ ಮಂಜುಳ, ಡಿಡಿಪಿಐ ಹೆಚ್.ಕೆ. ಪಾಂಡು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಡ್ರೀಮ್ ಬಜ್ ಸಂಸ್ಥೆಯ ಉಪಾಧ್ಯಕ್ಷ ಎಂ.ಪಿ. ಸುರೇಶ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಚಲನ ಮೈಸೂರು ಸಂಸ್ಥೆಯ ಶೋಭಾ ಶಿವರಾಜ್, ಪೂಜಾ, ಡಾ. ನವೀನ್ ಕುಮಾರ್, ತ್ಯಾಗರಾಜ್, ಕಾರ್ತಿಕ್, ರಶ್ಮಿ ಇದ್ದರು.



ಮಂಡ್ಯದ ಜನಪರವಾದಿ ಪ್ರೊ.ಬಿ.ಜಯಪ್ರಕಾಶ್‌ಗೌಡ

ಪ್ರೊ.ಜಯಪ್ರಕಾಶ್‌ಗೌಡರಿಗೆ 75ರ ಸಂಭ್ರಮ

ಪ್ರೊ.ಬಿ.ಜಯಪ್ರಕಾಶ್‌ಗೌಡರಿಗೆ ಫೆ.15ರಂದು 75 ವರ್ಷ ತುಂಬುವ ಹಿನ್ನೆಲೆಯಲ್ಲಿ ಅಂದೇ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಅವರೇ ಕಟ್ಟಿ ಬೆಳೆಸಿದ ರಾಜ್ಯದ ಪ್ರಮುಖ ಸಾಂಸ್ಕೃತಿಕ ಸಂಘಟನೆಯಾದ ಮಂಡ್ಯದ ಕರ್ನಾಟಕ ಸಂಘವು ಸಹ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದು, ಈ ಎರಡೂ ಕಾರ್ಯಕ್ರಮ ಒಂದೇ ದಿನ ಇರುವುದು ಕಾಕತಾಳೀಯ. ಅಂದು ಮಂಡ್ಯ ನಗರದ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಸಂಘದಲ್ಲಿ ಪ್ರೊ.ಜಯಪ್ರಕಾಶ್‌ಗೌಡರಿಗೆ ಅಭಿನಂದನೆಯೊಂದಿಗೆ, ಅಭಿನಂದನಾ ಗ್ರಂಥವು ಲೋಕಾರ್ಪಣೆಯಾಗುತ್ತಿದೆ.

ಡಾ.ಎಂ.ಎಸ್.ಅನಿತಾ
ಮಂಗಲ, ಉಪನ್ಯಾಸಕರು

ಮಾನವೀಯತೆ ಎನ್ನುವುದು ದಿನದಿಂದ ದಿನಕ್ಕೆ ಕಿರಿದಾಗುತ್ತಿದೆ. 'ಕಾರ್ಪೋರೇಟ್ ಕಲ್ಚರ್' ಮನುಷ್ಯನನ್ನು ಮನುಷ್ಯನನ್ನಾಗಿ ನೋಡದೆ ಗಿರಾಕಿಯನ್ನಾಗಿ ನೋಡುತ್ತಿದ್ದು, ಪ್ರಭುತ್ವಕ್ಕೂ ಪ್ರಜೆಗೂ ಇರುವ ಸಂಬಂಧ ಸಂಪೂರ್ಣ ಕಡಿದು ಹೋಗುತ್ತಿದೆ. ಮಾತ್ರವಲ್ಲ, ಮನುಷ್ಯನ ನಡುವಿನ ಬಾಂಧವ್ಯ ಕಡಿದು ಹೋಗುವ ಅಪಾಯವಿದೆ. ಇದು ವರ್ತಮಾನದ ಉರಿವ ಬೇಗೆ.

ಇದಕ್ಕೆ ವಿರುದ್ಧವಾಗಿ ಜೀವಕಾರುಣ್ಯವನ್ನು ಭದ್ರಗೊಳಿಸಿ ಮನುಷ್ಯ ಪ್ರೇಮವನ್ನು ಗುರಿಯಾಗಿಸಿಕೊಂಡು ಬದುಕುವವರು ಇತ್ತೀಚಿನ ವರ್ಷಗಳಲ್ಲಿ ಬಹಳವೇ ವಿರಳವಾಗುತ್ತಿದ್ದಾರೆ. ನಮಗೆ ಮಾನವ ಧರ್ಮದ ದರ್ಶನ ಮಾಡಿಸುವವರು ಬೆರಳೆಣಿಕೆಯಷ್ಟು ಮಂದಿ. ಇಂತಹವರ ಸಾಲಿನಲ್ಲಿ ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ.ಜಯಪ್ರಕಾಶಗೌಡರು (ಜೆಪಿ) ನಿಲ್ಲುತ್ತಾರೆ. ಮಹತ್ವದ ವ್ಯಕ್ತಿತ್ವ. ಸಂಘಟನೆಯನ್ನೆ ಕ್ರಿಯಾ ತಪಸ್ಸನ್ನಾಗಿಸಿಕೊಂಡು, ಬದುಕನ್ನು ಸಂಘಟನಾ ಕ್ಷೇತ್ರಕ್ಕೆ ಸಮರ್ಪಿಸಿಕೊಂಡವರು ಜೆಪಿ. ಆಧುನಿಕ ಮಾನವನ ಯಾಂತ್ರಿಕ ಬದುಕು; ಮಾತು, ಭಾವನೆ, ಸಂಘಟನೆ ಎಲ್ಲವನ್ನು ಮಾರುಕಟ್ಟೆಯ ಸರಕನ್ನಾಗಿಸಿದೆ. ಆದರೆ ಜೆಪಿ ಅವರ ಸಂಘಟನಾಶಕ್ತಿ ಜೀವಪರ ನಿಲುವನ್ನೆ ತಳಹದಿಯನ್ನಾಗಿಸಿದೆ.

ಮಂಡ್ಯದ ಸಾಂಸ್ಕೃತಿಕ ಅಸ್ಮಿತೆಯ ಬೇರನ್ನು ಗಟ್ಟಿಗೊಳಿಸಿದವರು ಪ್ರೊ.ಜಯಪ್ರಕಾಶಗೌಡರು. ಗೌಡರು ಹುಟ್ಟಿದ್ದು 1949ರಲ್ಲಿ, ಮಂಡ್ಯ ತಾಲೂಕು ಬಾಣಸವಾಡಿಯ ಗ್ರಾಮದಲ್ಲಿ. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಕೀಲಾರದಲ್ಲಿ ಮಧ್ಯಮಿಕ ಶಿಕ್ಷಣ ನಂತರ ಮಂಡ್ಯದಲ್ಲಿ ಪ್ರೌಢಶಾಲೆ ಪದವಿ, ಮಂಗಳೂರಿನ ಮಂಗಳಗಂಗೋತ್ರಿಯಲ್ಲಿ ಓದುತ್ತಿರುವಾಗಲೇ ತಮ್ಮ ಬದುಕನ್ನು ಸಂಘರ್ಷಕ್ಕೆ ಒಡ್ಡಿಕೊಂಡವರು. ಅಂದಿನ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ದೇ.ಜವರೇಗೌಡ (ದೇಜಗೌ) ಅವರಿಗೆ ದೂರವಾಣಿ ಕರೆಮಾಡಿ ಅಧ್ಯಾಪಕರ ವಿರುದ್ಧ ದೂರು ನೀಡಿ, ಅದನ್ನು ಸಮರ್ಥಿಸಿಕೊಂಡ ಧೀಮಂತ ವ್ಯಕ್ತಿತ್ವ. ಅಲ್ಲಿಂದಲೇ ನಾಯಕತ್ವ ಗುಣವನ್ನು ಮೈಗೂಡಿಸಿಕೊಂಡು ನಾಯಕರಾಗಿ ಹೊರಹೊಮ್ಮಿದ ಜೆಪಿ 1974ರಲ್ಲಿ ಪಿ.ಇ.ಎಸ್ ಸಂಜೆ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಪ್ರಾರಂಭಿಸಿದರು. ರಾಷ್ಟ್ರಕವಿ ಕುವೆಂಪು ಅವರಿಂದ ನಿತ್ಯಸಚಿವರೆನಿಸಿಕೊಂಡ ಕೆ.ವಿ.ಶಂಕರಗೌಡರ ಆಪ್ತ ವಲಯದಲ್ಲಿ ಗುರುತಿಸಿಕೊಂಡವರು.

ಜೆಪಿ ಅವರದು ಬಹುಮುಖ ಪ್ರತಿಭೆ. ಅಧ್ಯಯನ, ಅಧ್ಯಾಪನ, ಸಾಹಿತ್ಯ ರಚನೆ, ಸಂಘಟನೆಯೊಂದಿಗೆ ರಂಗಭೂಮಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ. 1978ರಲ್ಲಿ ಕುರುಕ್ಷೇತ್ರ ನಾಟಕದ ಮೂಲಕ ಪಿ.ಇ.ಎಸ್ ವಿಜ್ಞಾನ ಕಾಲೇಜಿನ ಕಟ್ಟಡಕ್ಕೆ ನಿಧಿ ಸಂಗ್ರಹಣೆ ಮಾಡುವುದರೊಂದಿಗೆ ಸಮಾಜ ಕಾರ್ಯಕ್ಕಿಳಿದರು. ಆ ಕಾಲದಲ್ಲೇ 3 ಲಕ್ಷರೂಗಳನ್ನು ಸಂಗ್ರಹಿಸಿ ಕೆ.ವಿ ಶಂಕರಗೌಡರ ಪ್ರಶಂಸೆಗೆ ಪಾತ್ರರಾದರು. ನಾಟಕದಲ್ಲಿ ದುರ್ಯೋಧನ ಪಾತ್ರದಲ್ಲಿ ಸೈ ಎನಿಸಿಕೊಂಡರು. ಇದೇ ಕಾಲಘಟ್ಟದಲ್ಲಿ ಹವ್ಯಾಸಿ ರಂಗಭೂಮಿ ಪ್ರವೇಶಿಸಿ, ಪ್ರಾರಂಭದಲ್ಲಿ ಬೆಂಗಳೂರಿನ ತಂಡಗಳನ್ನು ಆಹ್ವಾನಿಸಿ ರಂಗ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದರು. ಸಂಗ್ಯಾಬಾಳ್ಯ, ಕದಡಿದ ನೀರು, ಚೋಮ, ಹುತ್ತವ ಬಡಿದೊಡೆ ನಾಟಕಗಳ ಮೂಲಕ ಭಾರಿ ಜನಮನ್ನಣೆ ಪಡೆದರು. ಕಾಲಾನಂತರದಲ್ಲಿ ಗೆಳೆಯರ ಬಳಗ ರಂಗತಂಡದ ಸ್ಥಾಪನೆ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗಾಗಿ ರಂಗಭೂಮಿ ಕಾರ್ಯಾಗಾರದ ಯೋಜನೆ ರೂಪಿಸಿದರು. ತತ್ಪರಿಣಾಮವಾಗಿ ಲಂಕೇಶರ ಸಂಕ್ರಾಂತಿ, ಶೂದ್ರಕನ ಮೃಚ್ಛಕಟಿಕ, ಎ.ಎಸ್. ಮೂರ್ತಿ ಅವರ ದನಿ ಇಲ್ಲದವರು ನಾಟಕಗಳು; ಮೈಸೂರು, ಬೆಂಗಳೂರು, ಮುಂಬೈ, ನವದೆಹಲಿಯಲ್ಲಿ ಮಾತ್ರವಲ್ಲದೆ ರಾಷ್ಟ್ರದ ಪ್ರಮುಖ ಭಾಗಗಳಲ್ಲಿ ಪ್ರದರ್ಶನ ಕಂಡವು. ಹವ್ಯಾಸಿ ರಂಗಭೂಮಿಯಲ್ಲಿ ಮಂಡ್ಯದ ಛಾಪು ಮೂಡಿಸಿದವರು ಜೆಪಿ. ನಂತರದ ದಿನಗಳಲ್ಲಿ ಜನದನಿ ಸಾಂಸ್ಕೃತಿಕ ಸಂಘಟನೆಯ ಸ್ಥಾಪಿಸಿ ಹತ್ತಾರು ನಾಟಕಗಳ ಪ್ರದರ್ಶಿಸಿದರು.

1988ರಿಂದ 1991ರ ಅವಧಿಗೆ ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿದ್ದ ಜೆಪಿ, ಅಕಾಡೆಮಿ ಪ್ರಶಸ್ತಿಗಳು ರಾಜಧಾನಿ ಬೆಂಗಳೂರಿನಲ್ಲೇ ಕೇಂದ್ರೀಕೃತವಾಗಿದ್ದ ಸಂದರ್ಭದಲ್ಲಿ ಮೊದಲ ಬಾರಿಗೆ ಮಂಡ್ಯದಲ್ಲಿ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಿದ್ದು, ಹೊಸ ಮನ್ವಂತರಕ್ಕೆ ಕಾರಣವಾಯ್ತು. ನಂತರದ ದಿನಗಳಲ್ಲಿ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭಗಳು ರಾಜ್ಯದ ವಿವಿಧೆಡೆಗಳಲ್ಲಿ ನಡೆಯುತ್ತಿವೆ. ಜೆಪಿ ಅವರ ವೈಶಿಷ್ಟ್ಯ 'ಸ್ಥಳೀಯ ಅಸ್ಮಿತೆಯ ಹುಡುಕಾಟದ ನೆಲೆ'. ಇದರ ಪರಿಣಾಮವಾಗಿ ಮಂಡ್ಯ ನೆಲದಲ್ಲಿ ಗಣ್ಯರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪನೆ ಮಾಡಿದ್ದು ಮಾತ್ರವಲ್ಲ ಸ್ಥಳೀಯ ಗಣ್ಯರ ಜೀವನ ಚರಿತ್ರೆಯನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗಿದ್ದು ಮಹತ್ವದ ಸಂಗತಿ.

> **ಮಂಡ್ಯದ ಸಾಂಸ್ಕೃತಿಕ ಅಸ್ಮಿತೆಯ ಬೇರನ್ನು ಗಟ್ಟಿಗೊಳಿಸಿದವರು ಪ್ರೊ.ಜಯಪ್ರಕಾಶಗೌಡರು. ಗೌಡರು ಹುಟ್ಟಿದ್ದು 1949ರಲ್ಲಿ, ಮಂಡ್ಯ ತಾಲೂಕು ಬಾಣಸವಾಡಿಯ ಗ್ರಾಮದಲ್ಲಿ. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಕೀಲಾರದಲ್ಲಿ ಮಧ್ಯಮಿಕ ಶಿಕ್ಷಣ ನಂತರ ಮಂಡ್ಯದಲ್ಲಿ ಪ್ರೌಢಶಾಲೆ ಪದವಿ, ಮಂಗಳೂರಿನ ಮಂಗಳ ಗಂಗೋತ್ರಿಯಲ್ಲಿ ಓದುತ್ತಿರುವಾಗಲೇ ತಮ್ಮ ಬದುಕನ್ನು ಸಂಘರ್ಷಕ್ಕೆ ಒಡ್ಡಿಕೊಂಡವರು.**

ಕೆ.ವಿ ಶಂಕರಗೌಡ ರಂಗಭೂಮಿ ಪ್ರಶಸ್ತಿಯಿಂದ ಪ್ರಾರಂಭವಾದ ಈ ಕಾರ್ಯ ಇಂದು ಜೆಪಿ ನೇತೃತ್ವದಲ್ಲಿ 30ಕ್ಕೂ ಹೆಚ್ಚು ಪ್ರಶಸ್ತಿಗಳು ಪ್ರದಾನವಾಗುತ್ತಿವೆ. ಒಂದೆಡೆ ಮಂಡ್ಯವನ್ನು ರೂಪಿಸಿದ ಗಣ್ಯರನ್ನು ಸ್ಮರಿಸುವುದು, ಮತ್ತೊಂದೆಡೆ ನಾಡಿನ ವಿವಿಧ ಮೂಲೆಗಳಲ್ಲಿ ಸಮಾಜದ ಅನನ್ಯತೆಗೆ ದುಡಿಯುತ್ತಿರುವವರನ್ನು ಗುರುತಿಸಿ ಗೌರವಿಸುವುದು. ಜನಪದ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ್ದ ಜೀ.ಶಂ.ಪ.ಪ್ರಶಸ್ತಿ, ಸ್ವಾತಂತ್ರ್ಯ ಹೋರಾಟಗಾರರಾದ ಮೈಸೂರು ಅರಸರಿಂದ ಬಯಲು ಸಿಂಹ ಎಂದು ಹೆಸರಿಸಿಕೊಂಡ ಇಂಡುವಾಳು ಹೆಚ್.ಹೊನ್ನಯ್ಯ ಪ್ರಶಸ್ತಿ, ಹೆಚ್.ಡಿ ಚೌಡಯ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಕ್ರೀಡಾ ಪ್ರಶಸ್ತಿ, ಕೆ.ಸಿಂಗಾರಿಗೌಡ ಪುಸ್ತಕ ಪ್ರಶಸ್ತಿ,ಡಾ ಹಾಮಾನಾ. ಪ್ರಶಸ್ತಿ, ಶ್ರೀಶ್ರೀಶ್ರೀ ಡಾ ಬಾಲಗಂಗಾಧರನಾಥ ಮಹಾಸ್ವಾಮೀಜಿ ಮೂಡಲಪಾಯ ಯಕ್ಷಗಾನ ಪ್ರಶಸ್ತಿ, ಎಂ ಶ್ರೀನಿವಾಸ್ ಸಮಾಜಸೇವಾ ಪ್ರಶಸ್ತಿ, ಬಿ.ರಾಮಕೃಷ್ಣ ಸಾಹಿತ್ಯ ಮತ್ತು ಕೃಷಿಪ್ರಶಸ್ತಿ– ಹೀಗೆ ಹತ್ತು ಹಲವು. ಇದೇ ಕಾರಣದಿಂದ ಮಂಡ್ಯ ಜಿಲ್ಲೆಯಲ್ಲಿ ಇಂದು ನೂರಕ್ಕೂ ಹೆಚ್ಚು ಪ್ರಶಸ್ತಿಗಳ ಪ್ರದಾನಿಸಲಾಗುತ್ತಿದೆ. ಈ ಎಲ್ಲದಕ್ಕೂ ಭೂಮಿಕೆಯನ್ನು ಒದಗಿಸಿದ್ದು ಜೆಪಿಯ ಕರ್ತೃತ್ವ ಶಕ್ತಿಯೇ ಮೂಲ ಕಾರಣ.

2001ರಿಂದ 2004 ರವರೆಗೆ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಸಾಹಿತ್ಯ ರಥ ಎಳೆದಿದ್ದಾರೆ 2002 ರಿಂದ 2005ರವರೆಗೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ, ಗಣನೀಯ ಪರಿವರ್ತನೆಗೆ ಕಾರಣರಾದರು. ನಾಡೋಜ ಪ್ರಶಸ್ತಿಯೂ ವಿದ್ವತ್ ವಲಯದಿಂದ ಕಾಯಕ ಕ್ಷೇತ್ರಕ್ಕೆ ಸ್ಥಿತ್ಯಂತರವಾಗಲು ಕಾರಣರಾದರು. ಕೃಷಿ, ಜನಪದ ಕಲೆ ಈ ತೆರನಾದ ಕ್ಷೇತ್ರಗಳಿಗೂ ನಾಡೋಜ ಪ್ರಶಸ್ತಿಗಳು ದೊರಕಬೇಕೆಂಬ ಹಕ್ಕೊತ್ತಾಯದ ಫಲ ಈಗ ಹಲವರಿಗೆ ಲಭ್ಯವಾಗುತ್ತಿದೆ.

2007ರಲ್ಲಿ ಬೋಧನಾ ವೃತ್ತಿಯಿಂದ ನಿವೃತ್ತಿಗೊಂಡ ನಂತರ ಮಂಡ್ಯದ ಕರ್ನಾಟಕ ಸಂಘ ಪ್ರವೇಶಿಸಿದರು. ಇವರ ನೇತೃತ್ವದಲ್ಲಿ ಕರ್ನಾಟಕ ಸಂಘ, ಸುವರ್ಣ ಯುಗದೆಡೆಗೆ ದಾಪುಗಾಲಿರಿಸಿತು. 2018ರಲ್ಲಿ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನ (ಐದು ಅಂತಸ್ತಿನ) ನಿರ್ಮಾಣ, ಪ್ರಸ್ತುತ ಜೆಪಿಯ ಕನಸಿನ ಕೂಸಾದ 5 ಕೋಟಿ ರೂ.ಗಳ ವೆಚ್ಚದ ರಂಗಮಂದಿರ ನಿರ್ಮಾಣ ಪ್ರಗತಿಯಲ್ಲಿದೆ. ಇದರ ಜೊತೆಗೆ ಸಾಹಿತ್ಯ, ಸಂಸ್ಕೃತಿ, ರಂಗಭೂಮಿ ಕ್ಷೇತ್ರ ಅಪಾರ ಕಾರ್ಯಕ್ರಮಗಳು ಜರುಗುವ ಮೂಲಕ ನಿತ್ಯವು ಜ್ಞಾನ ದಾಸೋಹವನ್ನೆ ಮೆರೆಯುತ್ತಿವೆ.

ಇಷ್ಟು ಮಾತ್ರವಲ್ಲದೆ, ಸಂಘಕ್ಕೆ ಭೇಟಿ ನೀಡಿದ ಸಾಮಾನ್ಯರಿಗೆ, ಗಣ್ಯರಿಗೆ ಅತಿಥಿ ಮಹೋದಯರಿಗೆಲ್ಲ ಅನ್ನದಾಸೋಹವು ವಿಧಾನಪರಿಷತ್ ಮಾಜಿ ಸದಸ್ಯರಾದ ಬಿ.ರಾಮಕೃಷ್ಣ ಮೂಲಕ ಜರುಗಲು ಜೆಪಿಯ ಕ್ರಿಯಾಶೀಲತೆ ಕಾರಣ.


ನಿವೃತ್ತಿ ನಂತರದಲ್ಲಿ ಬರಹ ಕ್ಷೇತ್ರಕ್ಕೂ ಪ್ರವೇಶಿಸಿದ ಜೆಪಿ ಹಲವಾರು ಗ್ರಂಥಗಳಿಗೆ ಪ್ರಧಾನ ಸಂಪಾದಕರಾಗಿರುವುದಲ್ಲದೆ. ನನ್ನೊಳಗಿನ ಗಣ್ಯರು ವ್ಯಕ್ತಿಚಿತ್ರಗಳು, ಅಂತರಂಗದ ಹನಿ, ಅಂತರಂಗದ ಅಭಿವ್ಯಕ್ತಿಗಳನ್ನು ರಚಿಸಿದ್ದಾರೆ. ಜೆಪಿಯ ಬರಹಗಳು ಪೂರ್ಣದೃಷ್ಟಿ ಮತ್ತು ಸರ್ವೋದಯ, ಸಮನ್ವಯತೆಯ ಜೊತೆಗೆ ವಿಶ್ವಮಾನವತೆಯ ಆಶಯವನ್ನು ಒಳಗೊಂಡ ರಚನೆ. ಆದ್ದರಿಂದ ಗಣ್ಯರ ಪಟ್ಟಿಯಲ್ಲಿ ಪ್ರಸಿದ್ಧರ ಜೊತೆಗೆ, ನೆರವಾದ ನಗಣ್ಯರನ್ನು ಸೇರಿಸಿರುವುದು ವಿಶೇಷ. ಕರ್ನಾಟಕ ಸಂಘದಲ್ಲಿ ಅಟೆಂಡರ್‌ರಾಗಿ ಕೆಲಸ ಮಾಡುವ ಹುಡುಗನಿಗೂ ಇಲ್ಲಿ ಸ್ಥಾನ ಕೊಟ್ಟಿರುವುದು ಜೆಪಿಯವರ ಸಮಾಜವಾದಿ ಚಿಂತನೆಗೆ ಸಾಕ್ಷಿ. ಕೆ.ವಿ ಶಂಕರಗೌಡರ ಒಡನಾಟವನ್ನು ಕುರಿತು 'ಉದಾರಚರಿತ' ಸಾಹಿತ್ಯ ಲೋಕದಲ್ಲಿ ಒಂದು ವಿಶಿಷ್ಟ ಕಲಾಕೃತಿ. ಆತ್ಮಕಥನ ಹೋರಾಟದ ಹೆಜ್ಜೆಗಳು ಕೃತಿಯು ಸಂಘಟನಾ ತಪಸ್ವಿಯೋರ್ವನ ಬದುಕಿನ ಸಂಘರ್ಷವನ್ನು ಸಶಕ್ತವಾಗಿ ನಿರೂಪಿಸುವ ಕೃತಿ.

ಆರೋಗ್ಯಕರವಾದ ವಾಗ್ವಾದಗಳನ್ನು ನಿರಂತರವಾಗಿ ಹುಟ್ಟುಹಾಕುತ್ತಾ, ಮನುಷ್ಯ ಪ್ರೀತಿ ತೋರುವ ತಾಯಿ ಗುಣವನ್ನು ಜೆಪಿ ಜತನದಿಂದಲೇ ಕಾಪಾಡಿಕೊಂಡವರು. ಸ್ವಪ್ರತಿಷ್ಠೆ ಇಲ್ಲದೆ ನೇರವಾಗಿ ಇರುವುದು, ಸಭೆಗಳಲ್ಲಿ ಮತ್ತೊಬ್ಬರು ಮಾತಾಡುವುದನ್ನು ಸಹನೆಯಿಂದ ಕೇಳಿಸಿಕೊಳ್ಳುವುದು ತಮ್ಮ ಭಿನ್ನಾಭಿಪ್ರಾಯವನ್ನು ಮುಲಾಜಿಲ್ಲದೆ ತೀಕ್ಷ್ಣವಾಗಿ ಖಚಿತವಾಗಿ ಮಂಡಿಸುವುದು ಜೆಪಿ ಅವರ ವ್ಯಕ್ತಿತ್ವದ ವಿಶಿಷ್ಟ ಗುಣಗಳು. ಇದು ಅವರ ಸಂಪರ್ಕಕ್ಕೆ ಬಂದವರಿಗೆಲ್ಲ ಅನುಭವಕ್ಕೆ ಬರುವ ಸಂಗತಿಗಳು ಕೂಡ. ಇಷ್ಟು ಮಾತ್ರವಲ್ಲದೆ ಮಹಿಳಾ ಹಿತಚಿಂತನೆಯನ್ನು ಹೊಂದಿರುವ ಜೆಪಿ. 'ಕರ್ನಾಟಕ ಸಂಘದ ಮಹಿಳಾ ಘಟಕ'ವನ್ನು ಪ್ರಾರಂಭಿಸಿ ಹೊಸದಿಗಂತವನ್ನು ಸೃಷ್ಟಿಸಿ ತನ್ಮೂಲಕ ಮಹಿಳಾ ಸ್ವಾತಂತ್ರ್ಯ ಸಬಲೀಕರಣ, ಮಹಿಳಾ ಅಸ್ಮಿತೆಗೆ ಕಾರಣರಾಗಿದ್ದಾರೆ. ಈ ಎಲ್ಲದರ ಹಿನ್ನಲೆಯಲ್ಲಿ ಪ್ರಸ್ತುತ 'ರಂಗಾಭಿನಂದನಾ' ಅಭಿನಂದನಾ ಗ್ರಂಥ ಲೋಕಾರ್ಪಣೆಗೊಳ್ಳುತ್ತಿದೆ. ಜೆಪಿ ಅವರ ಬದುಕು ಮತ್ತು ಬರಹಗಳನ್ನು ಒಳಗೊಂಡಿರುವುದರ ಜೊತೆಗೆ ರಂಗಭೂಮಿ ಬಗ್ಗೆ ಅಧಿಕೃತವಾದ ಪರಾಮರ್ಶನದ ಹೊತ್ತಿಗೆಯಾಗಿ ಹೊರಬರುತ್ತಿದೆ. ಈ ಎಲ್ಲ ಕಾರಣದಿಂದಲೇ ಜೆಪಿಯನ್ನು ಸಂಘಟನೆಯ ಕ್ರಿಯಾ ತಪಸ್ವಿ ಎಂದಿರುವುದು.


ಮಕ್ಕಳ ಚಿತ್ರಕಥೆ

ಮತ್ತೆ ನಾವುಗಳು ಸಿಗುವುದು ಎಲ್ಲಿ....?


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199



ಒಮ್ಮೆ 'ಜ್ಞಾನ', 'ಹಣ', 'ವಿಶ್ವಾಸ' ಈ ಮೂವರೂ ಆತ್ಮೀಯ ಸ್ನೇಹಿತರಾಗಿದ್ದರು.



ಒಂದು ದಿನ, ಯಾವುದೋ ಕಾರಣದಿಂದಾಗಿ ಅವರೆಲ್ಲಾ ದೂರವಾಗಬೇಕಾಗಿಬಂತು.




ಆಗ ಸ್ನೇಹಿತರು ಮತ್ತೆ 'ನಾವುಗಳು ಸಿಗುವುದು ಎಲ್ಲಿ....?' ಎಂದು ಪರಸ್ಪರ ಪ್ರಶ್ನೆ ಕೇಳಿಕೊಂಡರು.



ಆಗ ಜ್ಞಾನ, 'ನಾನು ಮಂದಿರ–ಮಸೀದಿ–ಚರ್ಚು ಮತ್ತು ಪುಸ್ತಕಗಳಲ್ಲಿ ಸಿಗುತ್ತೇನೆ' ಎಂದಿತು.



ಹಣ, 'ನಾನು ಶ್ರೀಮಂತರ ಬಳಿ ಸಿಗುತ್ತೇನೆ...!' ಎಂದಿತು.



ಆದರೆ "ವಿಶ್ವಾಸ" ಮಾತ್ರ ಮೌನವಾಗಿತ್ತು. ಆಗ "ಜ್ಞಾನ" ಮತ್ತು "ಹಣ", ನೀನೇಕೆ ಮೌನವಾಗಿರುವೆ..? ಎಂದು ಪ್ರಶ್ನಿಸಿದವು. ಆಗ "ವಿಶ್ವಾಸ" ಕಣ್ಣೀರು ಹಾಕುತ್ತಾ, "ನಾನು ಒಂದು ಸಲ ಹೋದರೆ ಮತ್ತೆ ಸಿಗುವುದಿಲ್ಲ...!" ಎಂದು ಹೇಳಿಬಿಟ್ಟಿತು.

ನೀತಿ: ಸ್ನೇಹಿತರೆ, ಈ ಒಂದು ಸಣ್ಣ ಕಥೆ ನಮಗೆ ದೊಡ್ಡ ನೀತಿ ಹೇಳುತ್ತದೆ. "ಜ್ಞಾನ" ಮತ್ತು "ಹಣ"ವನ್ನ ನಾವು ಯಾವಾಗ ಬೇಕಾದರೂ ಗಳಿಸಬಹುದು. ಆದರೆ, "ವಿಶ್ವಾಸ" ಎನ್ನುವುದು ಒಂದು ಸಲ ಕಳೆದು ಹೋದರೆ ಮತ್ತೆ ಅದನ್ನು ಗಳಿಸುವುದು ತುಂಬಾ ಕಷ್ಟವಾಗುತ್ತದೆ.



ವಾರಭವಿಷ್ಯ

11.02.2024 ರಿಂದ 17.02.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಕರ, ಕುಂಭ, ಚಂದ್ರ–ಕಟಕ, ಸಿಂಹ, ಕನ್ಯಾ, ಕುಜ–ಮಿಥುನ, ಬುಧ–ಕುಂಭ, ಗುರು–ಮೇಷ, ಶುಕ್ರ–ಮೀನ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಜೀವನದಲ್ಲಿ ಎಲ್ಲವೂ ಸಿಗುವುದಿಲ್ಲ. ಹಾಗೆಂದು ಪ್ರಯತ್ನ ನಿಲ್ಲಿಸಲಾಗದು. ಸಾಧ್ಯವಾಗಲು ಅಶಕ್ಯವಾದ ಒಪ್ಪಂದಗಳನ್ನು ಮಾಡಿಕೊಳ್ಳಬೇಡಿ. ಸಿಮೆಂಟ್, ಕಬ್ಬಿಣ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಾಗಿ ಕೈತುಂಬಾ ಲಾಭವಾಗುವುದು. ಕಪ್ಪು ಧಾನ್ಯಗಳು ಹೆಚ್ಚು ಫಲಿಸುವುದರಿಂದ ರೈತರಿಗೆ ಹರುಷ. ತಂದೆ–ತಾಯಿಯರ ಸೇವೆಯಿಂದ ಜೀವನ ಹಸನಾಗುವುದು.

ಶ್ರೀ ವಿಘ್ನೇಶ್ವರ ದರ್ಶನ. ಶುಭ ಸಂಖ್ಯೆ–8

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಒಳ್ಳೆಯ ಕೆಲಸ ಮಾಡಲು ಪ್ರಶಸ್ತ ಸಮಯ ಅಂತ ಇರುವುದಿಲ್ಲ. ಚಂದ್ರ ಬಲದಿಂದ ನಿಮ್ಮ ಮಾನ ಸನ್ಮಾನಗಳಲ್ಲಿ ವೃದ್ಧಿಯಾಗುವುದು. ಹಣಕಾಸು ಆದಾಯ ತೃಪ್ತಿಕರವಾಗಿಯೇ ಇರುವುದು. ಆದರೆ ವನಿತಾಮಣಿಯ ಶಾಪಿಂಗ್ ಚಪಲದಿಂದ ನಿಮ್ಮ ಜೇಬು ಖಾಲಿ. ಗುರುಬಲವಿಲ್ಲದ ಕಾರಣ ಆತುರ ತೋರದೆ ಸರಳ ಮಾರ್ಗದಲ್ಲೇ ಕೆಲಸಗಳು ತಡವಾದರೂ ಶುಭ ಫಲವನ್ನೇ ನೀಡಲಿದೆ.

ಶ್ರೀ ಪದ್ಮಾವತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಕೆಲವೊಂದು ವೈಯಕ್ತಿಕ ವಿಷಯಗಳಲ್ಲಿ ಸಂಭ್ರಮಿಸುವ ಸಮಯ ಬಂದಿದೆ. ನಿವೇಶನ, ಮನೆ ಹೊಂದುವ ಆಶಯಕ್ಕೆ ಬ್ಯಾಂಕ್ ಸಹಾಯ ದೊರಕುವುದು. ಮನೆಯಲ್ಲಿ ಶಾಂತಿ ಸ್ಥಾಪಿಸಲು ನೆರೆಹೊರೆಯವರಲ್ಲಿ ಜಗಳ ಬೇಡ. ವಿದ್ಯಾರ್ಥಿಗಳಿಗೆ ಅವರ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು. ವಾರದ ಕಡೆಗೆ ಪುಣ್ಯಸ್ಥಳ ಭೇಟಿ. ಆರೋಗ್ಯದ ಬಗ್ಗೆ ಕಾಳಜಿ ಇರಲಿ.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–4

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಾನಾ ರೀತಿಯಲ್ಲಿ ಧನ ಸಂಗ್ರಹವಾಗುವುದು. ಹೊಸ ವಾಹನ ಖರೀದಿಯ ಯೋಗವಿದೆ. ಪರೋಪಕಾರ ಬುದ್ಧಿಯಿಂದ ಸಾಮಾಜಿಕ ಗೌರವ ಪ್ರಾಪ್ತಿ. ಉದ್ಯೋಗ ಹುಡುಕುವವರಿಗೆ ಯಥಾಸ್ಥಿತಿ ಮುಂದುವರಿಯಲಿದೆ. ಬೃಹತ್ ಉದ್ಯಮಿಗಳಿಗೆ ಕಾರ್ಮಿಕರ ಅಸಹಕಾರದಿಂದ ನಷ್ಟ ಸಂಭವ. ರೈತಾಪಿ ಜನರಿಗೆ ಕೃಷಿಯಲ್ಲಿ ಸಂತಸವಿಲ್ಲ. ಹಾಕಿದ ಬಂಡವಾಳಕ್ಕೆ ಸಂಚಕಾರವಾಗುವುದು.

ಶ್ರೀ ದುರ್ಗಾಪರಮೇಶ್ವರಿ ದರ್ಶನ. ಶುಭ ಸಂಖ್ಯೆ–3

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದಾರಂಭ ಚೆನ್ನಾಗಿದೆ. ಸುಖ, ಸಂತೋಷ, ಮನೋಭಿಷ್ಟ ಸಿದ್ಧಿ. ವಿಲಾಸಿ ವಸ್ತುಗಳನ್ನು ಪಡೆಯುವಿರಿ. ವಿವಾಹ ಸಂಬಂಧಿ ಮಾತುಗಳಲ್ಲಿ ಉಂಟಾಗಿದ್ದ ತಪ್ಪು ಕಲ್ಪನೆಗಳು ನಿವಾರಣೆಯಾಗುವುದು. ಶ್ರೀಮತಿಯೊಂದಿಗಿನ ಸಂಬಂಧಗಳು ಗಟ್ಟಿಯಾಗಲಿದೆ. ನಿಮ್ಮ ಕಚೇರಿ ಕೆಲಸಗಳನ್ನು ಬುದ್ಧಿವಂತಿಕೆಯಿಂದ ಮಾಡಿ. ಇತರರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವ ಮಂದಿ ಇದ್ದಾರೆ.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–1.

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ನಿಮ್ಮ ಕಾರ್ಯತಂತ್ರಗಳು ನೀವು ಏನನ್ನು ಮಾಡಲು ಬಯಸುತ್ತೀರೋ ಅದಕ್ಕೆ ಪೂರಕವಾಗಿಲ್ಲ. ಈ ವಾರದ ನಿಮ್ಮ ಬಜೆಟ್ ನಿಮ್ಮ ಆದಾಯ ಮೀರುವ ಸಾಧ್ಯತೆ ಇದೆ. ಉದ್ಯೋಗಕ್ಕೆ ಆಹ್ವಾನ ಬರಬಹುದು. ನಿಮ್ಮ ರೆಸ್ಯೂಮ್ ಅಪ್‌ಡೇಟ್ ಮಾಡಿಕೊಳ್ಳಿ. ಕುಟುಂಬ ಸದಸ್ಯರೊಡನೆಯೂ ನೆರೆಹೊರೆಯಲ್ಲೂ ಸ್ನೇಹಮಯದಿಂದಿರಲು ಪ್ರಯತ್ನಿಸಿ. ವಾಹನ ಕ್ಷೇಮವಾಗಿ ಚಲಿಸಿ, ಇತರರೂ ಕ್ಷೇಮವಾಗಿರಲಿ.

ಶ್ರೀ ವಿಷ್ಣುಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಇಷ್ಟಕಾರ್ಯ ಸಿದ್ಧಿಯೊಂದಿಗೆ ಧನ ಪ್ರಾಪ್ತಿಯೂ ಉಂಟು. ಬಂಗಾರ, ರಜತ, ಮುತ್ತು ವ್ಯಾಪಾರಿಗಳಿಗೆ ಉತ್ತಮ ರೀತಿಯಲ್ಲಿ ವ್ಯಾಪಾರವಾಗುವುದು. ವಿವಾಹ ಯೋಗ್ಯರಿಗೆ ಸೂಕ್ತ ಸಂಬಂಧಗಳು ಕೂಡಿ ಬರುವ ಸಂಭವವಿದೆ. ಐಹಿಕ ಸುಖ ಭೋಗಗಳನ್ನು ಚೆನ್ನಾಗಿ ಅನುಭವಿಸುವಿರಿ. ಕೃಷಿಕರಿಗೆ ಉತ್ತಮ ಬೆಳೆಯೂ, ಬೆಲೆಯೂ ದೊರಕುವುದು. ಸಾರಾಸಗಟಾಗಿ ಎಲ್ಲರನ್ನೂ ನಂಬದಿರಿ.

ಶ್ರೀದೇವೀ ಆರಾಧನೆ. ಶುಭ ಸಂಖ್ಯೆ–7

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ಹಣಕಾಸಿನ ಪರಿಸ್ಥಿತಿ ಯಥಾಸ್ಥಿತಿ ಮುಂದುವರೆದರೂ ನಿಮ್ಮ ಆಸೆ ಆಕಾಂಕ್ಷೆಗಳು ಈಡೇರುತ್ತವೆ. ಸೃಜನಶೀಲ ಕೆಲಸಗಳಲ್ಲಿ ತೊಡಗಿರುವವರಿಗೆ ಗೌರವ ಪ್ರಶಸ್ತಿಗಳು ದೊರೆಯಲಿದೆ. ವಾರಮಧ್ಯೆ ಉತ್ತಮ ಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ಹತ್ತಿರದ ಸಂಬಂಧಿಗಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ಆತುರದ ನಿರ್ಧಾರಗಳಿಂದ ಆರ್ಥಿಕ ನಷ್ಟವನ್ನು ಅನುಭವಿಸಬೇಕಾದೀತು.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ಪರೋಪಕಾರ ಕಾರ್ಯಗಳಲ್ಲಿ ಆಸಕ್ತಿ ತೋರುವಿರಿ. ವಿವಿಧ ರೀತಿಯಿಂದ ಧನಲಾಭ, ಶರೀರ ಸೌಖ್ಯವೂ ದೊರೆಯಲಿದೆ. ನೂತನ ವಾಹನ ಹೊಂದುವ ಆಸೆ ಈಡೇರಬಹುದು. ಸಜ್ಜನರ ಸಹವಾಸದಲ್ಲಿ ಬೆರೆಯುವುದರಿಂದ ಆಪತ್ತುಗಳಿಂದ ಪಾರಾಗುವಿರಿ. ಯಾವುದೇ ದಸ್ತಾವೇಜುಗಳಿಗೆ ಸಹಿ ಮಾಡುವಾಗ ಎಚ್ಚರವಿರಲಿ. ಪಿತ್ತ ಜನಿತ ಕಾಯಿಲೆ ಕಾಡಬಹುದು.

ಶ್ರೀ ಗುರುಪ್ರಾರ್ಥನೆ. ಶುಭ ಸಂಖ್ಯೆ–5

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಜೀವನದಲ್ಲಿ ಯಶಸ್ಸು ಸಾಧಿಸಲು ಶಿಸ್ತು ಪಾಲಿಸುವ ಜೊತೆಗೆ ನಿಮ್ಮ ನಕಾರಾತ್ಮಕ ಭಾವನೆಗಳನ್ನು ಬದಲಿಸಿಕೊಳ್ಳಿ. ಕುಟುಂಬ ಜನರ ಹಿತಾಸಕ್ತಿ ಬಗ್ಗೆ ಕಾಳಜಿ ಇರಲಿ. 'ಮನೆಗೆ ಮಾರಿ ಪರರಿಗೆ ಉಪಕಾರಿ' ಆಗದಿರಿ. ಆಸ್ತಿ ಸಂಬಂಧಿ ವಿಷಯಗಳಲ್ಲಿ ಕಾನೂನು ಸಲಹೆ ಪಡೆಯಲು ವಕೀಲರ ಭೇಟಿ ಮಾಡಬೇಕಾದೀತು. ಜಂಕ್ ಫುಡ್ ಸೇವನೆಯಿಂದ ಆರೋಗ್ಯ ಕೆಡುವುದು.

ಓಂ ನಮೋ ನಾರಾಯಣಾಯ ಮಂತ್ರ ಜಪಿಸಿ. ಶುಭ ಸಂಖ್ಯೆ–1

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಹೊಸ ಹಣಕಾಸಿನ ಹೂಡಿಕೆಗಳನ್ನು ತೀವ್ರ ಎಚ್ಚರಿಕೆಯಿಂದ ಮಾಡಬೇಕಾದೀತು. ಹೆಚ್ಚಿನ ರೀತಿಯಲ್ಲಿ ವರಮಾನವಿದ್ದರೂ ಅನಗತ್ಯ ಖರ್ಚುಗಳಿಂದ ಜೇಬು ಮಾತ್ರ ಖಾಲಿ. ರಾಜಕೀಯ ಮಹತ್ವಾಕಾಂಕ್ಷಿಗಳಿಗೆ ಕಾಣದ ಕೈಗಳಿಂದ ಅಡಚಣೆ ಉಂಟಾಗುತ್ತದೆ. ದೀರ್ಘ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಸರ್ಕಾರಕ್ಕೆ ದಂಡ ತೆರಬೇಕಾದ ನಿರ್ಮಾಣವಾಗಲು ನೀವೇ ಕಾರಣಕರ್ತರಾಗುವಿರಿ.

ಶ್ರೀ ಕುಲದೇವತಾ ದರ್ಶನ. ಶುಭ ಸಂಖ್ಯೆ–4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಗುರುಗ್ರಹದ ಅನುಗ್ರಹವಿದೆ. ನೀವು ಬಹಳಷ್ಟು ಸಾಧಿಸುವ ಸಾಮರ್ಥ್ಯ ಹೊಂದಿದ್ದೀರಿ. ಬರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ. ಷೇರು ಹೂಡಿಕೆಗಳಲ್ಲಿ ಲಾಭವನ್ನು ಹೊಂದುವಿರಿ. ನೀವು ದೀರ್ಘ ಕಾಲದಿಂದ ತೊಡಗಿಕೊಂಡಿರುವ ಪ್ರಮುಖ ಪ್ರಾಜೆಕ್ಟ್ ತಡವಾಗಿಯಾದರೂ ಲಾಭವನ್ನು ತರಲಿದೆ. ಶಿಕ್ಷಕರಿಗೆ, ಅಧ್ಯಾಪಕರಿಗೆ ಗೌರವ ಪ್ರಶಸ್ತಿಗಳು ದೊರೆಯಬಹುದು.

ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ–2

ಸರ್ಕಾರ ಮಾಡಲಾಗದ ಕೆಲಸವನ್ನು ಮಠ ಮಾನ್ಯಗಳು ಮಾಡುತ್ತಿವೆ

ಸುತ್ತೂರಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶ್ಲಾಘನೆ

ನಂಜನಗೂಡು, ಫೆ.10– ಸರ್ಕಾರ ಮಾಡಲಾಗದ ಕೆಲಸವನ್ನು ರಾಜ್ಯದಲ್ಲಿ ಮಠಮಾನ್ಯಗಳು ಮಾಡುವ ಮೂಲಕ ರಾಜ್ಯಕ್ಕೆ ಭದ್ರ ಬುನಾದಿ ಹಾಕಿವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳ ಮತ್ತು ವಸ್ತು ಪ್ರದರ್ಶನ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಂಸ್ಕೃತಿ ದೇಶದ ದೊಡ್ಡ ಆಸ್ತಿಯಾಗಿದ್ದು, ಪ್ರಸ್ತುತ ಇಡೀ ಪ್ರಪಂಚವೇ ಭಾರತದ ಸಂಸ್ಕೃತಿಯತ್ತ ಮುಖ ಮಾಡಿ ನಮ್ಮ ಆಚಾರ, ವಿಚಾರ, ಧರ್ಮಗಳನ್ನು ಒಪ್ಪಿಕೊಳ್ಳುತ್ತಿವೆ. ಮನುಷ್ಯ ನೆಮ್ಮದಿಯಾಗಿರಲು ಧರ್ಮವನ್ನು ಸಂರಕ್ಷಿಸಬೇಕು. ಕೃಷಿಕ, ಸೈನಿಕ, ಕಾರ್ಮಿಕ, ಶಿಕ್ಷಕ ದೇಶದ ಆಧಾರಸ್ಥಂಭಗಳಾಗಿದ್ದು, ಎಲ್ಲಾ ವರ್ಗದ ಜನರಿಗೂ ಜ್ಞಾನ ನೀಡುವ ಕೆಲಸವನ್ನು ಮಾಠಮಾನ್ಯಗಳು ಮಾಡುತ್ತಿವೆ. ಮಠಗಳು ಜಾತಿ, ಧರ್ಮ ಲೆಕ್ಕ ಹಾಕುವುದಿಲ್ಲ. ಎಲ್ಲರನ್ನು ಸರಿ ಸಮಾನವಾಗಿ ನೋಡುವ ಪದ್ಧತಿ ರೂಢಿಸಿಕೊಂಡಿವೆ. ರಾಜಕಾರಣಿಗಳು ಕೂಡ ಅಸೆಂಬ್ಲಿಯಲ್ಲಿ ಒಂದಾಗುವುದು ಬಿಟ್ಟರೆ ಇಂತಹ ಧಾರ್ಮಿಕ ಕ್ಷೇತ್ರದಲ್ಲಿ ಒಂದಾಗುತ್ತೇವೆ. ಮೈಸೂರು ಅರಸರು ಅರಮನೆ ಕಟ್ಟಿದರೆ, ಸುತ್ತೂರು ಶ್ರೀಗಳು ಗ್ರಾಮೀಣ ಜನರಲ್ಲಿ ಅರಿವಿನ ಮನೆ ಕಟ್ಟಿದ್ದಾರೆ. ಜೊತೆಗೆ ದೇಸಿ ಆಟಗಳನ್ನು ಉತ್ತೇಜಿಸುವ ಜೊತೆಗೆ ಎಲ್ಲಾ ವರ್ಗದವರ ನಡುವೆ ಮಾನವೀಯ ಸೇತುವೆ ಕಟ್ಟಿದಾರೆ. ಸುತ್ತೂರು ಮಠ ಸಾಮಾನ್ಯ ಮಠವಲ್ಲ. ಭಕ್ತಿ ಕೇಂದ್ರ ಎಂದು ಪ್ರಶಂಸೆ ವ್ಯಕ್ತಪಡಿಸಿದರು.



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡುತ್ತಿರುವುದು.

ಈ ಹಿಂದೆ ಮೇಕೆದಾಟು ಹೋರಾಟ ಕೈಗೊಳ್ಳುವ ಮುನ್ನ ಸುತ್ತೂರು ಶ್ರೀಗಳ ಆಶೀರ್ವಾದ ಪಡೆಯಲು ಬಂದಿದ್ದಾಗ ಸಾವಿರಾರು ವಿದ್ಯಾರ್ಥಿಗಳು ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಹೋರಾಟಕ್ಕೆ ಚೈತನ್ಯ ತುಂಬಿದ್ದರು. ಮೇಕೆದಾಟು ಅಣೆಕಟ್ಟು ನಿರ್ಮಿಸುವುದರಿಂದ ರಾಜ್ಯದ ಹಲವು ಪ್ರದೇಶಗಳಿಗೆ ಅನುಕೂಲ ಆಗಲಿದೆ. ಈ ನಿಟ್ಟಿನಲ್ಲಿ ಮೇಕೆದಾಟು ಯೋಜನೆ ಕಾರ್ಯಗತಗೊಳಿಸಲು ಬದ್ಧನಾಗಿದ್ದೇನೆ ಎಂದು ತಿಳಿಸಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಸುತ್ತೂರುಶ್ರೀಗಳ ಆಶೀರ್ವಾದದಿಂದ ಮೊದಲ ಬಾರಿಗೆ ಶಾಸಕನಾಗಿದ್ದೇನೆ. ಈ ಜಾತ್ರೆ ನನಗೆ ಮೊದಲ ಜಾತ್ರೆಯಾಗಿದೆ. ಸುತ್ತೂರು ಮಠವು ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಸಮಾಜಕ್ಕೆ ಅಪಾರ ಕೊಡುಗೆ ನೀಡುತ್ತಿದೆ ಎಂದು ಶ್ಲಾಘಿಸಿದರು.

ಈ ವೇಳೆ ಸುತ್ತೂರು ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ದಿವ್ಯ ಜ್ಯೋತಿ ಜಾಗೃತಿ ಸಂಸ್ಥಾನದ ಸಾಧ್ವಿ ಉನ್ಮೇಷ ಭಾರತೀ ಮಾತಾಜೀ ದಿವ್ಯ ಸಾನಿಧ್ಯ ವಹಿಸಿದ್ದರು. ಸಭೆಯಲ್ಲಿ ಮಾಜಿ ಸಚಿವ ಸಿ.ಟಿ.ರವಿ, ಶಾಸಕ ಗಣೇಶ್ ಪ್ರಸಾದ್, ಶಾಸಕಿ ನಯನ ಮೋಟಮ್ಮ, ಮಹೇಶ್ ಮುದ್ದ, ಕೆ.ಆರ್. ಮೋಹನ್ ಕುಮಾರ್, ಮೈಮುಲ್ ಅಧ್ಯಕ್ಷ ಪ್ರಸನ್ನ ಕುಮಾರ್ ಸೇರಿದಂತೆ ಹಲವರಿದ್ದರು.

> ಸುತ್ತೂರು ಮಠ ಬಸವಣ್ಣನವರ ತತ್ವ ಪಾಲಿಸುತ್ತಿದೆ. ಅಲ್ಲದೆ ಜಾತ್ರಾ ಮಹೋತ್ಸವದ ಮೂಲಕ ಪ್ರತಿಯೊಂದು ಕ್ಷೇತ್ರದ ಜನರಿಗೆ ಜ್ಞಾನ, ಪ್ರಶಸ್ತಿ ನೀಡಿ ಉತ್ತೇಜಿಸುತ್ತಿರುವ ಕಾರ್ಯ ಶ್ಲಾಘನೀಯ. ಸರ್ಕಾರ ಮಾಡುವ ಕೆಲಸವನ್ನು ಇಂತಹ ಮಠ ಮಾನ್ಯಗಳು ನಿಸ್ವಾರ್ಥದಿಂದ ಮಾಡುತ್ತಿರುವ ಕಾರಣ ದೇಶದ ಸಂಸ್ಕೃತಿ ಇಡೀ ವಿಶ್ವದಲ್ಲೇ ಶ್ರೀಮಂತಗೊಂಡಿದೆ. ಸುತ್ತೂರು ಜಾತ್ರೆ ಮೂಲಕ ಜನರಲ್ಲಿ ಅರಿವಿನ ಬುತ್ತಿ ಕಟ್ಟಿಕೊಡುವ ಮೂಲಕ ಜಾಗೃತ ಸಮಾಜ ನಿರ್ಮಾಣಕ್ಕೆ ಸದಾ ಶ್ರಮಿಸುತ್ತಿರುವುದು ಹೆಮ್ಮೆಯ ವಿಚಾರ.
>
> **- ಲಕ್ಷ್ಮಿ ಹೆಬ್ಬಾಳ್ಕರ್,** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಈಗಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಸ್ಟ್ ಪಾಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಲಾಲ್ ಸಲಾಂ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಈಗಲ್ (ತೆ)	4 ಪ್ರದರ್ಶನಗಳು
ಪ್ರಭಾ	
ಪ್ರಣಯಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
DRC CINEMAS
ದೂ : 4240422/4241800

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.10ಕ್ಕೆ, ಈಗಲ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಪ್ರಣಯಂ (ಕ): ಬೆ.10.30ಕ್ಕೆ, ಜಸ್ಟ್ ಪಾಸ್ (ಕ): ಮ.1.20ಕ್ಕೆ, ಫೈಟರ್ (ಹಿಂ): ಸಂ.4ಕ್ಕೆ, ಪ್ರೇಮಲು (ಮ): ರಾ.7.15ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.10.40ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಲವ್ವರ್ (ತ): ಮ.1.20ಕ್ಕೆ, ಉಪಾಧ್ಯಕ್ಷ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.10ಕ್ಕೆ, ರಾ.7.10ಕ್ಕೆ, ಲಾಲ್ ಸಲಾಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯಾತ್ರಾ 2 (ತೆ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಲಾಲ್ ಸಲಾಂ (ತ): ಬೆ.9.40ಕ್ಕೆ, ಸಂ.4.05ಕ್ಕೆ, ಉಪಾಧ್ಯಕ್ಷ (ಕ): ಮ.12.50ಕ್ಕೆ, ರಾ.7.15ಕ್ಕೆ, ಈಗಲ್ (ತೆ): ರಾ.10.30ಕ್ಕೆ.
ಸ್ಕ್ರೀನ್ 3	ಒಂದು ಸರಳ ಪ್ರೇಮಕಥೆ (ಕ): ಬೆ.11.15ಕ್ಕೆ, ಈಗಲ್ (ತೆ): ಮ.2.25ಕ್ಕೆ, ಲವ್ವರ್ (ತ): ಸಂ.6.25ಕ್ಕೆ, ಲಾಲ್ ಸಲಾಂ (ತ): ರಾ.9.30ಕ್ಕೆ.
ಸ್ಕ್ರೀನ್ 4	ಫೈಟರ್ (ಹಿಂ): ಮ.12.05ಕ್ಕೆ, ಉಪಾಧ್ಯಕ್ಷ (ಕ): ಮ.3.35ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.50ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ & 3ಡಿ)(ಹಿಂ): ಬೆ.11.15ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ಬೆ.11.50ಕ್ಕೆ, ಮ.3ಕ್ಕೆ, ಸಂ.6.20ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.9.30ಕ್ಕೆ, ಜಸ್ಟ್ ಪಾಸ್ (ಕ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.2.55ಕ್ಕೆ, ರಾ.10.25ಕ್ಕೆ, ಲವ್ವರ್ (ತ): ಮ.12.15ಕ್ಕೆ, ಸಂ.6.40ಕ್ಕೆ, ಈಗಲ್ (ತೆ): ಮ.3.20ಕ್ಕೆ, ರಾ.9.45ಕ್ಕೆ, ಲಾಲ್ ಸಲಾಂ (ತ): ಬೆ.11.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಫೆ.14ಕ್ಕೆ, ಚೌಡೇಶ್ವರಿ ಪೂಜಾ ಮಹೋತ್ಸವ

ಕಂಪಲಾಪುರ, ಫೆ.10– ಗ್ರಾಮದ ಶ್ರೀರಾಮಲಿಂಗ ಚೌಡೇಶ್ವರಿ ದೇವಸ್ಥಾನದ 16ನೇ ವರ್ಷದ ಪೂಜಾ ಮಹೋತ್ಸವ ಫೆ.14 ರಂದು ನಡೆಯಲಿದೆ ಎಂದು ದೇವಾಂಗ ಸಂಘದ ಪ್ರಕಟಣೆ ತಿಳಿಸಿದೆ.

ಫೆ.13ರ ಸಂಜೆಯಿಂದಲೇ ಪೂಜಾ ವಿಧಿ ವಿಧಾನಗಳು ಪ್ರಾರಂಭವಾಗಲಿದ್ದು, ಫೆ14ರಂದು ಬೆಳಗ್ಗೆ 6 ಗಂಟೆಗೆ ಕಳಸ ತರುವುದು, 8.30ಕ್ಕೆ ಗಣಪತಿ ಹೋಮ, ಮೃತ್ಯುಂಜಯ ಹೋಮ, 11 ಗಂಟೆಗೆ ದುರ್ಗಾ ಹೋಮ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, 1 ಗಂಟೆಗೆ ಶ್ರೀನಾಗ ವಿದ್ಯಾ ಸಂಸ್ಥೆ ಆವರಣದಲ್ಲಿ ಅನ್ನ ಸಂತರ್ಪಣೆ, ಸಂಜೆ 6 ಗಂಟೆಗೆ ಗ್ರಾಮದಲ್ಲಿ ದೇವಿ ಉತ್ಸವ ಮೂರ್ತಿ ಮೆರವಣಿಗೆ ನಡೆಯಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿ ಕೃಪೆಗೆ ಪಾತ್ರರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ಬಾಲಿವುಡ್ ನಟ ಮಿಥುನ್ ಚಕ್ರವರ್ತಿ ಆಸ್ಪತ್ರೆಗೆ ದಾಖಲು

ಕೋಲ್ಕತಾ: ಬಾಲಿವುಡ್‌ನ ಹಿರಿಯ ನಟ ಮಿಥುನ್ ಚಕ್ರವರ್ತಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂಬ ಮಾಹಿತಿ ಬಂದಿದೆ. ಅವರು ಎದೆ ನೋವಿನಿಂದ ಆಸ್ಪತ್ರೆಗೆ ದಾಖಲು ಆಗಿದ್ದಾರೆ ಎನ್ನಲಾಗಿದೆ. 73 ವರ್ಷದ ಹಿರಿಯ ನಟ ಮಿಥುನ್ ಚಕ್ರವರ್ತಿ ಅವರಿಗೆ ತೀವ್ರ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ.



16 ಜೂನ್ 1950ರಂದು ಜನಿಸಿರುವ ನಟ ಮಿಥುನ್ ಚಕ್ರವರ್ತಿ ಅವರು ಹಿಂದಿ ಚಿತ್ರರಂಗದಲ್ಲಿ ಹಲವಾರು ಸಿನಿಮಾಗಳಲ್ಲಿ ನಟಿಸಿದ್ದಾರೆ. ನಟಿ ಶ್ರೀದೇವಿ, ಮೀನಾಕ್ಷಿ ಶೇಷಾದ್ರಿ, ಜಯಪ್ರದಾ ಸೇರಿದಂತೆ ಅಂದಿನ ಕಾಲದ ಬಹುತೇಕ ಎಲ್ಲಾ ಸ್ಟಾರ್ ನಟಿಯರೊಂದಿಗೆ ನಟ ಮಿಥುನ್ ಚಕ್ರವರ್ತಿ ನಟಿಸಿದ್ದಾರೆ.

ಅರಣ್ಯ, ಪರಿಸರ ಸಂರಕ್ಷಣೆಯಿಂದ ತಾಪಮಾನ ನಿಯಂತ್ರಣ

ಸುತ್ತೂರು ಜಾತ್ರೆಯಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ

ನಂಜನಗೂಡು, ಫೆ.10– ಹವಾಮಾನ ಬದಲಾವಣೆಯಿಂದ ಹೆಚ್ಚಾಗುತ್ತಿರುವ ತಾಪಮಾನ ನಿಯಂತ್ರಿಸುವುದು ದೊಡ್ಡ ಸವಾಲಾಗಿದೆ. ಆದರೆ ಅರಣ್ಯ, ಪರಿಸರ ಸಂರಕ್ಷಣೆ ಮೂಲಕ ತಾಪಮಾನ ನಿಯಂತ್ರಿಸಬಹುದು. ಈ ನಿಟ್ಟಿನಲ್ಲಿ ಪ್ರಸಕ್ತ ವರ್ಷ 5 ಕೋಟಿ ಸಸಿಗಳನ್ನು ನೆಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ತಿಳಿಸಿದರು.

ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಸಾಂಸ್ಕೃತಿಕ ಮೇಳ, ಭಜನಾ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಪೂರ್ವಜರು ಗಿಡ ಮರಗಳನ್ನು ಪೂಜಿಸುವ ಮೂಲಕ ವನ ಮಹೋತ್ಸವ ಆಚರಿಸುತ್ತಿದ್ದರು. ಆದರೆ ಪ್ರಸ್ತುತ ಅರಣ್ಯ ನಾಶ, ಅರಣ್ಯ ಒತ್ತುವರಿಯಿಂದ ಕಾಡು ಕಡಿಮೆಯಾಗಿ, ಕಾಡು ಪ್ರಾಣಿಗಳ ಸಂಖ್ಯೆ ಹೆಚ್ಚಾಗಿ ನಗರದ ಕಡೆಗೆ ಬರುತ್ತಿವೆ. ಇದರಿಂದ ಮಾನವ ಪ್ರಾಣಿ ಸಂಘರ್ಷ ಹೆಚ್ಚಾಗುತ್ತಿರುವ ಕಾರಣ ಮಾನವ ಜೀವ ಹಾನಿ ಜೊತೆಗೆ ಅಮೂಲ್ಯ ಪ್ರಾಣಿಗಳಿಗೂ ಹಾನಿಯಾಗುತ್ತಿದೆ. ಮಾನವ ಪ್ರಾಣಿ ಸಂಘರ್ಷ ತಪ್ಪಿಸಲು ಅರಣ್ಯ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದರು.



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಮಾತನಾಡುತ್ತಿರುವುದು

ಪ್ರಕೃತಿ ವಿಕೋಪದಿಂದ ಬೆಳೆ ನಷ್ಟ, ಮಳೆ ಕೊರತೆ, ಸುನಾಮಿಯಂತಹ ಅನೇಕ ಸಮಸ್ಯೆ ಎದುರಾಗುತ್ತಿದೆ. ಇರುವ ಭೂಮಿಯನ್ನು ಸಂರಕ್ಷಣೆ ಮಾಡಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಪ್ಲಾಸ್ಟಿಕ್ ಬಳಕೆಯಿಂದಾಗಿ ಪರಿಸರದ ಮೇಲಾಗುತ್ತಿರುವ ಹಾನಿ ತಪ್ಪಿಸಲು ನಾನು ಮಂತ್ರಿಯಾದ ಬಳಿಕ ಆಗಸ್ಟ್‌ನಲ್ಲಿ 5 ನಗರಗಳನ್ನು ಪ್ಲಾಸ್ಟಿಕ್ ಮುಕ್ತ ಎಂದು ಘೋಷಣೆ ಮಾಡಲಾಗಿದ್ದು, ಆ ಪೈಕಿ ಮೈಸೂರು ನಗರವನ್ನೂ ಪ್ಲಾಸ್ಟಿಕ್ ಮುಕ್ತವೆಂದು ಘೋಷಿಸಲಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಪ್ಲಾಸ್ಟಿಕ್ ತ್ಯಜಿಸುವ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದರು.

ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ರಾಜ್ಯಕ್ಕೆ ಬರಬೇಕಾದ ಹಣವನ್ನು ಕೇಂದ್ರ ಸರ್ಕಾರ ನೀಡದ ಕಾರಣ ದೆಹಲಿಯಲ್ಲಿ ಕಾಂಗ್ರೆಸ್ ಪ್ರತಿಭಟನೆಗೆ ಮುಂದಾಯಿತು. ಆದರೆ ಈ ಬಗ್ಗೆ ವಿಪಕ್ಷಗಳು ತಪ್ಪು ಅರ್ಥ ಕಲ್ಪಿಸಿ ದೇಶ ವಿಭಜಿಸುವಂತ, ಒಕ್ಕೂಟ ಒಡೆಯುವಂತಹ ಕೆಲಸ ಮಾಡುತ್ತಿದೆ. ಜೊತೆಗೆ ಇದು ಚುನಾವಣಾ ಗಿಮಿಕ್ ಎಂದು ಟೀಕಿಸುತ್ತಿದ್ದಾರೆ. ವಾಸ್ತವದಲ್ಲಿ ರಾಜ್ಯ ದಿಂದ ಸಂಗ್ರಹವಾದ ತೆರಿಗೆ ಹಣದಲ್ಲಿ ರಾಜ್ಯದ ಪಾಲನ್ನು ನೀಡುವಂತೆ ಪ್ರತಿಭಟನೆ ನಡೆಸಲಾಗಿದೆ. ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷವಾಗಿದ್ದು ಯಾವುದೇ ಕಾರಣಕ್ಕೂ ದೇಶ ವಿಭಜಿಸುವ ಕೆಲಸ ಮಾಡುವುದಿಲ್ಲ ಎಂದರು.

ಸುತ್ತೂರು ಮಠ ಆಧ್ಯಾತ್ಮಿಕ, ಧಾರ್ಮಿಕ ಸಂಸ್ಕಾರದ ಜೊತೆಗೆ ಶಿಕ್ಷಣ, ವಸತಿ ಒದಗಿಸಿ ಜ್ಞಾನ ದಾಸೋಹ ನೀಡುವ ಜೊತೆಗೆ ಉದ್ಯೋಗಾವಕಾಶ ಕಲ್ಪಿಸಿದೆ. ಬಸವಣ್ಣನವರ ಸಾಮಾಜಿಕ ಕ್ರಾಂತಿಯಿಂದ ಪ್ರೇರಣೆಗೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಬಸವಣ್ಣ ಅವರನ್ನು ವಿಶ್ವಗುರು, ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದಾರೆ ಎಂದರು.

ಶಾಸಕ ನರೇಂದ್ರ ಮಾತನಾಡಿದರು. ಸಮಾರಂಭದಲ್ಲಿ ಸುತ್ತೂರು ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ದೇವನೂರು ಮಠದ ಮಹಾಂತ ಸ್ವಾಮೀಜಿ, ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನ ತೀರ್ಥ ಪಾದಂಗಳವರು ಶುಭ ಸಂದೇಶ ನೀಡಿದರು. ಶಾಸಕ ದೇವೇಂದ್ರಪ್ಪ ಶಾಸಕರಾದ ಗಣೇಶ್ ಪ್ರಸಾದ್, ಗುರುದೇವ್, ಮಾಜಿ ಶಾಸಕಿ ಪರಿಮಳ ನಾಗಪ್ಪ ಮಾಜಿ ಸಚಿವೆ ಗೀತಾ ಮಹದೇವ ಪ್ರಸಾದ್ ಸೇರಿದಂತೆ ಹಲವರಿದ್ದರು.

ಶಾಲಾ ಮಿನಿ ಬಸ್‌ಗೆ ನೀರಿನ ಟ್ಯಾಂಕರ್ ಡಿಕ್ಕಿ: 7 ಮಕ್ಕಳಿಗೆ ಗಾಯ

ಭೇರ್ಯ, ಫೆ.10– ನೀರಿನ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಖಾಸಗಿ ಶಾಲೆಯ ಮಿನಿ ಬಸ್ ಉರುಳಿ 7 ಮಕ್ಕಳು ಗಾಯಗೊಂಡಿರುವ ಘಟನೆ ಸಾಲಿಗ್ರಾಮ–ಭೇರ್ಯ ಹೆದ್ದಾರಿಯ ಕುರುಬಹಳ್ಳಿ ಗೇಟ್‌ನಲ್ಲಿ ನಡೆದಿದೆ.


ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಸಿಇಟಿ ಶಾಲೆಗೆ ಸೇರಿದ ಮಿನಿ ಉರುಳಿ ಬಿದ್ದಿರುವುದು.

ಭೇರ್ಯ ಗ್ರಾಮದಿಂದ ಸಾಲಿಗ್ರಾಮಕ್ಕೆ ತೆರಳುತ್ತಿದ್ದ ನೀರಿನ ಟ್ಯಾಂಕರ್, ಕುರುಬನಹಳ್ಳಿ ಗ್ರಾಮದಿಂದ ಶಾಲಾ ಮಕ್ಕಳನ್ನು ಮಿರ್ಲೆ ಗ್ರಾಮಕ್ಕೆ ಕರೆದೊಯ್ಯುತ್ತಿದ್ದ ಶಾಲಾ ಮಿನಿ ಬಸ್‌ಗೆ ಕುರುಬಹಳ್ಳಿ ಗೇಟ್ ಬಳಿ ಡಿಕ್ಕಿ ಹೊಡೆದಿದೆ. ಪರಿಣಾಮ ಶಾಲಾ ಮಿನಿ ಬಸ್ ಉರುಳಿ ಬಿದ್ದಿದ್ದು, ಬಸ್‌ನಲ್ಲಿದ್ದ ಮಕ್ಕಳ ಪೈಕಿ 15 ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದು, 7 ಮಕ್ಕಳು ಗಾಯಗೊಂಡಿದ್ದಾರೆ. ತಕ್ಷಣ ಮಕ್ಕಳನ್ನು ಸ್ಥಳೀಯರು ಹಾಗೂ ಸಾಲಿಗ್ರಾಮ ಠಾಣೆ ಇನ್ಸ್‌ಪೆಕ್ಟರ್ ಕೃಷ್ಣರಾಜು ಸಾಲಿಗ್ರಾಮ ಆರೋಗ್ಯ ಕೇಂದ್ರಕ್ಕೆ ರವಾನಿಸಿ ಚಿಕಿತ್ಸೆ ಕೊಡಿಸಿದರು. ಈ ಪೈಕಿ ಶಾಲೆಯ ವಿದ್ಯಾರ್ಥಿಗಳಾದ ದೀಕ್ಷಾ, ತೇಜಸ್ ಹಾಗೂ ಸಂಗೀತಾಳನ್ನು, ಕೆ.ಆರ್.ನಗರ ತಾಲೂಕು ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಈ ಸಂಬಂಧ ಸಾಲಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕರಿಂದ ಮಕ್ಕಳಿಗೆ ಸಾಂತ್ವನ: ಅಪಘಾತದ ಸುದ್ದಿ ತಿಳಿದು ಕೆ.ಆರ್.ಆಸ್ಪತ್ರೆ ತಾಲೂಕು ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಡಿ.ರವಿಶಂಕರ್ ಗಾಯಗೊಂಡ ಮಕ್ಕಳಿಗೆ ಸಾಂತ್ವನ ಹೇಳಿದರು. ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು, ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ನವೀನ್, ಬಿಇಓ ಆರ್.ಕೃಷ್ಣಪ್ಪ, ಇಸಿಓ ದಾಸಪ್ಪ ಇನ್ನಿತರರಿದ್ದರು.

ಕೃಷಿ ಕ್ಷೇತ್ರದ ಬಗ್ಗೆ ಸರ್ಕಾರಗಳ ನಿಲುವು ಬದಲಾಗಬೇಕಿದೆ

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ

ನಂಜನಗೂಡು, ಫೆ.10– ಕೃಷಿ ಕ್ಷೇತ್ರದ ಬಗ್ಗೆ ರಾಜ್ಯ ಮತ್ತು ಕೇಂದ್ರದ ನಿಲುವು ಬದಲಾಗಬೇಕಿದೆ. ರೈತರ ಬದುಕು ಹಸನಾಗಲು ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿದರೆ ಸಾಲದು ನ್ಯಾಯಯುತ ಬೆಲೆ ಕೊಡಲು ರಾಜ್ಯ ಮತ್ತು ಕೇಂದ್ರ ಸರ್ಕಾರ ಕ್ರಮ ವಹಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ತಿಳಿಸಿದರು.

ಸುತ್ತೂರಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಕೃಷಿ ವಿಚಾರ ಸಂಕಿರಣದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿಕರೇ ರಾಷ್ಟ್ರದ ಬೆನ್ನೆಲುಬು. ಜಗತ್ತಿಗೆ ಮೊದಲು ಹತ್ತಿ ಬೆಳೆ ಪರಿಚಯಿಸಿದ್ದು ಭಾರತ ದೇಶ. ಯಾವುದೇ ರಾಷ್ಟ್ರದ ಶಕ್ತಿಯನ್ನು ಕೃಷಿಯಿಂದ ಅಳೆಯಬಹುದಾಗಿದೆ. 2008ರಲ್ಲಿ ಆರ್ಥಿಕ ಕುಸಿತ ಉಂಟಾಗಿ ಜಗತ್ತಿನ ಎಲ್ಲಾ ರಾಷ್ಟ್ರಗಳ ಆರ್ಥಿಕತೆ ಬುಡ ಮೇಲಾದರೂ ರೈತರ ಪರಿಶ್ರಮದಿಂದ ಭಾರತ ತಲೆ ಎತ್ತಿ ನಿಲ್ಲಲು ಕಾರಣವಾಗಿದೆ. ಆದ್ದರಿಂದ ರೈತರಿಗೆ ಶಕ್ತಿ ತುಂಬುವ ಕಾರ್ಯಕ್ರಮಗಳನ್ನು ಸರ್ಕಾರಗಳು ರೂಪಿಸಬೇಕಿದೆ ಎಂದರು.

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಮಾತನಾಡಿ, ಕೃಷಿ ಅನುತ್ಪಾದಕ ವಲಯ ಎಂದು ಗ್ರಾಮ ತೊರೆದು ವಲಸೆ ಹೋಗುತ್ತಿರುವ ಸಂದರ್ಭ ಸುತ್ತೂರು ಮಠ ಜಾತ್ರಾ ಮಹೋತ್ಸವದ ಮೂಲಕ ರೈತರ ಬದುಕಿಗೆ ಹೊಸ ಆಯಾಮ ಕೊಡುವ ಪ್ರಯತ್ನ ನಡೆಸಿದೆ. ಪ್ರೀತಿ, ವಿಶ್ವಾಸ, ಸಂಸ್ಕೃತಿ, ಸಂಸ್ಕಾರ ಸಮಾಜದ ಆಧಾರ ಸ್ಥಂಬಗಳು ಅದಕ್ಕೆ ಬಲ ತುಂಬುವ ಕೆಲಸವನ್ನು ಧಾರ್ಮಿಕ ಸಂಸ್ಥೆಗಳು, ಮಠ ಮಾನ್ಯಗಳು ಮಾಡುತ್ತಿವೆ ಎಂದರು.

ಉಚಿತ ಯೋಜನೆ ನಿಲ್ಲಿಸಿ ರೈತರಿಗೆ ಸಬ್ಸಿಡಿ ನೀಡಿ: ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಮಾತನಾಡಿ, ಯಾವ ಸರ್ಕಾರಗಳಿಗೂ ರೈತಪರ ಕಾಳಜಿ ಇಲ್ಲ. ಯಾವ ಸರ್ಕಾರಗಳೂ ರೈತರ ಆತ್ಮಹತ್ಯೆ ತಡೆಯುವ ಪ್ರಯತ್ನ ಮಾಡಿಲ್ಲ. ರೈತರಿಗೆ ಪ್ರಕೃತಿ ಒಂದು ರೀತಿಯ ತೊಂದರೆ ಕೊಟ್ಟರೆ ಸರ್ಕಾರಗಳು ಸಹ ಒಂದು ರೀತಿ ತೊಂದರೆ ಕೊಡುವ ಮೂಲಕ ರೈತರ ಬೆನ್ನೆಲುಬು ಮುರಿಯುವಂತಹ ಕೆಲಸ ಮಾಡುತ್ತಿವೆ. ಕೃಷಿ ಸಚಿವರಿಗೆ ಸ್ವತಂತ್ರವಾಗಿ ಯೋಚಿಸುವ ಸ್ವಾತಂತ್ರ್ಯವನ್ನು ಸರ್ಕಾರ ನೀಡುತ್ತಿಲ್ಲ. ಐಎಎಸ್ ಅಧಿಕಾರಿಗಳ ಸೂಚನೆಯಂತೆ ಕಾರ್ಯಕ್ರಮ ರೂಪಿಸುವ ಮೂಲಕ ಪುಸ್ತಕ ನೋಡಿ ಅಡುಗೆ ಮಾಡುವ ಸ್ಥಿತಿಗೆ ರೈತರನ್ನು ನಿಲ್ಲಿಸಿದೆ. ನಾನು ಸ್ವತಃ ಪ್ರಗತಿಪರ ರೈತನಾಗಿದ್ದರೂ, ಕೃಷಿಯಲ್ಲಿ ಲಾಭ ಗಳಿಸಲು ಸಾಧ್ಯವಾಗುತ್ತಿಲ್ಲ. ನನ್ನಂತಹವರಿಗೇ ಇಂತಹ ಸ್ಥಿತಿಯಾದರೆ ಬಡ ರೈತರ ಪಾಡೇನು? ಒಂದು ವೇಳೆ ರೈತ ಸಂಕುಲ ನಶಿಸಿ ಹೋದರೆ ದೇಶಕ್ಕೆ ಆಹಾರ ಕೊರತೆ ಕಾಡದೆ ಇರದು. ಸರ್ಕಾರ ಉಚಿತ ಯೋಜನೆಗಳನ್ನು ನೀಡುತ್ತಿರುವ ಕಾರಣ ಕೃಷಿ ಕೆಲಸಕ್ಕೆ ಕೆಲಸಗಾರರು ಸಿಗುತ್ತಿಲ್ಲ. ರೈತರನ್ನು ಉತ್ತೇಜಿಸಲು ಸರ್ಕಾರಗಳು ಪುಕ್ಕಟ್ಟೆ ಯೋಜನೆಗಳಿಗೆ ಖರ್ಚು ಮಾಡುವ ಅನುದಾನವನ್ನು ಕ್ರೋಢೀಕರಿಸಿ ರೈತರಿಗೆ ಸಬ್ಸಿಡಿ ನೀಡುವ ಮೂಲಕ ರೈತರ ಪರವಾಗಿ ನಿಲ್ಲಬೇಕು ಎಂದರು.



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕೃಷಿ ವಿಚಾರ ಸಂಕಿರಣದ ಸಮಾರೋಪ ಸಮಾರಂಭ ನಡೆಯಿತು.

ಚಿತ್ರನಟ ಡಾಲಿ ಧನಂಜಯ ಮಾತನಾಡಿ, ಅಭಿಮಾನಿಗಳ ಶಿಳ್ಳೆ ಕೂಗು ಕೇಳಿ ಖುಷಿಯಾಗುತ್ತದೆ. ಬೆಳ್ಳಿದ್ದಲ್ಲ, ಬೆಳೆದಿದ್ದು. ಅಂಕಲ್‌ನ ಹೊಡಿತೀನಿ ಸುಬ್ಬಿ ಎಂದು ಟಗರು ಸಿನಿಮಾದ ಡೈಲಾಗ್ ಹೇಳಿ ಪ್ರೇಕ್ಷಕರನ್ನು ರಂಜಿಸಿದರಲ್ಲದೆ ಲಕ್ಷಾಂತರ ಜನರಿಗೆ ಊಟ, ವಸತಿ ನೀಡಿ ಶಿಕ್ಷಣ ನೀಡುವ ಮೂಲಕ ಎಷ್ಟೋ ಜನರ ಬದುಕಿಗೆ ಸುತ್ತೂರು ಶ್ರೀಗಳು ಬೆಳಕಾಗಿದ್ದಾರೆ. ಡಾ.ಅಬ್ದುಲ್ ಕಲಾಂ, ಸಿದ್ದೇಶ್ವರ ಶ್ರೀಗಳನ್ನು ನಾನು ಹತ್ತಿರದಿಂದ ನೋಡಲು ಸಹಾಯವಾಗಿದ್ದು ಸುತ್ತೂರು ಸಂಸ್ಥೆಯಿಂದ. ನಾವು ಮನುಷ್ಯರು ತಪ್ಪು ಮಾಡುವುದು ಸಹಜ. ನಮ್ಮನ್ನು ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿಯವರಂತಹ ನಿಜ ಗುರುಗಳು ಮುನ್ನಡೆಸುತ್ತಾರೆ ಎಂಬ ಧೈರ್ಯವಿದೆ. ನಮ್ಮ ಕಾಲದಲ್ಲಿ ಇಂತಹ ಶ್ರೀಗಳಿರುವುದು ನಮ್ಮೆಲ್ಲರ ಪುಣ್ಯ ಎಂದರು.

ಚಿತ್ರನಟ ಎನ್.ಎಸ್.ನಾಗಭೂಷಣ್ ಮಾತನಾಡಿ, ನಮ್ಮ ಊರು ಸುತ್ತೂರು ಸಮೀಪದ ನಗರ್ಲೆ. ನಾನು ಚಿಕ್ಕವನಿದ್ದಾಗ ಪ್ರತಿ ಅಮಾವ್ಯಾಸೆಗೆ ಶ್ರೀಕ್ಷೇತ್ರಕ್ಕೆ ಬರುತ್ತಿದ್ದೆ. ನಾನು ಜೆಎಸ್‌ಎಸ್ ಸಂಸ್ಥೆಯಲ್ಲಿ ಶಿಕ್ಷಣ ಪಡೆದವನು. ನಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಜೆಎಸ್‌ಎಸ್ ಸಂಸ್ಥೆಗಳಿಲ್ಲದಿದ್ದರೆ ನಮಗೆ ಶಿಕ್ಷಣ ದೊರಕುತ್ತಿರಲಿಲ್ಲ. ಈ ಭಾಗದಲ್ಲಿ ಸ್ಥಳೀಯ ಜನರಿಗೆ ಶಿಕ್ಷಣ ಒದಗಿಸುವ ಮೂಲಕ ಕ್ರಾಂತಿ ಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ರೈತರಿಗೆ ಪ್ರಶಸ್ತಿ ವಿತರಿಸಲಾಯಿತು. ಸುತ್ತೂರು ಶ್ರೀಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯರಾದ ಅಡಗೂರು ವಿಶ್ವನಾಥ್, ಮರಿತಿಬ್ಬೇಗೌಡ, ಡಿ.ತಿಮ್ಮಯ್ಯ, ಮಾಜಿ ಸಚಿವ ಎಂ.ಶಿವಣ್ಣ, ಶಾಸಕರಾದ ಜಿ.ಡಿ.ಹರೀಶ್‌ಗೌಡ, ರಮೇಶ್ ಬಂಡಿಸಿದ್ದೇಗೌಡ, ಹರೀಶ್‌ಗೌಡ, ಪಿ.ರವಿಕುಮಾರ್‌ಗೌಡ, ರಿಜ್ವಾನ್ ಹರ್ಷದ್, ಹೆಚ್.ಡಿ.ತಮ್ಮಯ್ಯ, ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಅಲೋಕ್ ಕುಮಾರ್, ಐಸಿಎಆರ್ ಅಟಾರಿ ಸಂಸ್ಥೆ ನಿರ್ದೇಶಕ ವಿ.ವೆಂಕಟ ಸುಬ್ರಮಣಿಯನ್, ಗುರುದೇವ ನಾರಾಯಣ್, ಪ್ರಗತಿಪರ ರೈತ ಹೆಚ್.ಕೆ.ಮಂಜುನಾಥ್ ಉಪಸ್ಥಿತರಿದ್ದರು.

> ಯಾವುದೇ ರಾಷ್ಟ್ರದಲ್ಲಿ ಕೃಷಿಯಲ್ಲಿ ಹಿನ್ನೆಡೆಯಾದರೆ ಆರ್ಥಿಕ ಸ್ಥಿತಿಯೂ ಹಿನ್ನೆಡೆಯಾಗುತ್ತದೆ. ಶೇ.70ರಷ್ಟು ಕೃಷಿ ಅವಲಂಬಿಸಿರುವ ಭಾರತ ದೇಶ ಆರ್ಥಿಕತೆಯಲ್ಲಿ ಇನ್ನಷ್ಟು ಬಲಗೊಳ್ಳಬೇಕಾದರೆ ರೈತರು ಕೃಷಿ ಸಂಶೋಧನಾ ಕೇಂದ್ರಗಳಿಂದ ತರಬೇತಿ ಪಡೆದು ಸಮಗ್ರ ಕೃಷಿ ಪದ್ಧತಿ ಅನುಸರಿಸಬೇಕು. ಅಲ್ಲದೆ ರೈತರ ಬೆಳೆಗಳನ್ನು ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ನಿರ್ಮಿಸಿಕೊಳ್ಳಬೇಕು. ಸುತ್ತೂರು ಸ್ವಾಮೀಜಿಗಳು ರೈತ ಸಂಶೋಧನಾ ಕೇಂದ್ರಗಳ ಮೂಲಕ ನೆರವು ನೀಡುವುದಲ್ಲದೆ ಜಾತ್ರಾ ಮಹೋತ್ಸವದಲ್ಲಿ ಮಾದರಿಗಳನ್ನು ತೋರಿಸಿ ಕೃಷಿಗೆ ಒತ್ತು ನೀಡುವ ಜೊತೆಗೆ ರೈತರಿಗೆ ನೆರವಾಗಿದ್ದಾರೆ.
>
> **-ಚಲುವರಾಯಸ್ವಾಮಿ,** ಕೃಷಿ ಸಚಿವ.

ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಸಾಧನೆ ಮಾಡಿ

ಮಂಡ್ಯ ಉಪ ನಿರ್ದೇಶಕ ಚೆಲುವಯ್ಯ ಸಲಹೆ


ಹುಣಸೂರಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಟಗಾರರಿಗೆ ಪ್ರಶಸ್ತಿ ವಿತರಿಸಲಾಯಿತು

ಹುಣಸೂರು, ಫೆ.10– ವಿದ್ಯಾರ್ಥಿಗಳು ಗುರು ಹಿರಿಯರನ್ನು ಗೌರವಿಸಬೇಕು. ಒಳ್ಳೆಯ ಗೆಳೆಯರನ್ನು ಸಂಪಾದಿಸಿ, ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಉತ್ತಮ ಶಿಕ್ಷಣ ಪಡೆದು ಸಾಧನೆ ಮಾಡಬೇಕು ಎಂದು ಮಂಡ್ಯ ಉಪ ನಿರ್ದೇಶಕ ಚೆಲುವಯ್ಯ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಉತ್ತಮ ಗೆಳೆಯರನ್ನು ಪಡೆದು, ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಉತ್ತಮ ಜ್ಞಾನ ಪಡೆದರೆ ಮಾತ್ರ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ. ವಿದ್ಯಾರ್ಥಿಗಳು ಕ್ರೀಡೆ ಜೊತೆಗೆ ಓದಿನ ಕಡೆಗೂ ಗಮನ ಹರಿಸಬೇಕು ಎಂದರು.

ಇದೇ ವೇಳೆ ರಾಜ್ಯ ಮಟ್ಟದ ಕಬಡ್ಡಿ ಆಟಗಾರ್ತಿ ದಿವ್ಯಾ, ಜಿಲ್ಲಾ ಮಟ್ಟದ ಆಟಗಾರರಾದ ಸ್ಫೂರ್ತಿ, ಕವನ ಅವರನ್ನು ಅಭಿನಂದಿಸಲಾಯಿತು. ಅಲ್ಲದೇ ಹಿರಿಯ ಉಪನ್ಯಾಸಕರಾದ ಭಯಣ್ಣ, ಚನ್ನಬಸವಯ್ಯ ಅವರನ್ನು ಸನ್ಮಾನಿಸಲಾಯಿತು.

ಚಿತ್ರನಟ, ಹಾಸ್ಯ ಕಲಾವಿದ ಮಿಮಿಕ್ರಿ ಗೋಪಿ ಅವರ ಹಾಸ್ಯ ಎಲ್ಲರನ್ನು ನಗೆಗಡಲಲ್ಲಿ ಮುಳುಗಿಸಿತು. ಇದೇ ವೇಳೆ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ವಿದ್ಯಾರ್ಥಿಗಳು ಬೀಳ್ಕೊಡುಗೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ರಾಮೇಗೌಡರು, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಶ್ರೀನಿವಾಸ್, ಸದಸ್ಯರಾದ ವೀರಭದ್ರಪ್ಪ, ಕೆಂಪೇಗೌಡ, ಶಿವಕುಮಾರ್, ಮಮತಾ, ಅಶೋಕ್, ನಟ ಕುಮಾರ ಅರಸೇಗೌಡ, ಉಪನ್ಯಾಸಕರಾದ ರಾಜೇಶ್, ಶಾಂತಕುಮಾರಿ ಸೇರಿದಂತೆ ಇನ್ನಿತರರಿದ್ದರು.

KFCC

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ರಿ)
ನಂ.28, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

ಮೈಸೂರು ನಿವೇಶನ ಮಾರಾಟ
ಆಸ್ತಿಯ ವಿವರ

ವಿಳಾಸ: ನಂ 44, ಜಯಲಕ್ಷ್ಮಿಪುರಂ, 3ನೇ ಬ್ಲಾಕ್, ಮೈಸೂರು
ಭೂಮಿಯ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 45.75 ಮೀಟರ್ ಉತ್ತರದಿಂದ ದಕ್ಷಿಣಕ್ಕೆ 30.00+34.50/2ಮೀಟರ್ ಅಳತೆಯ ಒಟ್ಟು 1475.43 ಚದರ ಮೀಟರ್ (16340 ಚ.ಅಡಿ) ನಿವೇಶನ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಎನ್.ಎಂ. ಸುರೇಶ್ - ಅಧ್ಯಕ್ಷರು
(ಮೊ.98448 42555)
ಜಿ.ಕೆ.ಜಯಸಿಂಹ ಮುಸುರಿ - ಖಜಾಂಚಿ
(ಮೊ.99008 15008)
ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ
email : karnatakafilmhouse@yahoo.com
Phone : 080-22265370 / 71



ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಪಿ. ಗೋವಿಂದರಾಜು

ಮಾಜಿ ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಉದ್ಯಮಿ
ನಿಧನ: 31.01.2024

ಶ್ರೀಮತಿ ರತ್ನಮ್ಮ

ನಂ. 452/453, ಬಂಗಾರಗಿರಿ ನಿವಾಸ, ಸನ್ಮಾರ್ಗ, ಸಿದ್ದಾರ್ಥ ಲೇಔಟ್, ಮೈಸೂರು. ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ: 31-01-2024 ಬುಧವಾರ ನನ್ನ ಪೂಜ್ಯ ಪತಿಯವರಾದ

ಶ್ರೀ ಪಿ. ಗೋವಿಂದರಾಜುರವರು

ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 11-02-2024 ಭಾನುವಾರ ಬೆಳಗ್ಗೆ 10.30 ಗಂಟೆಗೆ ರಂಗಚಾರಿಹುಂಡಿ ತೋಟದ ಮನೆ, ಮೈಸೂರು ಬನ್ನೂರು ರಸ್ತೆ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಅಧಿಕೃತ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು : ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

ಪ್ರಸಾದ : ಮಧ್ಯಾಹ್ನ 12.30 ಗಂಟೆಗೆ